ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ * ಸೆಪ್ಟೆಂಬರ್ 11, 1988 * ಸಂಪುಟ 10 * ಸಂಚಿಕೆ 37 * ರೂ. 1-00

ಒಳ ಪುಟಗಳಲ್ಲಿ

* ಕಲ್ಕತ್ತೆಯಿಂದ ತಿರುವನಂತಪುರದ ವರೆಗೆ
* ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳ ಮಸೂದೆ—ವಿಶ್ಲೇಷಣೆ
* ವಿದೇಶ ನೀತಿ—ಜೇತ್ಮಲಾನಿಗೆ ಉತ್ತರ
* ಬರ್ಮಾದಲ್ಲಿ ಪ್ರಜಾಸತ್ತೆಗಾಗಿ ಉತ್ಕ್ರಾಂತಿ
* ಭೂಕಂಪ ಪೀಡಿತ ಪ್ರದೇಶಕ್ಕೆ ಇ.ಎಂ.ಎಸ್. ಭೇಟಿ

12ನೇ ಸಮ್ಮೇಳನದ ರಾಜಕೀಯ ವಿಶ್ಲೇಷಣೆ
13 ನೇ ಸಮ್ಮೇಳನದತ್ತ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕರ್ನಾಟಕ ರಾಜ್ಯ ಸಮಿತಿಯ ಹನ್ನೆರಡನೆಯ ಸಮ್ಮೇಳನ ಕೋಲಾರ ಜಿಲ್ಲೆಯ ಕಾರ್ಮಿಕ ಕೇಂದ್ರವಾದ, ಚಿರ ಸ್ಮರಣೀಯ ಕಾರ್ಮಿಕ ಹೋರಾಟದ ಕಾರ್ಮಿಕರ ಹಕ್ಕಿಗಾಗಿ ಹೋರಾಡಿ ಜೀವತೆತ್ತ, ಹುತಾತ್ಮರ ನೆಲೆಬೀಡಾದ ಕೋಲಾರದ ಚಿನ್ನದ ಗಣಿಯಲ್ಲಿ (ಕೆ.ಜಿ.ಎಫ್.) ನಲ್ಲಿ 1985 ಅಕ್ಟೋಬರ 18 ರಿಂದ 25 ರವರೆಗೆ ನಡೆದಿತ್ತು.

ಪಕ್ಷದ ಕಾರ್ಯಕ್ರಮ, ಪಕ್ಷದ ಅಂದಿನ ರಾಜಕೀಯ ಧೋರಣೆ ಮತ್ತು ಆಗಿಂದಾಗ್ಗೆ ಕೇಂದ್ರ ಸಮಿತಿ ಕೈಗೊಂಡ ಗೊತ್ತುವಳಿಗಳು ಹಾಗೂ ಅದು ಕೊಟ್ಟ ನಿರ್ದೇಶನಗಳ ಆಧಾರದಲ್ಲಿ, ಕರ್ನಾಟಕದ ವಿಶಿಷ್ಟ ಆರ್ಥಿಕ-ಸಾಮಾಜಿಕ, ರಾಜಕೀಯ, ಪರಿಸ್ಥಿತಿಯಲ್ಲಿ ಪಕ್ಷದ ಪ್ರಸ್ತುತ ಧೋರಣೆ ನಮ್ಮ ರಾಜ್ಯದಲ್ಲಿ ಹೇಗೆ ಕಾರ್ಯಗತವಾಗಿದೆ, ಪಕ್ಷದ ರಾಜಕೀಯ, ಸಂಘಟನಾಶಕ್ತಿ ಮತ್ತು ಪ್ರಭಾವ ಎಷ್ಟು ಸಮರ್ಥವಾಗಿ ಬೆಳೆದಿದೆ ಎಂಬುದನ್ನು ಅಂದಾಜು ಮಾಡಿ ಆ ಸಮ್ಮೇಳನ ಪಕ್ಷದ, ಸಾಮೂಹಿಕ ಸಂಘಟನೆಗಳ ಮುನ್ನಡೆಗೆ ಯೋಜನೆ ಹಾಕಿತ್ತು.

12ನೆಯ ಸಮ್ಮೇಳನ ಸ್ವೀಕರಿಸಿದ ವರದಿ 'ಸ್ವಾತಂತ್ರ್ಯ ನಂತರ ಸತತವಾಗಿ ಕರ್ನಾಟಕ ರಾಜ್ಯದಲ್ಲಿ ರಾಜ್ಯಭಾರ ಮಾಡುತ್ತಾ ಬಂದ ಸರ್ವಾಧಿಕಾರಿ ಕಾಂಗ್ರೆಸ್(ಐ) ನ್ನು ಕರ್ನಾಟಕದ ಜನತೆ ಪ್ರಪ್ರಥಮವಾಗಿ ಅಧಿಕಾರದಿಂದ ಕೆಳಗಿಳಿಸಿ ಕೊನೆಗಾದರೂ ದೇಶದ ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟದ ಪ್ರವಾಹದಲ್ಲಿ ಕರ್ನಾಟಕವೂ ಸೇರುವಂತೆ ಮಾಡಿತು. ಇದು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟದ ಪ್ರವಾಹದಲ್ಲಿ ಕರ್ನಾಟಕವೂ ಸೇರುವಂತೆ ಮಾಡಿತು. ಇದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಿಕ್ಕಿದ ಅಪೂರ್ವವಿಜಯ ಎಂದು ರಾಜ್ಯದ ಬದಲಾದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿತ್ತು. ಸಮ್ಮೇಳನ ಸೇರುವ ಮುಂಚೆ ಅಂದರೆ 1983 ಜನವರಿ 9ರಂದು ರಾಮಕೃಷ್ಣ ಹೆಗಡೆಯವರ ಮುಖಂಡತ್ವದಲ್ಲಿ ಕ್ರಾಂತಿರಂಗದ ಶಾಸಕರನ್ನೊಳಗೊಂಡ ಜನತಾಪಕ್ಷ ಅಧಿಕಾರಕ್ಕೆ ಬಂದಿತ್ತು. ಆಗ ಜನತಾಪಕ್ಷಕ್ಕೆ ನಿಚ್ಚಳ ಬಹುಮತ ಇರಲಿಲ್ಲ. ಆದರೆ 1985 ಮಾರ್ಚ್ ತಿಂಗಳಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಜನತಾ ಪಕ್ಷ 139 ಸ್ಥಾನಗಳಿಸಿ ಸಂಪೂರ್ಣ ಬಹುಮತಪಡೆಯಿತು.

ಎರಡೂ ಕಮ್ಯೂನಿಸ್ಟ್ ಪಕ್ಷಗಳು ಮತ್ತು ಬಿ.ಜೆ.ಪಿ.ಯ ಬೆಂಬಲವನ್ನವಲಂಬಿಸದೆ ಸ್ವತಂತ್ರವಾಗಿಯೇ ಆಡಳಿತ ನಡೆಸುವಷ್ಟು ಶಕ್ತಿ ಜನತಾ ಪಕ್ಷಕ್ಕೆ ಲಭಿಸಿ ಅದರಿಂದಾಗಿ ಜನತಾ ಪಕ್ಷದ ಆಡಳಿತೆಯಲ್ಲಿ ಉಂಟಾಗಬಹುದಾದ ಬದಲಾವಣೆಯನ್ನು ವಿಮರ್ಶಿಸುತ್ತಾ ಸಮ್ಮೇಳನದ ವರದಿ ಈ ರೀತಿ ಮಾರ್ಗ ಸೂಚಿ ನೀಡಿದೆ. "ನಮ್ಮ ಇಬ್ಬರು ಶಾಸಕರುಗಳ ಮೂಲಕ ವಿಧಾನಸಭೆಯಲ್ಲಿ ನಮ್ಮ ಪಕ್ಷದ ಧೋರಣೆಗಳಿಗನುಸಾರವಾಗಿ ಹೋರಾಟ ನಡೆಸುವಾಗಲೇ, ಸ್ಥಾಪಿತ ಹಿತಾಸಕ್ತಿಗಳ ಒತ್ತಡಕ್ಕೆ ಬಲಿಯಾಗಿ ಅಧಿಕಾರದಲ್ಲಿ ಬಂಡವಾಳಶಾಹಿ-ಭೂಮಾಲಿಕ ವರ್ಗಗಳ ಜನತಾ ಸರ್ಕಾರದ ನಿಲುವುಗಳನ್ನು ಬಹಿರಂಗಗೊಳಿಸುವಾಗಲೇ, ಹೊರಗಡೆ ನಮ್ಮ ಪಕ್ಷದ ಘಟಕಗಳ ಮತ್ತು ಸಾಮೂಹಿಕ

ಎನ್. ಕೆ. ಉಪಾಧ್ಯಾಯ

ಸಂಘಟನೆಗಳ ನೇತೃತ್ವದಲ್ಲಿ ಜನಸಾಮಾನ್ಯರನ್ನು ಭಾಧಿಸುತ್ತಿರುವ ಪ್ರಶ್ನೆಗಳನ್ನು ಎತ್ತಿ ಸರಕಾರದ ಜನವಿರೋಧಿ ಕ್ರಮಗಳನ್ನು ವಿರೋಧಿಸಿ ಸಾಮೂಹಿಕ ಪ್ರಕ್ಷೋಭೆ, ಚಳುವಳಿ ಮತ್ತು ಹೋರಾಟಗಳನ್ನು ಮಾಡಲು ನಿರ್ದಿಷ್ಟ ಕ್ರಮಗಳನ್ನು ವಹಿಸಬೇಕು. 1983ರಲ್ಲಿ ಅಧಿಕಾರಕ್ಕೆ ಬಂದ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾಪಕ್ಷದ ಸರಕಾರಕ್ಕೆ ಈಗ 1985ರಲ್ಲಿ ಪುನಃ 139 ಸ್ಥಾನಗಳನ್ನು ಪಡೆದು ಅಧಿಕಾರಕ್ಕೇರಿದ ಜನತಾ ಪಕ್ಷದ ಸರಕಾರಕ್ಕೂ ಗುಣದಲ್ಲಿ ಬಹಳ ವ್ಯತ್ಯಾಸವಿದೆ ಎಂಬುದನ್ನು ತಿಳಿದು ಪಕ್ಷವು ಕಾರ್ಯತತ್ಪರವಾಗಬೇಕು."

ರಾಜ್ಯದ ರಾಜಕೀಯದಲ್ಲಾದ ಬದಲಾವಣೆಯನ್ನು ಅರ್ಥೈಸಿಕೊಂಡು ಮಾರ್ಗ ಸೂಚಿಯನ್ನು ಎಷ್ಟರ ಮಟ್ಟಿಗೆ ಅನುಷ್ಠಾನದಲ್ಲಿ ತರಲು ಸಾಧ್ಯವಾಗಿದೆಂಬುದನ್ನು 13ನೇ ಸಮ್ಮೇಳನದಲ್ಲಿ ವಿಮರ್ಶಿಸಬೇಕಾಗಿದೆ.

ಇದರ ಜೊತೆಯಲ್ಲಿಯೇ ವರದಿಯಲ್ಲಿ ಹೇಳಿದಂತೆ "ಇಂದಿನ ದೇಶದ ರಾಜಕೀಯದಲ್ಲಿ ವಿಶಾಲ ಪ್ರಜಾಪ್ರಭುತ್ವ ಚಳುವಳಿ ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಕೂಟವನ್ನು ಬೆಳೆಸುವ ದೃಷ್ಟಿಯಿಂದ ಜನತಾ ಪಕ್ಷದ

(8ನೇ ಪುಟಕ್ಕೆ)

ರಾಜ್ಯದಲ್ಲಿ ಪಿಕೆಟಿಂಗ್-25000 ರೈತರ ಬಂಧನ

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ರಾಜ್ಯ ಕೃಷಿ ಕೂಲಿಗಾರ ಸಂಘಗಳು ರಾಜ್ಯ ಮಟ್ಟದಲ್ಲಿ ಸೆಪ್ಟೆಂಬರ್ ರೈತ ಚಳುವಳಿಯ ಸಮನ್ವಯ ಸಮಿತಿ ರಚಿಸಿ ಸೆಪ್ಟೆಂಬರ್ 1ರಿಂದ 15ರ ವರೆವಿಗೆ ನಡೆಯುವ ಅಖಿಲ ಭಾರತ ಮಟ್ಟದ ರೈತ ಚಳುವಳಿಯನ್ನು ಯಶಸ್ವಿಗೊಳಿಸಲು ಜಂಟಿಯಾಗಿ ನೀಡಿದ ಕರೆಯಂತೆ ಕರ್ನಾಟಕ ರಾಜ್ಯದಾದ್ಯಂತ ಅಭೂತ ಪೂರ್ವ ಯಶಸ್ವಿಯಾಗಿದೆ. ಬಗುರ್ ಹುಕುಂ ಸಾಗುವಳಿ ರೈತರ ಪ್ರಶ್ನೆ, ಭೂಸುಧಾರಣೆ ಜಾರಿ, ಕನಿಷ್ಟ ಕೂಲಿ, ರೈತರ ಸಾಲ ಮನ್ನಾ, ಬೆಳೆಗೆ ಲಾಭದಾಯಕ ಬೆಲೆ, ದಲಿತರು ಮಹಿಳೆಯ ಮೇಲಿನ ಅತ್ಯಾಚಾರ ನಿಲ್ಲಬೇಕು ಮುಂತಾದ ಬೇಡಿಕೆಯಿಟ್ಟು ಸೆಪ್ಟೆಂಬರ್ 1ರಿಂದ 3ರವರೆವಿಗೂ ಎಲ್ಲಾ ತಾಲೋಕು ಕೇಂದ್ರಗಳಲ್ಲಿ ಧರಣಿ, ಮತ ಪ್ರತದಪ್ರದರ್ಶನದ ಮೂಲಕ ಪ್ರಾರಂಭಗೊಂಡ ಚಳುವಳಿ ಸೆ. 5 ರಿಂದ 19 ಜಿಲ್ಲೆಗಳ 102 ತಾಲೋಕುಗಳಲ್ಲಿ ರಸ್ತೆ ತಡೆ, ತಾಲೋಕು ಕಛೇರಿ, ಜಿಲ್ಲಾ ಕಛೇರಿ ಪಿಕೆಟಿಂಗ್ ಘೇರಾವೋ ಚಳುವಳಿಯಲ್ಲಿ ಸುಮಾರು 75 ಸಹಸ್ರ ರೈತರು ಪಾಲ್ಗೊಂಡು 25 ಸಾವಿರ ಬಂಧನಕ್ಕೊಳಗಾಗಿದ್ದಾರೆ. ಬಿಜಾಪುರ, ಕೋಲಾರ, ರಾಯಚೂರು ಜಿಲ್ಲೆಗಳ ನೂರಾರು ರೈತರನ್ನು ಬಂಧಿಸಿ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿಡಲಾಗಿದೆ.

ಕೋಲಾರ, ಬಳ್ಳಾರಿ ರಾಯಚೂರು ಗುಲ್ಬರ್ಗಾ, ದ.ಕ. ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚು ರೈತರು ಈ ಚಳುವಳಿಗಳಲ್ಲಿ ಭಾಗವಹಿಸಿ ಬಂಧನಕ್ಕೊಳಗಾಗಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ವಿವಿಧ ಘಟಕಗಳು ಈ ಚಳುವಳಿ ಯಶಸ್ವಿಗೊಳಿಸಲು ಕಾಲ್ನಡಿಗೆ ಜಾಥ, ಜಿಲ್ಲಾ-ತಾಲೋಕು ಮಟ್ಟದ ರೈತರ ಸಮಾವೇಶಗಳು, ಗ್ರಾಮಸಭೆಗಳನ್ನು ನಡೆಸಿ ಸಾವಿರಾರು ಕರಪತ್ರ, ಪೋಸ್ಟರ್‌ಗಳ ಮೂಲಕ ರಾಜ್ಯದೆಲ್ಲೆಡೆ ವ್ಯಾಪಕ ಪ್ರಚಾರ ಕಾರ್ಯವನ್ನು ನಡೆಸಿತು.

(ಜಿಲ್ಲಾವಾರು ವರದಿ 3ನೇ ಪುಟದಲ್ಲಿ)



ಬೆಂಗಳೂರು ತಾಲ್ಲೋಕು ಕಛೇರಿ ಘೇರಾವೋ ಮಾಡಿದ ರೈತರ ಬಂಧನ.

ಮಾನನಷ್ಟ ಮಸೂದೆಗೆ ವ್ಯಾಪಕ ಪ್ರತಿಭಟನೆ

ರಾಜೀವ್ ಸರ್ಕಾರ ವಿರೋಧ ಪಕ್ಷಗಳತ್ತ, ಪ್ರಜಾಪ್ರಭುತ್ವ ಜನಾಭಿಪ್ರಾಯದತ್ತ ಹೊಂದಿರುವ ತೀವ್ರ ಅಸಹನೆ, ರಾಜೀವ್ ಸರ್ಕಾರದ ಸರ್ವಾಧಿಕಾರೀ ಪ್ರವೃತ್ತಿ ಅದು ಮಾನನಷ್ಟ ಮಸೂದೆಯನ್ನು ಸಂಸತ್ತಿನ ಉಭಯಸದನಗಳಲ್ಲಿ ತರಾತುರಿಯಲ್ಲಿ ಮಂಡಿಸಿದ ರೀತಿಯಲ್ಲಿ ಮತ್ತೊಮ್ಮೆ ಬಯಲಿಗೆ ಬಂದಿದೆ. ಒಂದೇ ವಾರದೊಳಗೆ ಹಠಾತ್ತನೆ ತನ್ನ ತುತ್ತೂರಿಗಳಾದ ದೂರದರ್ಶನ ಮತ್ತು ಆಕಾಶವಾಣಿಯ ಕಾರ್ಯಕ್ರಮಗಳನ್ನು ನಿಲ್ಲಿಸಿ ರಾಜ್ಯಸಭೆಯಲ್ಲಿ ಈ ಮಸೂದೆಯ ಬಗ್ಗೆ ಚರ್ಚೆಯನ್ನು ಮುಂದೂಡಿರುವುದಾಗಿ ಸುದ್ದಿ ಬಿತ್ತರಿಸಿ ತನ್ನ ಉದಾರತೆಯನ್ನು ಪ್ರದರ್ಶಿಸುವ ಅದರ ಆಟವೂ ಅಪಹಾಸ್ಯಕ್ಕೀಡಾಗಿರುವುದು ಹೆಚ್ಚೆಚ್ಚು ಜನವಿಭಾಗಗಳು ರಾಜೀವ್ ಸರ್ಕಾರದ ಸರ್ವಾಧಿಕಾರೀ ನೀತಿಗಳ ಬಗ್ಗೆ ಎಚ್ಚೆತ್ತುಕೊಳ್ಳುತ್ತಿವೆ ಎಂಬುದನ್ನು ತೋರಿಸಿಕೊಟ್ಟಿದೆ.

ಸೆಪ್ಟೆಂಬರ್ 6ರಂದು ದೇಶಾದ್ಯಂತ ಪತ್ರಿಕಾ ರಂಗದಲ್ಲಿ ನಡೆದ ಯಶಸ್ವೀ ಮುಷ್ಕರ ಹಾಗೂ ಅದಕ್ಕೆ ವ್ಯಕ್ತಪಟ್ಟ ವ್ಯಾಪಕ ಬೆಂಬಲ ಪತ್ರಕರ್ತರನ್ನೂ ಹಾಗೂ ಜನಸಾಮಾನ್ಯರನ್ನು ಗೊಂದಲದಲ್ಲಿ ಬೀಳಿಸುವ ಕಾಂಗ್ರೆಸ್ (ಐ) ಪ್ರಯತ್ನಗಳಿಗೆ ತಕ್ಕ ಉತ್ತರ ನೀಡಿದೆ. ಮಸೂದೆಯನ್ನು ವಾಪಸ್ಸು ಪಡೆಯುವುದಲ್ಲದೆ ಬೇರೆ ಯಾವ 'ಉದಾರತೆ'ಯೂ ತಮಗೆ ಬೇಕಿಲ್ಲ ಎಂದು ಪತ್ರಿಕಾರಂಗ, ಜನತೆ ಸ್ಪಷ್ಟವಾಗಿ ಹೇಳಿದ್ದಾರೆ.

ಈ ಮಸೂದೆ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಮಾಡಿರುವ ನೇರ ಹಲ್ಲೆ. ಇದನ್ನು ಕಳೆದ ಎರಡು ವರ್ಷಗಳಲ್ಲಿ ಪತ್ರಿಕೆಗಳು ಒಂದರ ಮೇಲೊಂದರಂತೆ ಹಗರಣಗಳನ್ನು, ಅರ್ಥಿಕ ತಪ್ಪಿತಸ್ಥರು ಪ್ರಧಾನಮಂತ್ರಿಗಳ ಅಪ್ತ ವಲಯದಲ್ಲಿ ಇನ್ನೂ ಎಗ್ಗಿಲ್ಲದೆ ಮೆರೆಯುವುದನ್ನು ಬಯಲಿಗೆಳೆಯುತ್ತಿರುವ ಹಿನ್ನೆಲೆಯಲ್ಲಿ

(8ನೇ ಪುಟಕ್ಕೆ)

ರಾಂಜೇಠ್ಮಲಾನಿಗೆ ಉತ್ತರ

ವಿದೇಶಾಂಗ ಸಂಬಂಧ ಕುರಿತಂತೆ 'ರಾಜೀವ ಧೋರಣೆ'ಯೆಂಬುದಿಲ್ಲ

ಜುಲೈ 1 ರಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪರ್ಯಾಯ ರಾಜಕೀಯ ಕಾರ್ಯಕ್ರಮವೊಂದರ ಬಗ್ಗೆ ಕಾ|| ಇ. ಎಂ. ಎಸ್. ರವರ ಲೇಖನ ಪ್ರಕಟವಾಗಿತ್ತು. ಆಗಸ್ಟ್ ಒಂದರಂದು ಇದೇ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಲೇಖನದಲ್ಲಿ ಶ್ರೀಯುತ ರಾಮ್ ಜೇಠ್ಮಲಾನಿ ವಿದೇಶಾಂಗ ನೀತಿ ಬಗ್ಗೆ ಇ.ಎಂ.ಎಸ್ ನಿಲುವಿಗೆ ಅಡ್ಡಿ ವ್ಯಕ್ತಪಡಿಸುತ್ತಾ, 'ಅವರು ರಾಜೀವ್ ಸರ್ಕಾರದ ವಿದೇಶಾಂಗ ನೀತಿಯನ್ನು ಪೂರ್ತಿಯಾಗಿ ಸ್ವೀಕರಿಸಿದ್ದಾರೆ' ಎಂದು ಹೇಳಿ 'ರಾಜೀವ್ ಸರ್ಕಾರ ಸೋವಿಯತ್ ಒಕ್ಕೂಟದ ಹಿತಾಸಕ್ತಿಗಳನ್ನು ಬೆಳೆಸುತ್ತಾ ಇರುವವರೆಗೆ ಕಮ್ಯೂನಿಸ್ಟರು ರಾಜೀವ್ ಸರಕಾರವನ್ನು ಇಳಿಸಲು ಮುಂದಾಗುವುದಿಲ್ಲ. ತಾವೇ ನಂತರ ಅಧಿಕಾರಕ್ಕೆ ಬರುವಂತಿದ್ದರೆ" ಎಂದು ಬರೆದಿದ್ದರು. ಕಾ|| ಇ.ಎಂ.ಎಸ್. ಇದಕ್ಕೆ ನೀಡಿದ ಉತ್ತರವನ್ನು ಮುಂದೆ ಕೊಡಲಾಗಿದೆ.

ವಿದೇಶಾಂಗ ನೀತಿಯ ಬಗ್ಗೆ ನನ್ನ ಲೇಖನದಲ್ಲಿ ನಿಲುವು ಒಪ್ಪದ ರಾಮ್ ಜೇಠ್ಮಲಾನಿ ಅವರಲ್ಲಿ ಮುಂದಿಟ್ಟು ಕಾರ್ಯಕ್ರಮದ ಇತರ ಅಂಶಗಳನ್ನು ಉದಾ : ಪರದೇಶಗಳೊಂದಿಗೆ ಆರ್ಥಿಕ ಸಂಬಂಧ, ಆಂತರಿಕ ಆರ್ಥಿಕತೆ, ರಾಷ್ಟ್ರೀಯ ಐಕ್ಯತೆ ಎಲ್ಲಾ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ-ದೃಢ ಹೋರಾಟ, ಕೇಂದ್ರ ರಾಜ್ಯ ಸಂಬಂಧಗಳು ಇತ್ಯಾದಿಗಳನ್ನು ಒಪ್ಪಿಕೊಳ್ಳುತ್ತಾರೆ ಎಂದು ನಂಬುವಷ್ಟು ನಾನು ಅಮಾಯಕನಲ್ಲ. ಆದರೂ ಪರಸ್ಪರ ಒಪ್ಪಿದ ಧೋರಣೆಯಿಲ್ಲದ ಕಲಸುಮೇಲೋಗರ ಮೈತ್ರಿಕೂಟ 1979 ರಲ್ಲಿ ಜನತಾ ಮುರಿದು ಬಿದ್ದುದಕ್ಕಿಂತಲೂ ಬೇಗನೇ ಅಲ್ಲವಾದರೂ, ಶೀಘ್ರದಲ್ಲೇ ಮುರಿದು ಬೀಳಬಹುದು ಎಂಬ ನನ್ನ ಭಯ ಜೇಠ್ಮಲಾನಿಯವರಿಗೂ ಇದೆ. ಒಳ್ಳೆಯದೇ.

ಆದರೆ ಜೇಠ್ಮಲಾನಿಯವರ ಇದುವರೆಗಿನ ಉದ್ಗಾರಗಳನ್ನೆಲ್ಲಾ (ಪ್ರಸಿದ್ಧ 'ರಾಜೀವ ಗಾಂಧಿಗೆ ದಿನಕ್ಕೆ ಹತ್ತು ಪ್ರಶ್ನೆಗಳು' ಕೂಡಾ ನಾನು ಅರ್ಥಮಾಡಿಕೊಂಡಿರುವುದು ಸರಿಯಾಗಿದ್ದರೆ ನನಗನಿಸುತ್ತದೆ-ಅವರು ಒಂದು ಕಾರ್ಯಕ್ರಮದ ಬಗ್ಗೆ ಎಂದೂ ತಲೆಕೆಡಿಸಿಕೊಂಡೇ ಇಲ್ಲ. ಏನಕೇನ ಪ್ರಕಾರೇಣ ರಾಜೀವಗಾಂಧಿ ಸರ್ಕಾರವನ್ನು ಕೆಳಗಿಳಿಸುವುದಷ್ಟೇ ಅವರ ನಿಲುವಿದ್ದಂತೆ ಕಾಣುತ್ತದೆ. ನಾವಿದನ್ನು ಒಪ್ಪುವುದಿಲ್ಲ ಎಂದಾಗ ಅವರ ಪ್ರಕಾರ ನಾವು ಸೋವಿಯತ್ ಪಕ್ಷದ ನಿರ್ದೇಶನಗಳಂತೆ ನಡೆಯುತ್ತಿದ್ದೇವೆ ಎಂದಾಗುತ್ತದೆ.

ನನ್ನ ಲೇಖನದಲ್ಲಿ ಎಡಪಕ್ಷಗಳ ಸ್ಪಷ್ಟ ದೃಷ್ಟಿಕೋನದ ಬಗ್ಗೆ ಬರೆದಿದ್ದೆ. ನಮ್ಮ ಉದ್ದೇಶ ಮಂತ್ರಿಗಳ ಒಂದು ಪರ್ಯಾಯ ಪಟ್ಟಿ ಕೊಡುವುದು ಮಾತ್ರವೇ ಇಲ್ಲ, ಧೋರಣೆಗಳ ಒಂದು ಪರ್ಯಾಯ ಪಟ್ಟಿಯನ್ನು ಕೂಡಾ. ಕಾಂಗ್ರೆಸ್‌ಗೆ ನಿಜವಾದ ಪರ್ಯಾಯವಾಗಲು ಅವಶ್ಯಕವಾದ ಧೋರಣೆಗಳ ಸ್ಥೂಲ ಸ್ವರೂಪವನ್ನು ನಾನು ಸೂಚಿಸಿದ್ದೆ. ನನ್ನ ಈ ಗೆಳೆಯ ಕೇವಲ ವಿದೇಶಾಂಗ ನೀತಿ ಬಗ್ಗೆಯಷ್ಟೇ ತನ್ನನ್ನು ಮಿತಿಗೊಳಿಸಿಕೊಳ್ಳದೆ ಈ ಎಲ್ಲಾ ಅಂಶಗಳ ಬಗ್ಗೆ ಹೇಳಿದ್ದರೆ ಚೆನ್ನಾಗಿತ್ತು.

ಅದೇನೇ ಇರಲಿ, ಒಂದಂಶವನ್ನು ನಾನು ಜೇಠ್ಮಲಾನಿಯವರ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ವಿದೇಶಾಂಗ ಸಂಬಂಧಗಳ ಬಗ್ಗೆ ರಾಜೀವ್ ಧೋರಣೆ ಎಂಬುದೊಂದು ಇಲ್ಲವೇ ಇಲ್ಲ. ಅದೇನಿದ್ದರೂ ಅವರ ಪೂರ್ವಜರಿಂದ ತಾಯಿ ಮತ್ತು ತಾತನಿಂದ ಅವರಿಗೆ ಪರಂಪರೆಯಿಂದ ಬಂದ ಧೋರಣೆ. ಗಳು ಕೂಡಾ ಸ್ವಾತಂತ್ರ್ಯ ಆಂದೋಲನದಲ್ಲಿ ಕಮ್ಯೂನಿಸ್ಟರು ಹಾಗೂ ಇತರ ವಿಭಾಗಗಳೊಂದಿಗೆ ಕೂಡಿ ಕಾಂಗ್ರೆಸ್ ವಿಶದಪಡಿಸಿದ ವಿದೇಶಾಂಗ ನೀತಿಯ ಮುಂದುವರಿಕೆಯಷ್ಟೆ.

ಭಾರತ ರಾಷ್ಟ್ರೀಯ ಕಾಂಗ್ರೆಸ್ ಜವಾಹರಲಾಲ್ ನೆಹರೂ ರವರ ನೇತೃತ್ವದಲ್ಲಿ ಕಮ್ಯೂನಿಸ್ಟರು, ಸೋಷಲಿಸ್ಟರು ಮತ್ತು ಇತರ ಎಡಪಂಥೀಯರು ಸಕ್ರಿಯರಾಗಿದ್ದ ಒಂದು ಸಾಮ್ರಾಜ್ಯಶಾಹಿ-ವಿರೋಧಿ ಸಂಯುಕ್ತರಂಗವಾಗಿ ತ್ವರಿತವಾಗಿ ಮೂಡಿ ಬರುತ್ತಿದ್ದ 1930 ರ ದಶಕದಲ್ಲಿ ರಾಜಕೀಯ ಪ್ರೌಢತೆ ಗಳಿಸಿಕೊಂಡ ಸ್ವಾತಂತ್ರ್ಯ ಹೋರಾಟಗಾರರ ಪೀಳಿಗೆಗೆ ಸೇರಿದವ ನಾನು. ಯುದ್ಧ, ಫ್ಯಾಸಿಸಂ, ವಸಾಹತುಶಾಹಿ ಮುಂತಾದವುಗಳ ವಿರುದ್ಧ ವಿವಿಧ ಕಾಂಗ್ರೆಸ್ ಅಧಿವೇಶನಗಳಲ್ಲಿ ಅಂಗೀಕರಿಸಿದ ಠರಾವುಗಳು ಇನ್ನೂ ನನ್ನ ನೆನಪಲ್ಲಿ ಹಸಿರಾಗಿವೆ. ಆ ಅವಧಿಯಲ್ಲೇ ಆಗ ಸೈನಿಕಶಾಹೀ ಜಪಾನಿನ ವಿರುದ್ಧ ಹೋರಾಡುತ್ತಿದ್ದ ಚೀಣಾಕ್ಕೆ ಇತರ ರಾಷ್ಟ್ರೀಯ ಕಾಂಗ್ರೆಸ್ ಒಂದು ವೈದ್ಯಕೀಯ ತಂಡ ಕಳಿಸಿತು. ಸ್ಪೇನಿನಲ್ಲಿ ಫ್ಯಾಸಿಸ್ಟ್-ವಿರೋಧಿ ಪ್ರಜಾಪ್ರಭುತ್ವವಾದಿಗಳು ಕೈಯಲ್ಲಿ ಶಸ್ತ್ರ ಹಿಡಿದು ತಮ್ಮ ಚುನಾಯಿತ ಸರಕಾರವನ್ನು ರಕ್ಷಿಸುತ್ತಿದ್ದಾಗ ಜವಾಹರಲಾಲ್ ನೆಹ್ರೂ ಸ್ವತಃ ಅಲ್ಲಿಗೆ ಹೋಗಿದ್ದರು. ಒಟ್ಟಿನಲ್ಲಿ ಹೇಳುವುದಾದರೆ ಭಾರತ ಮತ್ತು ಅದರ ಸ್ವಾತಂತ್ರ್ಯ ಆಂದೋಲನ ಎಲ್ಲಾ ವಸಾಹತುಶಾಹೀ ದೇಶಗಳ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ಚಿಲುಮೆಯಾಗಿತ್ತು.

ಅಂದಿನಿಂದೀಚೆಗೆ ಬಹಳ ಬದಲಾವಣೆಗಳಾಗಿವೆ. ಇವುಗಳನ್ನು ಪರಿಶೀಲಿಸಲು ಹೋಗದೆ ಒಂದಂಶವನ್ನಂತೂ ಹೇಳಬಹುದು-ನೆಹರೂ ಪ್ರಧಾನ ಮಂತ್ರಿಯಾಗಿ 1950 ರ ದಶಕದ ಮಧ್ಯಭಾಗದಲ್ಲಿ 1930 ರ ದಶಕದ ಸ್ಫೂರ್ತಿಯಿಂದ ತಮ್ಮ ಸರಕಾರದ ವಿದೇಶಾಂಗ ನೀತಿಯ ಮರು ನಿರೂಪಣೆ ಮಾಡಿದರು. ಇದರಿಂದಾಗಿ ಭಾರತ ಇತರ ವಿಶ್ವದ ದೇಶಗಳೊಂದಿಗೆ ಈಗಿನ ಅಲಿಪ್ತ ಆಂದೋಲನದ ಪ್ರವರ್ತಕ ದೇಶವಾಯಿತು. ಅಂದಿನಿಂದ ಕಮ್ಯೂನಿಸ್ಟರು ಸರಕಾರದ ವಿದೇಶಾಂಗ ನೀತಿಯನ್ನು ಬೆಂಬಲಿಸುತ್ತಾ ಬಂದಿದ್ದೇವೆ.

ಆದರೆ ನಮ್ಮ ಈ ಬೆಂಬಲ ಕಾಂಗ್ರೆಸ್‌ನ ಆಂತರಿಕ ಧೋರಣೆಗಳ ವಿರುದ್ಧವಾಗಲೀ ಅಥವಾ ಸಾಮ್ರಾಜ್ಯಶಾಹಿಗಳೊಂದಿಗೆ ರಾಜಿ ಮಾಡಿಕೊಳ್ಳುವ ವಿದೇಶಾಂಗ ಧೋರಣೆಯ ಅಂಶಗಳ ವಿರುದ್ಧ ಕೂಡಾ ನಮ್ಮ ಹೋರಾಟದಲ್ಲಿ ಅಡ್ಡ ಬಂದಿಲ್ಲ. ಅವಿಭಜಿತ ಕಮ್ಯೂನಿಸ್ಟ್ ಪಕ್ಷ, ನಂತರ ಸಿ.ಪಿ.ಐ (ಎಂ) ಕಾಂಗ್ರೆಸ್ ಸರಕಾರದ ಆರ್ಥಿಕ ಮತ್ತು ರಾಜಕೀಯ ಧೋರಣೆಗಳ ವಿರುದ್ಧ ಹೋರಾಟಗಳಲ್ಲಿ ದುರ್ಬಲತೆ ತೋರಿದ ಒಂದಾದರೂ ಸಂದರ್ಭವನ್ನು ಜೇಠ್ಮಲಾನಿಯವರು ತೋರಿಸಿಕೊಡಬಲ್ಲರೇ ? ಕಾಂಗ್ರೆಸ್ ಸರಕಾರದ ವಿರುದ್ಧ ಅದು ಜವಾಹರಲಾಲ್ ನಹರೂ ನೇತೃತ್ವದ್ದಾಗಿರಲಿ ಅಥವಾ ಇಂದಿರಾಗಾಂಧಿ, ರಾಜೀವ ಗಾಂಧಿ ನೇತೃತ್ವದ್ದಾಗಿರಲಿ, ಎಡೆಬಿಡದೆ ಹೋರಾಟ ನಡೆಸಿದ ಕೀರ್ತಿ ನಮ್ಮ ಪಕ್ಷಕ್ಕೆ ಸಲ್ಲಬೇಕು ಎಂದು ನಾನು ಹೇಳಿಕೊಳ್ಳಬಲ್ಲೆ.

ರಾಜೀವಗಾಂಧಿ ಸರ್ಕಾರವನ್ನು ಇಳಿಸಿ ತರುವ ಹೊಸ ಸರ್ಕಾರ ಕಾಂಗ್ರೆಸ್ ಸರ್ಕಾರದ ಸಾಮ್ರಾಜ್ಯಶಾಹಿ ವಿರೋಧಿ ಅಥವಾ ವಸಾಹತುಶಾಹೀ-ವಿರೋಧಿ ವಿದೇಶ ಧೋರಣೆಯನ್ನು ತ್ಯಜಿಸಬಾರದು ಎಂದು ನಾವು ಬಯಸುತ್ತೇವೆಂಬುದು ನಿಜ. ತದ್ವಿರುದ್ಧವಾಗಿ ಜೇಠ್ಮಲಾನಿಯವರು ರಾಜೀವ ಸರ್ಕಾರವನ್ನು ಹೇಗಾದರೂ ಎಳೆದು ಹಾಕಬೇಕು ಮಾತ್ರವಲ್ಲ, ಅದರ ಸ್ಥಾನದಲ್ಲಿ ಬರುವ ಹೊಸ ಸರ್ಕಾರ ಸ್ವಾತಂತ್ರ್ಯ ಆಂದೋಲನದ ಸಾಮ್ರಾಜ್ಯಶಾಹೀ-ವಿರೋಧಿ ಪರಂಪರೆಯನ್ನೇ ಪೂರ್ಣವಾಗಿ ತ್ಯಜಿಸಬೇಕೆಂದು ಬಯಸುತ್ತಾರೆ. ಬಹುಶಃ ಹೀಗೆ ಬರುವ ಪರ್ಯಾಯ ರಾಜಕೀಯ ಕೂಟ ಆರ್ಥಿಕ ಬೆಳವಣಿಗೆ, ಕೇಂದ್ರ-ರಾಜ್ಯ ಸಂಬಂಧಗಳು, ಕೋಮುವಾದಿ ಮತ್ತಿತರ ವಿರುದ್ಧ ಹೋರಾಟ ಮುಂತಾದವಕ್ಕೆ ಸಂಬಂಧಪಟ್ಟ ಕಾಂಗ್ರೆಸ್ ಧೋರಣೆಗಳನ್ನು ಬದಲಿಸಲು ಹೊರಡಬಾರದು ಎಂದು ಅವರು ಬಯಸುತ್ತಾರೇನೋ. ನಾವಂತು ಹೊಸ ಸರ್ಕಾರ ಬೇರೆಲ್ಲಾ ಧೋರಣೆಗಳನ್ನು ಬದಲಿಸಿ ಸಾಮ್ರಾಜ್ಯಶಾಹೀ-ವಿರೋಧಿ ವಿದೇಶಾಂಗ ಧೋರಣೆಯನ್ನು ಮತ್ತಷ್ಟು ಉತ್ತಮಗೊಳಿಸಬೇಕೆಂದು ಬಯಸುತ್ತೇವೆ. ಇದೇ ನಮಗೂ ಜೇಠ್ಮಲಾನಿಯವರಿಗೂ ಇರುವ ವ್ಯತ್ಯಾಸದ ಸಾರಾಂಶ.

ರಾಜೀವ್ ಸರ್ಕಾರದ ಸ್ಥಾನದಲ್ಲಿ ಬರುವ ಹೊಸ ಸರ್ಕಾರ ನಮ್ಮ ಪಕ್ಷದ ನೇತೃತ್ವದಲ್ಲಿ ಅಥವಾ ಎಲ್ಲಾ ಎಡಪಕ್ಷಗಳ ಒಂದು ಕೂಟದ ನೇತೃತ್ವದಲ್ಲಾದರೂ ಇರುತ್ತದೆಂಬ ಭ್ರಮೆ ನನಗಿಲ್ಲ. ಪ್ರಸ್ತಾವಿಕ ಮಧ್ಯಮ ಪಂಥೀಯ ಪಕ್ಷ(ಎಸ್.ಜೆ.ಡಿ.)ಸ್ಥಾಪನೆ ಸಾಕಾರಗೊಂಡು ಅದು ಮುಂದಿನ ಚುನಾವಣೆ ಗೆದ್ದು ಬಂದರೆ ರಚನೆಯಾಗುವ ಹೊಸ ಸರ್ಕಾರ ಬೇರೆಲ್ಲಾ ವಿಷಯಗಳಲ್ಲೂ ಕಾಂಗ್ರೆಸ್ ಸರ್ಕಾರಕ್ಕೆ ಒಂದು ಪರ್ಯಾಯವಾಗಿರಬೇಕು; ಆದರೆ ವಿದೇಶಾಂಗ ನೀತಿ ಮುಂದುವರಿಯಬೇಕು, ಅದನ್ನು ಮತ್ತಷ್ಟು ಉತ್ತಮಗೊಳಿಸಬೇಕು.

ಇದು ನೆರವೇರಬೇಕೆಂದು ನಿರೀಕ್ಷಿಸುವುದು ಅವಾಸ್ತವವೆನಿಸುತ್ತದೆಯೇ ? ಇಲ್ಲ. ನನಗೆ ಹಾಗನಿಸುವುದಿಲ್ಲ. ಯಾಕೆಂದರೆ ಸಾಮ್ರಾಜ್ಯಶಾಹೀ-ವಿರೋಧೀ. ತೀವ್ರ ಪ್ರಜಾಪ್ರಭುತ್ವಶಾಹೀ ಮತ್ತು ಜಾತ್ಯಾತೀತ ಪರಿಕಲ್ಪನೆ ನಮ್ಮ ಜನತೆಯ ಪ್ರಜ್ಞೆಯಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಯಾವುದೇ ಗಂಭೀರ ರಾಜಕೀಯ ಕಾರ್ಯಕರ್ತ ಎಡ ಮತ್ತು ಜಾತ್ಯಾತೀತ ಶಕ್ತಿಗಳ ನಿಟ್ಟಿನಿಂದಲ್ಲದೆ ಬೇರಾವ ದೃಷ್ಟಿಯಿಂದಲೂ ಯೋಚಿಸಲು ಸಾಧ್ಯವಿಲ್ಲ. ಬಿ.ಜೆ.ಪಿ. ಅಥವಾ ಅದರಂತಹ ಬೇರಾವುದೇ ಸಂಘಟನೆ ಸಕ್ರಿಯ ಪಾತ್ರ ವಹಿಸುವ ಎಲ್ಲವೂ ಸೇರಿದ ಸಂಯುಕ್ತರಂಗದ ಇನ್ನೊಂದು ವಿಚಾರ ಎಷ್ಟೊಂದು ಅವಹೇಳನಕ್ಕೊಳಗಾಗಿದೆಯೆಂದರೆ ಈಗ ಅಸ್ತಿತ್ವಕ್ಕೆ ಬಂದಿರುವ ಸಮಾಜವಾದೀ ಜನತಾದಳ ಹಾಗೂ ರಾಷ್ಟ್ರೀಯರಂಗ ಇವೆರಡೂ ಕೂಟಗಳು ಕೋಮು ಪಕ್ಷಗಳನ್ನು ದೂರವಿಟ್ಟಿವೆ. ಇವೆರಡೂ ಕೂಡ ಸ್ಥೂಲವಾಗಿ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ಕಾರ್ಯಕ್ರಮದಿಗೆ ಹೊಂದಿಕೊಳ್ಳುವ ಕಾರ್ಯಕ್ರಮದ ನಿಟ್ಟಿನಲ್ಲಿ ಯೋಚಿಸುತ್ತಿವೆ. ಆದ್ದರಿಂದ ಇವುಗಳ ಪ್ರವೇಶ ರಾಜೀವಗಾಂಧಿ ಸರ್ಕಾರವನ್ನು ಅಧಿಕಾರದಿಂದ ಇಳಿಸುವಲ್ಲಿ ಹಾಗೂ ಬಿ.ಜೆ.ಪಿ, ಮುಸ್ಲಿಂ ಲೀಗ್ ಮತ್ತಿತರ ಜಾತಿ, ಕೋಮು ಸಂಘಟನೆಗಳನ್ನು ದೂರಮಾಡುವಲ್ಲಿ ನೆರವಾಗುತ್ತವೆ.

ಕೊನೆಯಲ್ಲಿ ಆಗಸ್ಟ್ 5 ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾಗಿರುವ ಕೆ. ಆರ್. ಮಾಲ್ಕಾನಿಯವರ ಲೇಖನದ ಒಂದು ಮಾತಿನ ಬಗ್ಗೆ ಬಿ.ಜೆ.ಪಿ. ಮತ್ತು ಕಮ್ಯುನಿಸ್ಟರು ಮಾತ್ರವಲ್ಲದೇ ದೇಶದ ಎಲ್ಲಾ ರಾಜಕಾರಣಿಗಳಿಗೆ ಕಾಂಗ್ರೆಸ್ ಹಿನ್ನೆಲೆಯಿದೆ ಎಂದಿದ್ದಾರೆ ಅವರು. ಇದಕ್ಕೆ ನನ್ನದೊಂದು ಸಣ್ಣದಾದರೂ ಮಹತ್ವದ ತಿದ್ದುಪಡಿಯಿದೆ-ನಾವು ಕಮ್ಯೂನಿಸ್ಟರಲ್ಲೂ ಹೆಚ್ಚಿನವರಿಗೆ ಕಾಂಗ್ರೆಸ್ ಹಿನ್ನೆಲೆಯಿದೆ. ಯಾಕೆಂದರೆ 1930 ರ ದಶಕದಲ್ಲಿ ಮೂಡಿ ಬಂದ ಸಾಮ್ರಾಜ್ಯ ಶಾಹೀ-ವಿರೋಧೀ, ಪಾಳೆಯಗಾರೀ-ವಿರೋಧಿ ಹಾಗೂ ತೀವ್ರ ಪ್ರಜಾಪ್ರಭುತ್ವವಾದೀ ಪರಿಕಲ್ಪನೆಗಳನ್ನೆಲ್ಲ ಕಾಂಗ್ರೆಸ್ ಮುಖಂಡತ್ವ ಹೊರಗೆಡೆಯುವವರೆಗೆ ನಾವು ಕಾಂಗ್ರೆಸ್ಸಿನ ಭಾಗವಾಗಿದ್ದೆವು. ಮೂವತ್ತರ ದಶಕದ ಸಾಮ್ರಾಜ್ಯಶಾಹೀ ವಿರೋಧಿ ಸ್ಫೂರ್ತಿಯನ್ನು ಮತ್ತೆ ಜಾಗೃತಗೊಳಿಸಬಯಸುವ ಮಾಜೀ ಕಾಂಗ್ರೆಸ್ಸಿಗರೊಂದಿಗೆ ನಾವು ಸಹಕರಿಸುವುದು ಅಸ್ವಾಭಾವಿಕವೇನಲ್ಲ. ಆದ್ದರಿಂದ ಇಂತಹ ಮಾಜೀ ಕಾಂಗ್ರೆಸ್ಸಿಗರು ಮತ್ತು ಎಡಪಕ್ಷಗಳೊಂದಿಗೆ ಸಹಕಾರ ಸಾಧ್ಯ. ಆದರೆ ಬಿ.ಜೆ.ಪಿ.- ಆರ್.ಎಸ್.ಎಸ್.ನಂತಹ ಕೋಮು ಸಂಘಟನೆಗಳು ಸ್ಪಷ್ಟವಾಗಿ ಇಂತಹ ಸರ್ಕಾರದ ಪರಿಧಿಯ ಹೊರಗುಳಿಯುತ್ತವೆ.

ಶಾಂತಿ ಚಳುವಳಿ ಬಲಗೊಳಿಸಲು ಕಾರ್ಮಿಕರಿಗೆ ಕರೆ

ವಿಶ್ವಾದ್ಯಂತ ಬೆಳೆದು ಬರುತ್ತಿರುವ ಜಾಗತಿಕ ಶಾಂತಿ ಚಳುವಳಿಗೂ ಕಾರ್ಮಿಕ ವರ್ಗಕ್ಕೂ ಯಾವುದೇ ಸಂಬಂಧ ಕಲ್ಪಿಸದೆ ಇರುವುದರಿಂದ ಇಂದು ಕಾರ್ಮಿಕರಲ್ಲಿ ಕೋಮು ಪ್ರಾದೇಶಿಕ ಭಾವನೆ ಬೆಳೆಯಲು ಕಾರಣವಾಗಿದೆ. ಲಕ್ಷಾಂತರ ಜನಸಂಖ್ಯೆ ಇರುವ ಬೆಂಗಳೂರಿನಂತಹ ನಗರದ ಕಾರ್ಮಿಕ ವರ್ಗದ ಮಧ್ಯೆ ಶಾಂತಿ ಚಳುವಳಿಯ ಸಂದೇಶವನ್ನು ಪ್ರತಿಯೊಂದು ಹಂತದಲ್ಲಿಯೂ ಕೊಂಡೊಯ್ದು ಶಾಂತಿ ಚಳುವಳಿಯನ್ನು ಜನಪ್ರಿಯಗೊಳಿಸಬೇಕೆಂದು ಸಿ.ಐ.ಟಿ.ಯು. ಅಖಿಲ ಭಾರತ ಉಪಾಧ್ಯಕ್ಷರು ಹಾಗೂ ರಾಜ್ಯ ಅಧ್ಯಕ್ಷರಾದ ಕಾ|| ಎಸ್. ಸೂರ್ಯನಾರಾಯಣರಾವ್ ಕರೆ ನೀಡಿದರು.

ಸೆಪ್ಟೆಂಬರ್ 1 ರಂದು ನಗರದ ಕಬ್ಬನ್ ಪಾರ್ಕ್ ಎನ್.ಜಿ.ಓ. ಸಭಾಂಗಣದಲ್ಲಿ ಜಾಗತಿಕ ಶಾಂತಿಗಾಗಿ ಕಾರ್ಮಿಕ ವರ್ಗ ವಿಶ್ವ ಶಾಂತಿ ದಿನಾಚರಣೆ ಅಂಗವಾಗಿ ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ. ಹಾಗೂ ಅಖಿಲ ಭಾರತ ಶಾಂತಿ ಸೌಹಾರ್ದತಾ ಸಂಘಟನೆಗಳು ಜಂಟಿಯಾಗಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಎರಡನೇ ಮಹಾಯುದ್ಧದಲ್ಲಿ ರಷ್ಯಾದ ನಿರ್ಣಾಯಕ ಪಾತ್ರ, ಇತ್ತೀಚಿನ ಅಮೇರಿಕ-ಸೋವಿಯತ್ ರಷ್ಯಾಗಳ ಜಿನಿವಾ ಒಪ್ಪಂದ, ಭಾರತದ ಅಲಿಪ್ತ ನೀತಿ ಕುರಿತು ಮಾತನಾಡಿದ ಕಾ|| ಎಸ್. ಆರ್. ಆರಾಧ್ಯ ರವರು ಚಳುವಳಿ ಮುನ್ನಡೆಸುವ ಹಾಗೂ ದೇಶದ ಅಲಿಪ್ತ ನೀತಿ ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿದರು.

ಅಮೆರಿಕನ್ ಸಾಮ್ರಾಜ್ಯಶಾಹಿ ಯುದ್ಧಕೋರ ನೀತಿ ಹಾಗೂ ಮಿಲಿಟರಿ ಪೈಪೋಟಿಯಿಂದಾಗಿ ವಿಮೋಚನಾ ಹೋರಾಟ ನಡೆಸುತ್ತಿರುವ ದೇಶದ ಜನತೆಯ ಮೇಲೆ ತೀವ್ರ ರೀತಿಯ ಪರಿಣಾಮವುಂಟಾಗಿದೆ ಎಂದು ಎ.ಐ.ಟಿ.ಯು. ರಾಜ್ಯ ನಾಯಕ ಕಾ|| ಬಾಬು ಮ್ಯಾಥ್ಯೂರವರು ಹೇಳಿದರು.

ಪ್ರಾರಂಭದಲ್ಲಿ ಸಿ.ಐ.ಟಿ.ಯು. ಜಿಲ್ಲಾ ಸಂಚಾಲಕ ಕಾ|| ನಾರಾಯಣರಾವ್ ಬಾನುರವರು ಸ್ವಾಗತಿಸಿದರು. ಶಾಂತಿ ಸೌಹಾರ್ದತಾ ಸಂಘಟನೆಯ ಕಾ|| ಸೇತೂರಾವ್ ಅಧ್ಯಕ್ಷತೆ ವಹಿಸಿದ್ದರು. ಎ.ಟಿ.ಟಿ.ಯು.ಸಿ.ಯ ಕಾ|| ಬಾಲಕೃಷ್ಣರವರ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

ಭಾವೈಕ್ಯತಾ ದಿನಾಚರಣೆ

ಡಿ.ವೈ.ಎಫ್.ಐ. ರಾಣಿಬೆನ್ನೂರು ಘಟಕದ ಆಶ್ರಯದಲ್ಲಿ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನದಂದು ಕಾರ್ಯಕರ್ತರು ರಾಷ್ಟ್ರೀಯ ಐಕ್ಯತೆ-ಸಮಗ್ರತೆ ದಿನವನ್ನಾಗಿ ಆಚರಿಸಲು ಸೈಕಲ್ ಜಾಥಾ ನಡೆಸಿದರು. ಜನರಲ್ಲಿ ಏಕತೆ ಸಂದೇಶವನ್ನು ಹೇಳುತ್ತಾ ರಾಣಿಬೆನ್ನೂರಿನ ವಿವಿಧ ಜನರು ವಾಸಿಸುವ ಬಡಾವಣೆಗಳಲ್ಲಿ ಜಾಥ ಸಂಚರಿಸಿತು. ವಿಶಿಷ್ಟ ರೀತಿಯ ಇಂತಹ ಜಾಥವನ್ನು ಜನರು ಕುತೂಹಲದಿಂದ ವೀಕ್ಷಿಸಿದರು.

ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು. ನಾಯಕರಾದ ಕಾ|| ನಿತ್ಯಾನಂದ ಸ್ವಾಮಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ|| ಐ.ಎ. ಲೋಕಾಪುರರವರು ಭಾಗವಹಿಸಿದ್ದರು. ನೇಕಾರರ ಸಂಘದ ಕಾರ್ಯದರ್ಶಿಗಳಾದ ಕಾ|| ಎಸ್.ಎಸ್. ಕ್ಯಾದಗಿ, ಎಸ್.ಎಫ್.ಐ. ನಾಯಕ ಕೃಷ್ಣಾಜಿ ಲಾಲ್‌ರವರುಗಳು ಮಾತನಾಡಿದರು.

ಡಿ.ವೈ.ಎಫ್.ಐ. ಕಾರ್ಯದರ್ಶಿ ಕಾ|| ಪರಶುರಾಮ ಬಗಾದಿ ಸ್ವಾಗತಿಸಿ ಅಧ್ಯಕ್ಷ ಪಕೀರಪ್ಪ ವಿಭೂತಿಯವರು ಸಮಾರಂಭದ ಕೊನೆಯಲ್ಲಿ ವಂದಿಸಿದರು.

ಒಂದು ಪ್ರಶ್ನೆ-ನಾಟಕ ಪ್ರದರ್ಶನ

ಎಸ್.ಎಫ್.ಐ. ಹರಿಹರ ಶಾಖೆ ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತಾದ 'ಒಂದು ಪ್ರಶ್ನೆ' ಎಂಬ ನಾಟಕವನ್ನು ಆಗಸ್ಟ್ 15 ರಂದು ನಗರದ 3 ಕಡೆಗಳಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲಾಯಿತು. ಈ ನಾಟಕವನ್ನು ಕಾ|| ಅಣ್ಣಪ್ಪನವರು ನಿರ್ದೇಶಿಸಿದರು. ಕಾರ್ಯಕ್ರಮಗಳ ಆರಂಭದಲ್ಲಿ ಕ್ರಾಂತಿಗೀತೆ ಹಾಡಲಾಯಿತು. ಈ ನಾಟಕವನ್ನು ನೂರು ಪ್ರೇಕ್ಷಕರು ವೀಕ್ಷಿಸಿದರು.

ಕಳಸಾದಲ್ಲಿ ಪಕ್ಷದ ಸಮ್ಮೇಳನ

ಚಿಕ್ಕಮಗಳೂರಿನ ಕಳಸಾ ಶಾಖಾ ಸಮ್ಮೇಳನ ಆಗಸ್ಟ್ 27 ರಂದು ಪ್ರವಾಸಿ ಮಂದಿರದಲ್ಲಿ ಕಾ|| ಅಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಎ. ಸುಕುಮಾರ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ದೇಶದಲ್ಲಿ ಕಾಂಗ್ರೆಸ್ ಪಕ್ಷ ಸರ್ವಾಧಿಕಾರಿ ರೀತಿಯಲ್ಲಿ ನಡೆಸುತ್ತಿರುವ ನಡೆದುಕೊಳ್ಳುತ್ತಿರುವುದರ ಬಗ್ಗೆ ತಿಳಿಸಿ ನಮ್ಮ ಪಕ್ಷದ ಜವಾಬ್ದಾರಿ ಅರಿತು ಪಕ್ಷದ ಸದಸ್ಯರು ಪಕ್ಷವನ್ನು ಬಲಪಡಿಸಲು ಶ್ರಮಿಸುವಂತೆ ಕರೆ ನೀಡಿದರು. ಕಾ|| ಕೆ. ಸುಕುಮಾರ್ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಲಾಯಿತು.

ಸೆಪ್ಟೆಂಬರ್ ಚಳುವಳಿ : ಅಭೂತಪೂರ್ವ ಯಶಸ್ವಿ, ಎಲ್ಲೆಡೆ ಬಂಧನ

ಸೆಪ್ಟೆಂಬರ್ 1 ರಿಂದ 15 ರವರೆಗೆ ರಾಷ್ಟ್ರವ್ಯಾಪಿ ರೈತ ಕೂಲಿಗಾರರ ಪಿಕೆಟಿಂಗ್, ಜೈಲ್‌ಭರೋ ಚಳುವಳಿ ನಡೆಸಲು ನಾಲ್ಕು ಎಡಪಕ್ಷಗಳ ರೈತ ಸಂಘಟನೆಗಳು ನೀಡಿದ ಕರೆಯಂತೆ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಗಾರರ ಸಂಘಗಳು ಈ ಚಳುವಳಿಯನ್ನು ಅಭೂತಪೂರ್ವ ಯಶಸ್ವಿಗೊಳಿಸಿದ ವರದಿಯನ್ನು ಪ್ರಕಟಿಸುತ್ತಿದ್ದೇವೆ.

ಬೆಂಗಳೂರು

ಸೆ. 5ರಂದು ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಜಂಟಿ ರ್‍ಯಾಲಿ ನಡೆಸಿ ತಾಲ್ಲೋಕು ಕಛೇರಿ ಘೇರಾವೋ ನಡೆಸಿ 300ಮಂದಿ ರೈತ–ಕೃಷಿ ಕೂಲಿಗಾರರನ್ನು ಪೋಲೀಸರು ಬಂಧಿಸಿದರು. ಸಿ.ಪಿ.ಐ.(ಎಂ ಮುಖಂಡ ಕಾ|| ಎಸ್. ಸರ್‍ಯನಾರಾಯಣ ರಾವ್ ರೈತನಾಯಕ ಪಿ. ಜಗನ್ನಾಥ್, ಪಿ.ಕೆ. ಸುಬ್ರಮಣಿ, ಲಕ್ಕಣ್ಣ, ವೆಂಕಟಾಚಲಯ್ಯ ಸಿ.ಐ.ಟಿ.ಯು. ಡಿ.ವೈ.ಎಫ್.ಐ, ಎಸ್.ಎಫ್.ಐ, ಕಾರ್ಯಕರ್ತರು ಭಾಗವಹಿಸಿ ಬಂಧನಕ್ಕೊಳಗಾದರು. ಸೆ. 10 ರಂದು ಹೊಸಕೋಟೆ, ದ. ತಾಲೋಕ ರೈತರು ಹಾಗೂ ಸಿ ಐ.ಟಿ.ಯು. ಕೆ. ಆರ್. ಪುರಂ ಪ್ರದೇಶದ ಕಾರ್ಮಿಕರು ಚಳುವಳಿಗೆ ಬೆಂಬಲಿಸಿ ರಸ್ತೆರೋಕೋ ಚಳುವಳಿ ನಡೆಸಿ 200 ಮಹಿಳೆಯರು ಒಳಗೊಂಡು ಸಾವಿರ ಜನರು ಬಂಧನಕ್ಕೊಳಗಾದರು. ಕಾ|| ವಿನ್‌ಸೆಂಟ್, ನಾರಾಯಣರಾಣವ್ ಬಾಮ ನೇತೃತ್ವ ವಹಿಸಿದ್ದರು. ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನಕಾರ್ಯದರ್ಶಿ ಕಾ|| ಪಿ. ರಾಮಚಂದ್ರರಾವ್‌ರವರು ಚಳುವಳಿ ಉದ್ಘಾಟಿಸಿದರು.

ಸೆಪ್ಟೆಂಬರ್ 1ರಂದು ಉತ್ತರಹಳ್ಳಿ ಹೋಬಳಿಯ ರೈತರು ಬೆಂಗಳೂರು ದಕ್ಷಿಣ ತಾಲೋಕು ಕಛೇರಿ ಮುಂದೆ ಧರಣಿ ನಡೆಸಿದರು. ರಾಜ್ಯ ಕಾರ್ಯದರ್ಶಿ ಕಾ|| ಪಿ. ಜಗನ್ನಾಥ್ ಚಳುವಳಿಯ ಉದ್ಘಾಟನೆ ಮಾಡಿದರು. ಕಾ|| ಲಕ್ಕಣ್ಣ, ವೆಂಕಟಾಚಲಯ್ಯ ಮುಂತಾದವರು ನೇತೃತ್ವ ನೀಡಿದರು. ಸೆ. 2ರಂದು ಕೆಂಗೇರಿ ಹೋಬಳಿ, ಸೆ. 3ರಂದು ಬಿದರಹಳ್ಳಿ ಹೋಬಳಿ ರೈತರು ಧರಣಿಯಲ್ಲಿ ಪಾಲ್ಗೊಂಡಿದ್ದರು. ಸೆ. 5ರಂದು ಕೆಂಗೇರಿ ಹೋಬಳಿ ತಾವರೆಕೆರೆ ಹೋಬಳಿ ಬಳಿ 200 ರೈತರು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಮೆರವಣಿಗೆ ನಡೆಸಿ 45 ನಿಮಿಷಗಳ ಕಾಲ ರಸ್ತೆತಡ ಚಳುವಳಿ ನಡೆಸಿದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾ|| ಆರ್. ಶ್ರೀನಿವಾಸ್, ರೈತ ಸಂಘದ ದ. ತಾಲೋಕು ಕಾರ್ಯದರ್ಶಿ ಕಾ|| ಲಕ್ಕಣ, ಕೃಷಿ ಕೂಲಿಗಾರ ಸಂಘದ ಕಾ|| ವೆಂಕಟಾಚಲಯ್ಯ ನೇತೃತ್ವವಹಿಸಿದ್ದರು.

ದೊಡ್ಡಬಳ್ಳಾಪುರ

ಸೆ. 3ರವರೆವಿಗೆ ಧರಣಿ ನಡೆಸಿ ಸೆ. 5 ರಂದು 250 ಮಂದಿ ರೈತ–ಕೃಷಿ ಕೂಲಿಗಾರರು. ತಾಲೋಕು ಕಛೇರಿ ಘೇರಾವೊ ನಡೆಸಿ ಕಛೇರಿಯ ಕಾರ್‍ಯ ಅಸ್ತವ್ಯಸ್ಥಗೊಂಡು ನೌಕರರ ಕೆಲಸ ಕಾರ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಕಾ|| ಮುಂಗವಾಳಪ್ಪ. ರಾಮಭದ್ರಯ್ಯ ವೆಂಕಟರಾಂ, ಎ.ವಿ. ರಮೇಶ್ ಎಸ್. ಆರ್, ಆರಾಧ್ಯ ರಾಮಾಂಜನೇಯ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ದ. ಕ. ಜಿಲ್ಲೆ

ಕುಂದಾಪುರ ಸೆಪ್ಟೆಂಬರ್ 2ರಂದು ಮಂದೂರು, ಜಡ್ಕಲ್, ಕೃಷಿಕಾರ, ಬೀಡಿ ಮಹಿಳೆಯರು, ಸುಪ್ರಿಂ ಹಂಚು ಕಾರ್ಮಿಕರು ಕಾ|| ಅಬ್ರಹಾಂಕರ್ಕಡ, ದಾಸ ಭಂಡಾರಿ, ವಿ. ನರಸಿಂಹ, ವಿ. ಮಹಾಬಲರವರ ನೇತೃತ್ವದಲ್ಲಿ ತಾಲೋಕು ಕಛೇರಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು.

ಬಸ್ರೂರು : ಹೊಸಾಡು, ಮೊರ್ಡಿ, ಗ್ರಾಮದ ರೈತರು ಮೂಕಾಂಬಿಕ ಹಂಚು ಕಾರ್ಮಿಕರು, ಕಾ||ದಾಸಭಂಡಾರಿ, ಅಬ್ರಹಾಂಕರ್ಕಡ, ಕೋಣೆಯವರ ನೇತೃತ್ವದಲ್ಲಿ ತಾಲೋಕು ಕಛೇರಿ ಪಿಕೆಟಿಂಗ್‌ನಡೆಸಿದರು.

ಪುತ್ತೂರು

ಸೆ. 1ರಂದು ತಾಲೋಕಿನ ವಿವಿಧ ಕಡೆಗಳಿಂದ ಬಂದ 500ಕ್ಕೂ ಹೆಚ್ಚು ರೈತ ಕೃಷಿ ಕೂಲಿಗಾರರು ಪುತ್ತೂರಿನ ದರ್ಭೆಯಿಂದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ ಉಪ ತಹಶೀಲ್ದಾರ್‌ಗೆ ಮನವಿ ಹಾಗೂ ದರಖಾಸ್ತು ರೈತರ ಅರ್ಜಿಗಳನ್ನು ಅರ್ಪಿಸಲಾಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಪರಮೇಶ್ವರ ನಂಬೀಷನ್ ತಾಲೋಕು ರೈತ ಸಂಘದ ಅಧ್ಯಕ್ಷ ಕಾ|| ಸತೀಶನ್ ಕಾರ್ಯದರ್ಶಿ ಕಾ|| ವಿಲ್ಫೆಡ್ ಡಿಸೋಜಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸೆ. 13ರಂದು ಪಿಕೆಟಿಂಗ್ ನಡೆಸಲು ನಿರ್ಧರಿಸಿದರು.

ಬಂಟ್ವಾಳ

ಆಗಸ್ಟ್ 29ರಂದು ವಿಟ್ಲದ ನಾಡ ಕಛೇರಿ ಮುಂದೆ 400 ಮಂದಿ ರೈತರು ಮತಪ್ರದರ್ಶನ ನಡೆಸಿ ಕೂಲಿಗಾರರಿಗೆ ಹಕ್ಕುಪತ್ರ ಭೂಮಿ ಸಕ್ರಮ ಬೇಡಿಕೆ ಒತ್ತಾಯಿಸಿ ಅಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ತಾಲೋಕು ರೈತ ಮುಖಂಡ ಕಾ|| ಬಿ. ವಾಸುಗಟ್ಟಿ, ಬಿ. ಹೂವಯ್ಯ ಬಂಗೇರ, ಎ. ರಾಮಣ್ಣ ಎನ್. ವಸಂತ ನೇತೃತ್ವವಹಿಸಿದ್ದರು.

ಬೆಳ್ತಂಗಡಿ

ಸೆ. 5ರಂದು ಪಾಣೆಕಲ್ಲಿನಿಂದ ಪದ್ಮುಂಜದವರೆಗೆ ಕಾಲ್ನಡಿಗೆ ಜಾಥ ನಡೆಸಿ ಕಣಿಯೂರು ಮಂಡಲ ಪಂಚಾಯ್ತಿ ಕಛೇರಿಮುಂದೆ ಧರಣಿ ನಡೆಸಲಾಯಿತು. ಕಾ||ಪರಮೇಶ್ವರಭಂಡಾರಿ ನೇತೃತ್ವ ನೀಡಿದರು. ಇಳಂತಿಲ ಮಂಡಲದ. ರೈತ-ಕೃಷಿ ಕೂಲಿಗಾರರು ಕಾರ್‍ಯಪಾಡಿ ಶಾಲೆಯಿಂದ ಮಂಡಲ ಪಂಚಾಯ್ತಿ ಕಛೇರಿಗೆ ಮೆರವಣಿಗೆ ನಡೆಸಿದರು. ರೈತ ಸಂಘದ ಜಂಟಿ ಕಾರ್ಯದರ್ಶಿ ಪಿ. ಲಕ್ಷ್ಮಣಗೌಡ, ಕಾರ್‍ಯದರ್ಶಿ ವಿಷ್ಣುಮೂರ್ತಿ ಪಿ. ವಸಂತಭಟ್ ರವರು ರೈತರನ್ನುದ್ದೇಶಿಸಿ ಮಾತನಾಡಿದರು. 12ರಂದು ಪಿಕೆಟಿಂಗ್ ನಡೆಸಲಾಗುವುದು.

ಗುಲ್ಬರ್ಗಾ

ಸುರಪುರ

ಗುಲ್ಬರ್ಗಾ ಜಿಲ್ಲೆಯ ಸುರಪೂರದ ಸಿದ್ದಾಪುರ್, ವೆಂಕಟಪುರ, ಮಂಜಲಾಪುರ, ರಾಯಗೇರಾ, ಮುದ್ನೂರ, ಬೈಲಾಪುರ, ತಾರಿಡಾ, ಗೋನಾಲ ಮುಂತಾದ ಗ್ರಾಮದ ರೈತರು ಸೆ, 1ರಿಂದ 3ರವರೆವಿಗೆ ನಡೆದ ಧರಣಿಯಲ್ಲಿ ಪಾಲ್ಗೊಂಡಿದ್ದರು. ರೈತನಾಯಕ ಕಾ|| ಬಸವರಾಜಯಡಹಳ್ಳಿಯವರು ಮುಂದಾಳತ್ವ ನೀಡಿದರು. ಎಸ್.ಎಫ್.ಐ. ಚಳುವಳಿಗೆ ಬೆಂಬಲಿಸಿ ಭಾಗವಹಿಸಿತು. ಸುರಪುರದ ವಕೀಲರಾದ ಉಸ್ತಾದ ಫಿರಾಸತ್‌ಹುಸೇನ್, ಬಿ. ರಂಗಯ್ಯ, ಜಿ.ಎಸ್. ಪಾಟೀಲ್, ಜೆ. ಆಗಸ್ಟಿನ್‌ರವರು ಭಾಗವಹಿಸಿದ್ದರು.

ಶಹಾಪುರ, ಸುರಪುರ, ಜೇವರ್ಗಿ, ಆಳಂದ, ಚಿಂಚೋಳಿ ಯಾದಗಿರಿಗಳಲ್ಲಿ ಧರಣಿ ಮುಂದುವರೆದಿದೆ. ನೂರಾರು ಮಂದಿ ರೈತ-ಕೃಷಿಕೂಲಿಗಾರರು ಪ್ರತಿನಿತ್ಯ ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸುರಿಯುವ ಮಳೆಯನ್ನು ಲೆಕ್ಕಿಸದೆ ಧರಣಿ ಮುಂದುವರಿಸಲಾಗಿದೆ. ಸೆ. 1ರಂದು ಸುರಪುರದಲ್ಲಿ 150 ರೈತರು ಧರಣಿ ನಡೆಸಿದರು. 6ನೇ ದಿನ ಮುಂದುವರಿದು ಯಾದಗಿರಿಯಲ್ಲಿ 350 ಜನ ಬಂಧನಕ್ಕೊಳಗಾದರು. ಕಾ|| ಮಾರುತಿ ಮಾನ್ಪಡೆ ಕಲಪ್ಪ ಕಿರಣಗಿ ಚನ್ನಪ್ಪ ಅನೆ ಗುಂದಿ ಎಲ್. ಗೋಪಾಲ್,ರವರುಗಳು ಚಳುವಳಿಯ ಮುಖಂಡತ್ವ ನೀಡಿದರು. ಸೆಪ್ಟೆಂಬರ್ 8ರಂದು ರಸ್ತೆರೋಕೋ ಚಳುವಳಿ ನಡೆಸಲಾಗುವುದು. ಸೆಪ್ಟೆಂಬರ್ ಚಳುವಳಿಯನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ಪೂರ್ವಭಾವಿಯಾಗಿ ವಿವಿಧ ತಾಲೋಕುಗಳಲ್ಲಿ ರೈತರ ಸಮಾವೇಶಗಳನ್ನು ಸಂಘಟಿಲಾಗಿತ್ತು. ಆಗಸ್ಟ್ 18ರಿಂದ 25ರವರೆವಿಗೆ ಜಿಲ್ಲೆಯ ಆಳಂದ, ಚಿಂಚೋಳಿ, ಯಾದಗಿರ್, ಸಡಿಾಪುರ, ಸುರಪುರ, ಗುಲ್ಬರ್ಗಾಗಳಲ್ಲಿ ಸಮಾವೇಶ ನಡೆಯಿತು. ಈ ಸಮಾವೇಶಕ್ಕಾಗಿ ಸಾವಿರ ಕರಪತ್ರ ಮುದ್ರಿಸಲಾಗಿತ್ತು. ಸುಮಾರು 1,500 ರೈತ ಪ್ರತಿನಿಧಿಗಳು ಭಾಗವಹಿಸಿದ್ದರು.

ತುಮಕೂರು

ಗುಬ್ಬಿ

ಸೆ. 1ರಂದು ಗುಬ್ಬಿ ತಾಲೋಕು ಕಛೇರಿಗೆ ಎರಡು ರೈತ ಸಂಘಗಳ ರೈತ–ಕೃಷಿ ಕೂಲಿಗಾರ ಕಾರ್ಯಕರ್ತರು ಹಾಗೂ ನೂರಾರು ಮಹಿಳೆಯರನ್ನೊಳಗೊಂಡು ಮೆರವಣಿಗೆ ನಡೆಸಿ ಧರಣಿ ನಡೆಸಲಾಯಿತು. ರೈತಸಂಘದ ಅಧ್ಯಕ್ಷರಾದ ಕಾ|| ಟಿ.ಕೆ. ಗೋವಿಂದರಾಜು ಎಸ್.ಪಿ. ಜಗದೀಶ್, ಪುಟ್ಟರಾಮಯ್ಯ, ಗಂಗಾಧರಯ್ಯ, ಹೆಚ್ ಯು. ಸದಾಶಿವಯ್ಯ ಮೆರವಣಿಗೆ ನೇತೃತ್ವ ವಹಿಸಿದ್ದರು. ತಹಶೀಲ್ದಾರ್‌ಗೆ ಮನವಿ ಪತ್ರ ಅರ್ಪಿಸಲಾಯಿತು.

ಚೇಳೂರು

ಸೆ. 4ರಂದು ಗುಬ್ಬಿ ತಾಲೋಕು ಚೇಳೂರಿನಲ್ಲಿ ಸಾವಿರಾರು ಜನ ರೈತ ಕಾರ್ಯಕರ್ತರು ರಸ್ತೆ ತಡೆ ಚಳುವಳಿಯನ್ನು ಮಾಡಿದರು. ನಂತರ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ ಸಾರ್ವಜನಿಕ ಸಭೆ ನಡೆಸಲಾಯಿತು. ಕಾ|| ಸದಾಶಿವ, ಗಂಗಾಧರ, ಪಂಡಿತಾ ದಾಸಪ್ಪ ನೇತೃತ್ವವಹಿಸಿದ್ದರು. ರೈತ ನಾಯಕರಾದ ಕಾ|| ಹೆಚ್.ಸಿ. ಚನ್ನಪ್ಪ, ಗೋವಿಂದ ರಾಜು, ಕೆ. ಆರ್. ನಾಯಕ್ ರೈತರನ್ನುದ್ದೇಶಿಸಿ ಮಾತನಾಡಿದರು. ರಸ್ತೆ ತಡೆ ಚಳುವಳಿ ಮಾಡಿದ ನೂರಾರು ಕಾರ್ಯಕರ್ತರನ್ನು ಮುಖಂಡರನ್ನು ಬಂಧಿಸಲಾಯಿತು.

ಬಳ್ಳಾರಿ

ಜಿಲ್ಲೆಯಲ್ಲಿ ಪ್ರತಿನಿತ್ಯ ನೂರಾರು ರೈತರು ತಾಲೋಕು ಕಛೇರಿ ಮುಂದೆ ಧರಣಿ ರಸ್ತೆತಡೆ ಚಳುವಳಿ ನಡೆಸಿದ ವರದಿಗಳು ಬಂದಿವೆ. ಶಿರಗುಪ್ಪದಲ್ಲಿ ಸೆ. 3 ರಂದು ರಸ್ತೆ ಚಳುವಳಿ ಮಾಡಿದ 115 ಮಂದಿ ರೈತರನ್ನು ಬಂದಿಸಲಾಯಿತು. ಕೊಡ್ಲಿಗಿಯಲ್ಲಿ 100 ಮಂದಿಯನ್ನು ಬಂಧಿಸಲಾಯಿತು. ತೋರಣಗಲ್ಲಿನಲ್ಲಿ 24 ಜನರನ್ನು ಬಂದಿಸಿ ಬಿಡುಗಡೆ ಮಾಡಲಾಯಿತು. ಹೆಗ್ಗಿನಬೂದಿನಾಳನಲ್ಲಿ 4ರಂದು ರಸ್ತೆತಡೆ ಚಳುವಳಿ ನಡೆಸಲಾಗಿದೆ. ಹರಪನಹಳ್ಳಿ ಸಂಡೂರಗಳಲ್ಲಿ ನೂರಾರು ರೈತರು ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿ ಅರ್ಪಿಸಲಾಗಿದೆ.

ಬಿಜಾಪುರ

ಸೆ. 1 ರಂದು ರೈತ ಸಂಘದ ಕಛೇರಿಯಿಂದ ಬೃಹತ್ ರ್‍ಯಾಲಿ ಹೊರಟು ಕಛೇರಿ ಜಿಲ್ಲಾ ಪರಿಷತ್ ಹಾಗೂ ಜಿಲ್ಲಾಧಿಕಾರಿ ಕಛೇರಿಗಳ ಮುಂದೆ ಸುರಿಯುವ ಮಳೆಯಲ್ಲಿ ಮತಪ್ರದರ್ಶನ, ಧರಣಿ ನಡೆಸಲಾಯಿತು. ರೈತ-ಕೃಷಿ ಕೂಲಿಗಾರ ಮಹಿಳೆಯರು ಹಾಗೂ ವಿದ್ಯಾರ್ಥಿ ಯುವಕರು ಪಾಲ್ಗೊಂಡಿದ್ದರು, ಸೆ. 2 ರಂದು ಮುಂದುವರೆದು 3 ರಂದು ನೂರಾರು ರೈತರು 200 ಮಂದಿ ಮಹಿಳೆಯರು ಭಾಗವಹಿಸಿದ್ದರು. ಸಂಘಟನೆ ಸಂಚಾಲಕಿ ಅನಸೂಯಕಾಸೆ ಹಾಗೂ ಜಕ್ಕವ್ವಾ ಜಾಬಗೊಂಡ ನೇತೃತ್ವ ವಹಿಸದ್ದರು. 3 ರಂದು ನಡೆದ ಸಭೆಯಲ್ಲಿ ಕಾ|| ಎನ್.ಕೆ. ಉಪಾಧ್ಯಾಯ ಅಧ್ಯಕ್ಷತೆ ವಹಿಸಿದ್ದರು. ಛೀವಸಿ ಕಲಾದಗಿ ಕಾ|| ಮನ್ನುಸಾಬ ಕಲಾದಗಿ, ಪಿ.ಬಿ. ಹಿರೇಮಠ ಎಲ್.ಕೆ. ಚಂಚಲಕರ, ಸದಾನಂದ ಮೋದಿ ನದಾಫ್, ಪಾಟೀಲ್ ಹಂದ್ರಾಳರವರು ಮಾತನಾಡಿ ಸೆಪ್ಟೆಂಬರ್ 10 ರಂದು ಜೈಲ್‌ಬರೋ ಚಳುವಳಿಗೆ ಪೂರ್ಣ ಬೆಂಬಲ ನೀಡುವುದಾಗಿ ಕಾರ್ಯದರ್ಶಿ ಕಾ|| ವಿ.ಎಂ. ಸೊನ್ನದರವರು ತಿಳಿರೆದ್ದಾರೆ.

ಸಿಂದಗಿ

ಸಿಂದಗಿ ರಸ್ತೆಯ ಕವಲ್ಲಿ ಗ್ರಾಮದ ಬಳಿ ರಸ್ತೆತಡೆ ಚಳುದಳಿ ನಡೆಸಿದ 37 ರೈತರನ್ನು ಬಂದಿಸಲಾಗಿದೆ. ಸೆ. 6 ರಂದು ಅಲಿಯ

(6ನೇ ಪುಟಕ್ಕೆ)

ವರದಿ: ಎನ್. ರಾಜಣ್ಣ

ಸೆಪ್ಟೆಂಬರ್ ಚಳುವಳಿ-ಒಂದು ಅನುಭವ

ಸೆಪ್ಟೆಂಬರ್ ರೈತ ಚಳುವಳಿ ರಾಜ್ಯದ ರೈತ ಸಂಘದ ಕಾರ್ಯಕರ್ತರಲ್ಲಿ ವಿವಿಧ ರೀತಿಯ ಅನುಭವ ನೀಡಿದೆ. ಅಂತಹ ಅನುಭವಗಳಲ್ಲೊಂದು ಮುಳಬಾಗಿಲಿನ ರೈತ ಕಾರ್ಯಕರ್ತರಿಗಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಜೂನ್ ಸಭೆ ಕೈಗೊಂಡ ನಿರ್ಣಯದಂತೆ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿರುವ ರೈತರಿಗೆ ಸಾಗುವಳಿ ಹಕ್ಕು ಪತ್ರವನ್ನು ನೀಡಲು ಒತ್ತಾಯಿಸಿ ಮುಳಬಾಗಿಲು ತಾಲ್ಲೋಕು ರೈತ ಸಂಘ ಒಂದು ಕಾರ್‍ಯಕ್ರಮ ರೂಪಿಸಿತು. ಸುಮಾರು 7,500 ಬಗುರ್ ಹುಕ್ಕುಂ ಸಾಗುವಳಿ ಅರ್ಜಿಗಳನ್ನು ಮುದ್ರಿಸಿ 250 ಗ್ರಾಮಗಳಿಗೆ ರೈತ ಸಂಘದ ಕಾರ್ಯಕರ್ತರು ಭೇಟಿ ಮಾಡಿ ಜೂನ್ 16 ರಂದು ತಾಲ್ಲೋಕಿನ ಎಲ್ಲಾ ಕಡೆಗಳಿಂದ ಬಂದು ಸೇರಿದ 1,500 ರೈತರು ಮೆರವಣಿಗೆಯಲ್ಲಿ ತೆರಳಿ ತಹಸೀಲ್ದಾರ್‌ರಿಗೆ ಅರ್ಜಿ ಸಲ್ಲಿಸಲಾಗಿತ್ತು.

ಸಾಗುವಳಿ ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೆ ತಾಲ್ಲೋಕು ತಹಸೀಲ್ದಾರ್‌ರಿಂದ ಎಂಡಾರ್ಸ್‌ಮೆಂಟ್ ಪಡೆದು ಆಗಸ್ಟ್ 24 ರಿಂದ 30 ರವರೆಗೆ ತಾಲ್ಲೋಕಿನ 12 ಮಂಡಲ್ ಕೇಂದ್ರಗಳಿಗೆ ಕಾಲ್ನಡಿಗೆ ಜಾಥ ನಡೆಸಿ ರೈತರಸಭೆ ನಡೆಸಿ ವಿತರಿಸಲಾಗಿದೆ.

ಸೆಪ್ಟೆಂಬರ್ ರೈತ ಚಳುವಳಿ ಯಶಸ್ವಿಗೊಳಿಸಲು ನಡೆಸಿದ ತಯಾರಿಕೆಯಾಗಿ ನಡೆಸಿದ ಈ ಕಾಲ್ನಡಿಗೆ ಜಾಥದಿಂದ ತಾಲ್ಲೋಕಿನ ರೈತರಲ್ಲಿ ರೈತಸಂಘದ ಕುರಿತು ಅಪೂರ್ವ ಅನುಭವವಾಗಿದೆ.

ಜಾಥ ಬರುವ ಸುದ್ದಿ ಮೊದಲೇ ತಿಳಿದು ಪ್ರತಿಯೊಂದು ಗ್ರಾಮದ ರೈತರು ತಾವೇ ಸ್ವತಃ ಸ್ವಯಂ ಸ್ಫೂರ್ತಿಯಿಂದ ಹಣ ಸಂಗ್ರಹಿಸಿ ಸ್ವಾಗತ ಕೋರುವ ತೋರಣ ಕಟ್ಟಿ ಬಹಿರಂಗ ಸಭೆ ನಡೆಸಲು ವೇದಿಕೆ ನಿರ್ಮಿಸಿ ಸಭೆಯನ್ನು ಯಶಸ್ವಿಗೊಳಿಸಿದ ನಂತರ ಹೋರಾಟ ಮುನ್ನಡೆಸಲು ಧನ ಸಹಾಯ ನೀಡಿ ಆತ್ಮೀಯ ಬೀಳ್ಕೊಡುಗೆ ನೀಡುತ್ತಿದ್ದರು.

ಜಾಥ ಮುಂದಿನ ಗ್ರಾಮ ತಲುಪುವವರೆಗೆ ಈ ಗ್ರಾಮದ ಜನರು ಬೀಳ್ಕೊಟ್ಟು ಹಿಂದಿರುಗುತ್ತಿದ್ದರು. ಈಗೆ ಬಂದು ಗ್ರಾಮದ ಜನರು ಬೀಳ್ಕೊಟ್ಟರೆ ಮುಂದಿನ ಗ್ರಾಮದ ಜನರು ಭವ್ಯ ಸ್ವಾಗತ ಬಯಸುತ್ತಿದ್ದರು.

ರೈತರಲ್ಲಿ ಕಾಣುತ್ತಿದ್ದ ಆತ್ಮುತ್ಸಾಹಕ್ಕೆ ಕಾರಣ ರೈತ ಸಂಘ ಅವರಲ್ಲಿ ಮೂಡಿಸುತ್ತಿದ್ದ ವಿಶ್ವಾಸವೇ ಆಗಿತ್ತು. ಈ ಹಿಂದೆ ಹತ್ತಾರು ಬಾರಿ ತಾಲ್ಲೋಕು ಕಛೇರಿಗೆ ಅಲೆದು ನೂರಾರು ರೂಪಾಯಿ ಖರ್ಚು ಮಾಡಿದರೂ ದಕ್ಕದ ಎಂಡಾರ್ಸಮೆಂಟ್ ಒಂದು ಬಿಡಿಗಾಸನ್ನು ಪಡೆಯದೆ ಅವನ ಮನೆ ಬಾಗಿಲಿಗೆ ತಲುಪಿಸಿದ ರೈತ ಸಂಘದ ಬಗ್ಗೆ ಅವರಿಗೆ ಅಚ್ಚುಮೆಚ್ಚು.

ರೈತರನ್ನು ಬಾಧಿಸುವ ಜೀವಂತ ಸಮಸ್ಯೆಗೆ ರೈತ ಸಂಘ ಸ್ಪಂದಿಸಿದರೆ ಆಗುವ ಅನುಭವವಿದು ಎಂದು ಕಾ|| ಹೆಚ್. ಎನ್. ಗಾಗಮೋಹನದಾಸ್ ರವರು ಹೇಳುತ್ತಾರೆ.

ಈ ಜಾಥದಲ್ಲಿ ಕಾಲ್ನಡಿಗೆ ಕ್ಷೇತ್ರದ ಶಾಸಕರು ಆದ ಕಾ|| ಆರ್. ವೆಂಕಟರಾಮಯ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಎಂ. ಜಿ. ಕೃಷ್ಣಯ್ಯ, ಬಿ. ವಿ. ನಾಗೀರೆಡ್ಡಿ, ಹೆಚ್. ಎನ್ ನಾಗಮೋಹನ ದಾಸ್, ಗೋಪಾಲ್, ಕೃಷಿ ಕೂಲಿಗಾರ ಸಂಘದ ಪೆದ್ದವೆಂಕಟರಾಮಯ್ಯ, ಚಿನ್ನ ವೆಂಕಟರಾಮಯ್ಯ, ಡಿ.ವೈ.ಎಫ್.ಐ. ಮುಖಂಡ ಕಾ|| ಜಗನ್ನಾಥ್, ಚಿಕ್ಕರಾಮುರವರುಗಳು ಭಾಗವಹಿಸಿ ಮುಖಂಡತ್ವ ನೀಡಿದರು.

ಕಲ್ಕತ್ತಾದಿಂದ ತಿರುವನಂತಪುರದವರೆಗೆ

—ಕಾ|| ಇ. ಎಂ. ಎಸ್.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ 13 ನೇ ಅಧಿವೇಶನ ತಿರುವನಂತಪುರದಲ್ಲಿ ನಡೆಯಲಿದೆ. ಕಲ್ಕತ್ತಾದಲ್ಲಿ ನಡೆದ ಪಕ್ಷದ 12ನೇ ಅಧಿವೇಶನದ ನಂತರ ಇರುವ ಚರಿತ್ರಾರ್ಹವಾದ 3 ವರ್ಷದ ಪ್ರಯಾಣ ತಿರುವನಂತಪುರಕ್ಕೆ ತಲುಪಲಿದೆ. ಪಕ್ಷದ 10, 11 ನೇ ಅಧಿವೇಶನ ಅಂಗೀಕರಿಸಿದ ನಿಲುವೆಗಳಿಂದ 3 ವರ್ಷಗಳಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ನಡೆದಿದೆ? ಇನ್ನು ಅದನ್ನು ಹೇಗೆ ಮುಂದಕ್ಕೆ ಕೊಂಡೊಯ್ಯಲು ಸಾಧ್ಯ? ಕೇರಳ ಹಾಗೂ ಅಖಿಲ ಭಾರತ ಮಟ್ಟದಲ್ಲಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಹಾಗೂ ಪ್ರಜಾಪ್ರಭುತ್ವ ಚಳುವಳಿಯನ್ನು ಬಲಪಡಿಸಿ ಮುನ್ನಡೆಸಲು ಪಕ್ಷದ 13 ನೇ ಸಮ್ಮೇಳನ ಹಾಗೂ ಅದರ ಪೂರಕ ಚರ್ಚೆ ಹಾಗೂ ತೀರ್ಮಾನಗಳು ಹೇಗೆ ನೆರವಾಗಲಿದೆ? ಈ ನಿಟ್ಟಿನಲ್ಲಿ ಅಧಿಕಾರಯುತವಾದ ಪರಿಶೋಧನೆಯನ್ನು ಕಾ|| ಇ. ಎಂ. ಎಸ್. ನಾಲ್ಕು ವಾರಗಳ ಕಾಲ ಬರೆಯಲಿದ್ದಾರೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯ 12ನೇ ಅಧಿವೇಶನ 1985 ಡಿಸೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆಯಿತು. 13 ನೇ ಸಮ್ಮೇಳನ ತಿರುವನಂತಪುರದಲ್ಲಿ ನಡೆಯಲಿದೆ. ಕೇರಳದ ಕಳೆದ ರಾಜ್ಯ ಸಮ್ಮೇಳನ ಪಕ್ಷದಲ್ಲಿ ಒಡಕನ್ನು ಉಂಟು ಮಾಡಲಿದೆ ಎಂದು ದೀರ್ಘವಾಗಿ ಯೋಚಿಸಿದ ರಾಜಕೀಯ ಪಂಡಿತರು, ವಿರೋಧಿ ಪತ್ರಿಕೆಗಳು ನಿರಂತರವಾಗಿ ಲೇಖನಗಳನ್ನು ಬರೆದರು. ಆದರೆ, ಅವರು ನಿರಾಶರಾಗುವಂತೆ ರಾಷ್ಟ್ರೀಯ ರಾಜಕೀಯ ಮಾರ್ಗವನ್ನು ಏಕಾಭಿಪ್ರಾಯದಿಂದ ಅಂಗೀಕರಿಸಿ-ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಇವರ ಊಹಾಪೋಹಗಳಿಗೆ ಯಾವುದೆ ಆಧಾರವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಎಂ. ಬಿ. ರಾಘವನ್ ನೇತೃತ್ವದ ಸಣ್ಣ ಗುಂಪು ಸಮ್ಮೇಳನವನ್ನು ಒಟ್ಟಾರೆ ದಾರಿ ತಪ್ಪಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿದ್ದರು. ಪಕ್ಷದ 11ನೇ ಅಧಿವೇಶನ ಅಂಗೀಕರಿಸಿದ ಎಡ ಮತ್ತು ಜಾತ್ಯಾತೀತ ಪಕ್ಷಗಳ ಐಕ್ಯತೆ ಎಂಬ ನಿಲುವೆಯನ್ನು “ಅದು ಕೇರಳಕ್ಕೆ ಪೂರಕವಾದುದ್ದಲ್ಲ'' ಎಂದೂ, ಇಲ್ಲಿ ಮುಸ್ಲಿಂಲೀಗ್ ಮತ್ತು ಕೇರಳ ಕಾಂಗ್ರೆಸ್ ಒಳಗೊಂಡ ರಂಗವನ್ನು ರಚಿಸುವುದೇ ಕ್ರಾಂತಿಕಾರಿ ಮಾರ್ಗವೆಂದು ಅವರು ವಾದಿಸಿದರು. ಪ್ರತಿನಿಧಿಗಳಲ್ಲಿ ದೊಡ್ಡ ಒಂದು ಭಾಗವನ್ನು ಆ ದಾರಿಯಲ್ಲಿ ಕೊಂಡೊಯ್ಯಲು ಅವರಿಗೆ ಸಾಧ್ಯವಾಯಿತು.

ಆದರೆ ಕೇರಳದ ಪಕ್ಷದ ಬಹುಪಾಲು ಸದಸ್ಯರು, ಭಾರತದ ಒಟ್ಟಾರೆ ಪಕ್ಷವು ಒಂದಾಗಿ ನಿಂತು ಅವರ ದಾರಿ ತಪ್ಪಿದ ನಿಲುವನ್ನು ಸೋಲಿಸಿತು. ಎರಡು ತಿಂಗಳು ಬಿಟ್ಟು ನಡೆದ ಪಕ್ಷದ ಅಧಿವೇಶನದಲ್ಲಿ ತಮ್ಮ ನಿಲುವೆಯನ್ನು ಸಮರ್ಥವಾಗಿ ಊಹಿಸಲು ಕೂಡ ಅವರಿಗೆ ಸಾಧ್ಯವಾಗಲಿಲ್ಲ. ಪಕ್ಷದ ರಾಜ್ಯ ಸಮ್ಮೇಳನ ಮತ್ತು ರಾಷ್ಟ್ರದ ಅಧಿವೇಶನ ಇವರ ನಿಲುವನ್ನು ತಿರಸ್ಕರಿಸಿತು.

ಆದರೆ, ಬಹುಮತದಿಂದ ಅಂಗೀಕರಿಸಿದ ಈ ನಿಯಮಗಳಿಗೆ ಸವಾಲು ಹಾಕಲು ಪ್ರಯತ್ನ ಕೇರಳದಲ್ಲಿ ಮತ್ತೆ ಆರಂಭವಾಯಿತು. ಅದಕೆದುರಾಗಿ ಪಕ್ಷ ಕ್ರಮ ಕೈಗೊಂಡಿತು. ಅವರಿಗೆ ಆದ ತಪ್ಪನ್ನು ತಿದ್ದಲು ಸಾಕಷ್ಟು ಸಮಯ ಮತ್ತು ಅವಕಾಶವನ್ನು ಪಕ್ಷ ನೀಡಿದಾಗ ಅವರಲ್ಲಿ ಬಹು ಭಾಗ ಸರಿಯಾದ ದಾರಿಗೆ ಬರುವಂತಾಯಿತು. ಆದರೂ ಒಂದು ಅಲ್ಪ ಸಂಖ್ಯಾತ ಭಾಗ ಮತ್ತೆ ಪಕ್ಷಕ್ಕೆ ಎದುರಾಗಿ ನಿಂತಿತು ಅವರ ಮುಖಂಡನಾಗಿದ್ದ ರಾಘವನ್‌ನನ್ನು ಪಕ್ಷದಿಂದ ಹೊರ ಹಾಕಲಾಯಿತು. ಇನ್ನು ಕೆಲವರ ಮೇಲೆ ಅದಕ್ಕಿಂತ ಕಡಿಮೆ ಮಟ್ಟದ ಶಿಸ್ತಿನ ಕ್ರಮ ಕೈಗೊಳ್ಳಲು ಪಕ್ಷಕ್ಕೆ ಅನಿವಾರ್ಯವಾಯಿತು.

ಈ ಮೊದಲು ಪಕ್ಷವು ಎರಡು ವಿಭಾಗವಾಯಿತು. ಎಂ. ಬಿ. ರಾಘವನ್ ಮತ್ತು ಅವರ ಜೊತೆಯಲ್ಲಿ ಇರುವವರೇ ನಿಜವಾದ ಕಮ್ಯೂನಿಸ್ಟ್ ಪಕ್ಷವೆಂದು, ಹೇಳುವ ತರಹ ಪ್ರಚಾರವನ್ನು ವಿರೋಧಿ ಪತ್ರಿಕೆಗಳು ಮತ್ತು ರಾಜಕಾರಣಿಗಳು ನಡೆಸಿದರು. “ರಾಘವನ್ ಪಕ್ಷದೆಡೆ ಸಾವಿರಾರು ಜನ ಸಾಗುತ್ತಿದ್ದಾರೆ' ಎಂದು ಪ್ರಚಾರ ನಡೆಸಿದರು. ಆದರೆ, ಮೊದಮೊದಲು ಸಂಶಯಗ್ರಸ್ತವಾಗಿದ್ದ ಸಣ್ಣ ವಿಭಾಗ ಪಕ್ಷದ ನಾಯಕತ್ವದ ಹಿಂದೆ ಅಣಿನೆರೆದಿಯಿತು. ಪಕ್ಷದ ಹಿತೈಷಿಗಳಾಗಲಿದ್ದ ಜನತೆ ಪಕ್ಷ ತೆಗೆದುಕೊಂಡ ದಿಟ್ಟವಾದ ನಿಲುವೆಯನ್ನು ಸ್ವಾಗತಿಸಿದರು. ಪಕ್ಷದ ಹೊರಗಿರುವ ಬಹುಜನರು 'ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಐಕ್ಯತೆ' ಎಂಬ ಪಕ್ಷದ ನಿಲುವೆಯನ್ನು ಸ್ವಾಗತಿಸಿದರು. ಇದರ ಫಲ 1987 ಮಾರ್ಚ್ 23ರಂದು ನಡೆದ ಚುನಾವಣೆಯಲ್ಲಿ ಮೂಡಿಬಂತು.

ಇದೇ ಸಮನಾದ ಒಂದು ಘಟನೆ ಪಕ್ಷದ 10 ಮತ್ತು 11ನೇ ಅಧಿವೇಶನದ ನಡುವಿನಲ್ಲಿ ನಡೆಯಿತು. ಇಂದಿರಾಗಾಂಧಿ ಸರ್ವಾಧಿಕಾರವನ್ನು ಕೆಳಗಿಳಿಸುವ ಪ್ರಯತ್ನದಲ್ಲಿ ತಾತ್ಕಾಲಿಕವಾಗಿ ಜನಸಂಘವನ್ನು ಒಳಗೊಂಡು ಐಕ್ಯ ಕಾರ್ಯಾಚರಣೆಯಲ್ಲಿ ವಿರೋಧ ಪಕ್ಷದ ನಿಲುವೆಯನ್ನು 'ಪಕ್ಷದ ಶಾಶ್ವತವಾದ ಕ್ರಾಂತಿಕಾರಿ ಹೋರಾಟ ತಂತ್ರವೆಂದು' ಭಾವಿಸಿ, ಜನತಾ ಸರ್ಕಾರಕ್ಕೆ ಎದುರಾಗಿ ಪಕ್ಷವು ಕೈಗೊಂಡ ನಿಲುವೆಯನ್ನು ಬಂಗಾಳದ ಘಟಕ ವಿರೋಧಿಸಿತು. ಅದು ಪಕ್ಷದ 11ನೇ ಅಧಿವೇಶನದಲ್ಲೂ ಉಬ್ಬರವನ್ನುಂಟು ಮಾಡಿತು. ಆದರೆ 11 ನೇ ಅಧಿವೇಶನ ಸೇರಿದಾಗ ಪಶ್ಚಿಮ ಬಂಗಾಳ ಬಿಟ್ಟು ಉಳಿದೆಲ್ಲಾ ಕಡೆಗಳಿಂದ ಬಂದ ಪ್ರತಿನಿಧಿಗಳು ಪಕ್ಷದ ನಿಲ್ಲುವೆಯನ್ನು ಅಂಗೀಕರಿಸಿದರು. ಈ ಐಕ್ಯದ ಶಕ್ತಿ ನೋಡಿ ಬಂಗಾಳ ಘಟಕ ಕೂಡ ಅವರ ನಿಲುವೆಯನ್ನು ಹಿಂತೆಗೆದುಕೊಂಡಿತು. ಅವರೂ ಕೂಡ ಅಂಗೀಕಾರ ನೀಡಿದ ರಾಜಕೀಯ ಧೋರಣೆಯನ್ನು ಪಕ್ಷದ 11ನೇ ಅಧಿವೇಶನ ಅಂಗೀಕರಿಸಿತು.

ಈ ಎರಡು ಘಟನೆಗಳಿಂದ ಜಾತೀಯ ಮತೀಯಕೋಮುವಾದಿ ಶಕ್ತಿಗಳೊಂದಿಗೆ ಇರುವ ರಾಜಕೀಯದಲ್ಲಿ ಕಾರ್ಮಿಕ ವರ್ಗದ ಪಕ್ಷಕ್ಕಿರುವ ಸಂಬಂಧ ಏನೆಂದು ವ್ಯಕ್ತವಾಗುತ್ತದೆ. ಕಾರ್ಮಿಕವರ್ಗದ ಐಕ್ಯತೆಯನ್ನು ಮುರಿಯಲು ಮಾತ್ರವೇ ಉಪಯೋಗಿಸುವ ಕೋಮುವಾದಕ್ಕೆ ಕಾರ್ಮಿಕವರ್ಗದ ರಾಜಕೀಯ ವಿರೋಧವಾಗಿದೆ. ಅದನ್ನು ಸಾರಸಗಟಾಗಿ ವಿರೋಧಿಸದೆ ಕಾರ್ಮಿಕ ವರ್ಗದ ಐಕ್ಯತೆಯು, ಅದನ್ನು ಒಳಗೊಂಡ ವಿಶಾಲವಾದ ಪ್ರಜಾಪ್ರಭುತ್ವವಾದ ಚಳುವಳಿಯನ್ನು ಬೆಳೆಸಲು ಸಾಧ್ಯವಿಲ್ಲ. ಆದರೆ ತುರ್ತಾಗಿ ತೆಗೆದುಕೊಳ್ಳಬೇಕಾದ ಕೆಲವು ಕೆಲಸಗಳಿಗಾಗಿ, ಕೋಮುವಾದಿ ಶಕ್ತಿಗಳನ್ನು ಪ್ರತಿನಿಧಿಸುವ ರಾಜಕೀಯ ಶಕ್ತಿಗಳೊಂದಿಗೆ ತಾತ್ಕಾಲಿಕವಾಗಿ ಕೆಲವೊಮ್ಮೆ ಸಹಕರಿಸಬೇಕಾಗಬಹುದು. (ಇದುವೇ ಕೇರಳದಲ್ಲಿ ಮುಸ್ಲಿಂಲೀಗ್‌ನೊಂದಿಗೆ ಹಾಗೂ ಅಖಿಲ ಭಾರತ ಮಟ್ಟದಲ್ಲಿ ಜನಸಂಘದೊಂದಿಗೆ ತಾತ್ಕಾಲಿಕವಾಗಿ ಸಹಕರಿಸಲು ಪಕ್ಷವನ್ನು ಪ್ರೇರೆಪಿಸಿತು.)

ಆದರೆ, ಜಾಸ್ತಿ ವಿಶಾಲವಾಗಿರುವ ಗುರಿಯನ್ನು ಇರಿಸಲೋಸುಗ ತಾತ್ಕಾಲಿಕವಾಗಿ ಕೈಗೊಳ್ಳುವ ಈ ತಂತ್ರವನ್ನು ಪಕ್ಷದಲ್ಲೇ ಶಾಶ್ವತ ಹೋರಾಟ ತಂತ್ರವಾಗಿ ಅಂಗೀಕರಿಸಬಾರದು. ಆ ತಪ್ಪೇ ಪಕ್ಷದ 11 ನೇ ಅಧಿವೇಶನಕ್ಕೆ ಮೊದಲು ಬಂಗಾಳ ಘಟಕಕ್ಕೆ ಮತ್ತು 12 ನೇ ಸಮಾವೇಶಕ್ಕೆ ಮೊದಲು ಹಾಗೂ ನಂತರ ಕೇರಳದ ಎಂ.ವಿ. ರಾಘವನ್ ಗುಂಪಿಗೆ ಆದ ತಪ್ಪು.

ಇದರಲ್ಲಿ ಬಂಗಾಳದ ಪಕ್ಷದ ಸಂಗಾತಿಗಳಿಗೆ ಆದ ತಪ್ಪುಗಳನ್ನು ತಿದ್ದಲು ಆಶಯವಾದ ತಳಪಾಯವನ್ನು 10 ನೇ ಅಧಿವೇಶನ ಇರಿಸಿತು. ಜನಸಂಘ ಒಳಗೊಂಡ ಜನತಾ ಸರಕಾರಕ್ಕೆ ಬೆಂಬಲಿಸಲು ರಾಜಕೀಯ ನಿಲುವೆಯನ್ನು ಸರಿ ಎಂದಿತು. ಅದೇ ವೇಳೆಯಲ್ಲಿ ಜನಸಂಘವನ್ನು ನಿಯಂತ್ರಿಸುವ ಆರ್.ಎಸ್.ಎಸ್.ನ ಧೋರಣೆಯನ್ನು ಜನತಾ ಪಕ್ಷದೊಳಗೆ ಪೂರ್ತಿಯಾಗಿ ವ್ಯಾಪಿಸಿರುವ ಇನ್ನಿತರ ರಾಜಕೀಯ ಧೋರಣೆಗಳು ಪ್ರಜಾಪ್ರಭುತ್ವ ಚಳುವಳಿಗೆ ತೀರಾ ಅಪಾಯಕಾರಿ ಎಂದು ಪಕ್ಷದ ಅಧಿವೇಶನ ಎತ್ತಿ ತೋರಿಸಿಕೊಟ್ಟಿತು. ಪ್ರಜಾಪ್ರಭುತ್ವ ವಾದಿ ಶಕ್ತಿಗಳ ಐಕ್ಯತೆಯನ್ನು ಒಡೆಯಲು ಉಪಯೋಗಿಸುವ ಈ ಕ್ರಮಗಳಿಗೆ ಎದುರಾಗಿ ದೃಢವಾಗಿ ನಿಂತು ಹೋರಾಡುವ ಅಗತ್ಯತೆಯನ್ನು ಪಕ್ಷದ ಅಧಿವೇಶನ ಒತ್ತಿ ಹೇಳಿತು. ಈ ಧೋರಣೆಯಿಂದ ದೂರ ಸರಿದು “ಜನತಾ ಪಕ್ಷದೊಂದಿಗೆ ಶಾಶ್ವತವಾದ ಐಕ್ಯತೆ” ಎಂಬ ನಿಲುವೆಯನ್ನು ಬಂಗಾಳದ ಸಂಗಾತಿಗಳು ಕೈಗೊಂಡಿದ್ದು.

ಈ ನಿಲುವೆಯನ್ನು ತಿರಸ್ಕರಿಸಿ ಕಾಂಗ್ರೆಸ್ ಸರ್ವಾಧಿಕಾರಿ ಪ್ರವೃತ್ತಿಗೆ ಎದುರಾಗಿ ಚಳುವಳಿಯ ಒಂದು ಭಾಗವಾಗಿ ಜಾತೀಯ ಮತೀಯ ಹಾಗೂ ಕೋಮುವಾದಿ ಶಕ್ತಿಗಳಿಗೆ ಎದುರಾಗಿ ಹೋರಾಡುವ ತಂತ್ರ ರೂಪಿಸುವುದೇ 11 ನೇ ಅಧಿವೇಶನವಾಗಿತ್ತು. ಹಿಂದು ಮತ್ತು ಹಿಂದುಯೇತರ ಮತ ವಿಭಾಗದ ಪ್ರಮುಖರು ಬಹು ಸಂಖ್ಯಾತ ಅಲ್ಪ ಸಂಖ್ಯಾತ ಜಾತಿ ಪ್ರಮುಖರ ಭಾಷೆ-ಪ್ರಾದೇಶಿಕ ಶಕ್ತಿಗಳಪ್ರತಿನಿಧಿಗಳಾದ ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳ ರೂಪರೇಖೆಯೇ ಅವರಿಗೆದುರಾಗಿ ಹೋರಾಟದ ಕರೆಯನ್ನು 11 ನೇ ಅಧಿವೇಶನ ನೀಡಿತು. ಅದರಂತೆ 1984 ನವೆಂಬರ್‌ನಲ್ಲಿ ಲೋಕಸಭಾ ಚುನಾವಣೆ ಅನುಭವ ಆಧರಿಸಿ ಕೇರಳದಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ಸೋದರರಿಂದ ಸಂಬಂಧದಿಂದ ಕ್ರಮೇಣ ಕಳಚಿಕೊಳ್ಳಬೇಕೆಂದು ಕೇಂದ್ರ ಸಮಿತಿ ಕೇರಳ ಸಂಘಟನೆಗೆ ಉಪದೇಶ ನೀಡಿತು. ಇದಕ್ಕೆದುರಾಗಿಯೇ ಎಂ. ಬಿ. ರಾಘವನ್ ಬಳಗ ಪ್ರತಿರೋಧದ ಬಾವುಟ ಎತ್ತಿದರು.

ಹೀಗೆ ಪಕ್ಷದ ಎರಡು ಅಧಿವೇಶನಗಳು ಅಂಗೀಕರಿಸಿದ ಪಕ್ಷದ ಧೋರಣೆಯನ್ನು-ಕಾಂಗ್ರೆಸ್‌ನ ಸರ್ವಾಧಿಕಾರವನ್ನು ಎದುರಿಸುವ ಜೊತೆಯಲ್ಲಿ ಜಾತೀಯ-ಮತೀಯ ಹಾಗು ಕೋಮುವಾದಿ ಶಕ್ತಿಗಳನ್ನು ಎದುರಿಸುವ ನಿಲುವೆಯನ್ನು ಪಕ್ಷದ 12 ನೇ ಅಧಿವೇಶನ ಸ್ಪಷ್ಟಪಡಿಸಿದರೂ, ನಂತರದ ಕಾಲಾವಧಿಯಲ್ಲಿ ಎಷ್ಟರ ಮಟ್ಟಿಗೆ ಸರಿಯೆಂದು ಪಕ್ಷದ ಒಳಗೆ ಹಾಗು ಹೊರಗೆ ಅನುಮಾನ ಬೆಳೆದುಬರುವಂತಾಯಿತು.

ಉದಾಹರಣೆಗಾಗಿ, ಬೋಫೋರ್ಸ್ ಫಿರಂಗಿ ಸಂಬಂಧಿಸಿದ ಆರೋಪಗಳಿಗೆ ಸಂಬಂಧಪಟ್ಟು, ಅಧ್ಯಕ್ಷ ಚುನಾವಣೆಯಲ್ಲಿ ಜೈಲ್‌ಸಿಂಗರನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಲು ಬೆಳೆದುಬಂದ ರಾಜಕೀಯ ಚರ್ಚೆಯಲ್ಲಿ ಬಿ.ಜೆ.ಪಿ. ಸೇರಿದಂತಹ ರಾಜಕೀಯ ಪಕ್ಷಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಬೇಕೆಂಬ ವಾದವನ್ನು ಪಕ್ಷದ ಒಳಗಡೆ ಹಾಗು ಹೊರಗಡೆ ಬೆಳೆದು ಬಂತು. ಈ ಹೊಂದಾಣಿಕೆ ಇಲ್ಲದೆ ಮುಂ-ಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಲು ಸಾಧ್ಯವಿಲ್ಲವೆಂದು ಲೆಕ್ಕಹಾಕಿದರು. ಬಿ. ಜೆ. ಪಿ. ಸಾರಿದಂತಹ ಬಂದ್ ಐಕ್ಯರಂಗ ಮಾಡಿದರೆ 1977ರ ನಂತರ ಕಾಂಗ್ರೆಸ್ಸನ್ನು ಬೇಗನೆ ಸೋಲಿಸಲು ಸಾಧ್ಯವೆಂದು ಕನಸು ಕಂಡರು.

ಇದರಲ್ಲಿ ಮೊದಲನೆಯದು ತಪ್ಪೆಂದು ಕೇರಳದ ಅನುಭವ ಸಾಬೀತು ಪಡಿಸುತ್ತದೆ. ಮುಸ್ಲಿಂಲೀಗ್ ಮತ್ತು ಕೇರಳ ಕಾಂಗ್ರೆಸ್ ಇಲ್ಲದೆ ಕಾಂಗ್ರೆಸ್ಸನ್ನು ಸೋಲಿಸಲು ಸಾಧ್ಯವಿಲ್ಲವೆಂದು ಅವರ ವಾದವಾಗಿತ್ತು.

ಅದು ಸುಳ್ಳೆಂದು ಈಗ ಅನುಭವದಿಂದ ತಿಳಿದಿದೆ. ಇಲ್ಲಿನ ಯು. ಡಿ. ಎಫ್. ಒಂದಾಗಿ ನಿಂತು, ಅವರೊಂದಿಗೆ ಬಿ.ಜೆ.ಪಿ. ಸಹಕರಿಸಿದರೂ ಕೂಡ ಎಲ್.ಡಿ.ಎಫ್.ಗೆ ಜಯ ಸಾಧಿಸಲು ಸಾಧ್ಯವೆಂದು ಕಳೆದಪಂಚಾಯತ್ ಚುನಾವಣೆ ತೋರಿಸಿ ಕೊಟ್ಟಿದೆ.

ಅಖಿಲ ಭಾರತ ಮಟ್ಟದಲ್ಲಿ ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ. ಗುಂಪನ್ನು ಜನರಿಂದ ಪ್ರತ್ಯೇಕಗೊಳಿಸಿ, ಕಾಂಗ್ರೆಸ್ಸನ್ನು ಸೋಲಿಸಲು ಸಾಧ್ಯವೆಂದು ಪೂರ್ಣ ವಿಶ್ವಾಸದೊಂದಿಗೆ ಮುಂದುವರಿಯಲು ಸಾಧ್ಯವಿದೆ. ಆದರೆ ಒಂದು ಷರತ್ತು: ಎಡರಂಗದ ಪಕ್ಷಗಳ ರೀತಿಯ ಇತರೆ ಜಾತ್ಯಾತೀತ ವಿರೋಧ ಪಕ್ಷಗಳು ಜಾತಿ-ಮತ ಮತ್ತು ಕೋಮುವಾದಿ ಶಕ್ತಿಗಳಿಗೆದುರಾಗಿ ಹೋರಾಟ ಮಾಡಲು ತಮ್ಮ ರಾಜಕೀಯ ಕೆಲಸದ ಒಂದು ಪ್ರಧಾನ ಕರ್ತವ್ಯವನ್ನಾಗಿ ಪರಿಗಣಿಸಬೇಕು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಭಾರತದ ಪ್ರಜಾಪ್ರಭುತ್ವ ಚಳುವಳಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆದುರಾಗಿ-ಅದರ ಅಸ್ತ್ರವನ್ನು ತಿರುಗಿಸಿತು. ಆದರೆ ಮುಖ್ಯ ವೈರಿಯನ್ನು ಸೋಲಿಸಲು ಕೂಡ ಜಾತಿ, ಮತ ಹಾಗೂ ಕೋಮುವಾದಿ ಶಕ್ತಿಗಳನ್ನು ಎದುರಿಸಿ ದೇಶದ ಐಕ್ಯತೆ ಸ್ಥಾಪಿಸಬೇಕೆಂದು ದೇಶಪ್ರೇಮಿಗಳಿಗೆ ತಿಳಿದಿತ್ತು. ಜಾತಿ-ಮತ-ಕೋಮುವಾದಿ ಶಕ್ತಿಗಳ ಮುಖಂಡರು ಅಂದು ಬ್ರಿಟಿಷ್ ಆಡಳಿತಗಾರರ ತೀರಾ ಹತ್ತಿರದ ಸಂಬಂಧಿಗಳಾಗಿದ್ದರು. ಅದೇ ರೀತಿಯಲ್ಲಿ ಈಗಲೂ ಭಾರತದ ಪ್ರಜಾಪ್ರಭುತ್ವ ಚಳುವಳಿಯ ಮುಖ್ಯ ಶತ್ರುವಾಗಿದ್ದ ಕಾಂಗ್ರೆಸ್ ಆಡಳಿತಗಾರರ ಏಕೈಕ ಸಂಬಂಧಿಕರು ಜಾತಿ-ಮತ-ಕೋಮುವಾದಿ ಶಕ್ತಿಗಳ ಬೂರ್ಜ್ವಾ ಮುಖಂಡರು ಆಗಿದ್ದಾರೆ. ಅವರಿಗೆದುರಾಗಿ ಹೋರಾಟ ನಡೆಸದೆ ಕಾಂಗ್ರೆಸ್ಸಿನ ಸರ್ವಾಧಿಕಾರಿ ನೀತಿಯನ್ನು ಎದುರಿಸಲು ಸಾಧ್ಯವಿಲ್ಲ.

ತಿರುವನಂತಪುರದಲ್ಲಿ ಮುಂದೆ ನಡೆಯಲಿರುವ ಪಕ್ಷದ ಅಧಿವೇಶನದಮುಂದಿರುವ ಪ್ರಮುಖ ಪ್ರಶ್ನೆ ಇದಾಗಿದೆ. ಪಕ್ಷದ 10 11, 12ನೇ ಅಧಿವೇಶನ ಕೈಗೊಂಡ ನಿಲುವೆಯನ್ನು ಕಾಂಗ್ರೆಸ್ಸಿನ ಸರ್ವಾಧಿಕಾರವನ್ನು ಸೋಲಿಸಲು, ಜಾತಿ-ಮತ-ಕೋಮುವಾದಿ ಶಕ್ತಿಗಳಿಂದ ದೇಶದ ಐಕ್ಯತೆಯನ್ನು ರಕ್ಷಿಸುವ ಎರಡು ಕರ್ತವ್ಯಗಳನ್ನು ಒಂದು ಕೂಡಿಸಿ ಹೋಗುವುದೇ ನಿಲುವೆಯಾಗಿ ಕಳೆದ 3 ವರ್ಷ ಕಾಲದಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ನಡೆದಿದೆ? ಇನ್ನು ಹೇಗೆ ಮುನ್ನಡೆಸಲು ಸಾಧ್ಯ? ಅಖಿಲಭಾರತ ಮಟ್ಟದಲ್ಲಿರುವ ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಯನ್ನು ವಿಶಾಲ ಪ್ರಜಾಪ್ರಭುತ್ವ ಚಳುವಳಿಯನ್ನು ಬಲಪಡಿಸಿ ಮುನ್ನಡೆಸುವ ಬಗ್ಗೆ ಚರ್ಚೆ ಹಾಗು ಆ ಬಗ್ಗೆ ಹೊರ ಬರುವ ತೀರ್ಮಾನಗಳು ಸಹಕಾರಿಯಾಗಲಿವೆ.

ಮುಂದುವರಿಯುವುದು

ಚಿಂತಾ ಕೃಪೆ)

ಅನುವಾದ: ಇ.ಕೆ.ಎನ್. ರಾಜನ್
ಕುಮಾರ್ ಕುಂದಾಪುರ

ಪಕ್ಷದಸುಳ್ಯತಾ||ಸಮ್ಮೇಳನ

ಕಾಂಗ್ರೆಯೇತರ ರಾಜ್ಯಗಳ ಬಗ್ಗೆ ಮಲತಾಯಿ ಧೋರಣೆ, ತ್ರಿಪುರದಲ್ಲಿ ಸಿ.ಪಿ.ಐ.(ಎಂ) ಪಕ್ಷದ ಮೇಲೆ ದಾಳಿ, ಪಂಜಾಬ್‌ನಲ್ಲಿ 59 ನೇ ಸಂವಿಧಾನ ತಿದ್ದುಪಡಿ ಮಸೂದೆ ಜಾರಿಗೊಳಿಸುವ ಸಂಚು, ದೇಶದ ಐಕ್ಯತೆ ಸಮಗ್ರತೆ ಕಾಪಾಡಲು ರಾಜೀವ್ ಗಾಂಧಿ ಸಂಪೂರ್ಣ ವಿಫಲನಾಗಿದ್ದಾರೆ. ದೇಶದ ಎಡ-ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸಲು ಶ್ರಮಿಸುವಂತೆ ಸಿ.ಪಿ.ಐ. (ಎಂ) ರಾಜ್ಯ ಸಕ್ರೆಟಾರಿಯೇಟ್ ಸದಸ್ಯರಾದ ಕಾ|| ಕೆ. ಆರ್. ಶ್ರೀಯಾನ್ ರವರು ಕರೆ ನೀಡಿದರು. ಅವರು ಸುಳ್ಯದಲ್ಲಿ ನಡೆದ ಪಕ್ಷದ ತಾಲೋಕು ಸಮ್ಮೇಳನದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದರು.

ಅಗಸ್ಟ್ 26 ರಂದು ನಡೆದ ಸಮ್ಮೇಳನದಲ್ಲಿ ತಾಲೆ (ಕ) ಕಾರ್ಯದರ್ಶಿಯವರು ಮಂಡಿಸಿದ ವರದಿಯ ಮೇಲೆ ಚರ್ಚೆ-ವಿಮರ್ಶೆನಡೆಸಲಾಯಿತು. ಕಾ|| ಕೆ. ಆರ್. ಶ್ರೀಯಾನ್ ರವರು ಪ್ರಸಕ್ತ ರಾಜಕೀಯ ಬೆಳವಣಿಗೆ ಪಕ್ಷದ ನಿಲುವೆಗಳ ಕುರಿತು ಮಾತನಾಡಿದರು.

ನೂತನ ತಾಲೋಕು ಸಮಿತಿಗೆ ಕಾ|| ಕೆ. ಮೋನಪ್ಪಗೌಡ ಕಾರ್ಯದರ್ಶಿಯಾಗಿ ಹಾಗೂ ಕಾ||ಕೆ. ಸೂರ್ಯನಾರಾಯಣಭಟ್ ಎಲ್. ರಾಸಯ್ಯ, ಬಾಲಕೃಷ್ಣಗೌಡ. ಕೆ. ಕುಂಞಕಣ್ಣ, ಕೆ. ಬೆಳ್ಳಿಯಪ್ಪಗೌಡರ ವರನ್ನೊಳಗೊಂಡ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಆಸ್ಪತ್ರೆ ಮತ್ತು ಇತರ ಸಂಸ್ಥೆಗಳ ಮಸೂದೆ

ಟ್ರೇಡ್ ಯೂನಿಯನ್ ಹಕ್ಕುಗಳ ಮೇಲೆ ಪ್ರಹಾರದ ಆರಂಭ

ಆಸ್ಪತ್ರೆ ಮತ್ತು ಇತರ ಸಂಸ್ಥೆಗಳ (ನೌಕರರ ಕುಂದುಕೊರತೆಗಳ ಪರಿಹಾರ) ಮಸೂದೆ 1987 ನ್ನು ಕೊನೆಗೂ ಕೇಂದ್ರ ಸರ್ಕಾರ ಪಾರ್ಲಿಮೆಂಟಿನಲ್ಲಿಟ್ಟು ಶಾಸನವಾಗಿಸಲು ಸೊಂಟಕಟ್ಟಿ ನಿಂತಿದೆ. ಬಜೆಟ್ ಅಧಿವೇಶನದಲ್ಲಿ ರಾಜ್ಯಸಭೆಯಲ್ಲಿ ಇದು ಈಗಾಗಲೇ ಮಂಜೂರಾಗಿದ್ದು, ಈಗ ನಡೆಯುತ್ತಿರುವ ಮಳೆಗಾಲದ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಚರ್ಚೆಗೆ ಬರುವುದಿದೆ. ಇದೇ ಅಧಿವೇಶನದಲ್ಲಿ ಮಂಡಿಸಿರುವ ಟ್ರೇಡ್ ಯೂನಿಯನ್ ಮತ್ತು ಕೈಗಾರಿಕಾ ವಿವಾದಗಳ ಮಸೂದೆ (ತಿದ್ದುಪಡಿ)ಯ ಜತೆ, ಇದು ಕಾರ್ಮಿಕ ವರ್ಗ ಹಲವು ದಶಕಗಳ ಅವಿರತ ಹೋರಾಟ ಬಲಿದಾನಗಳಿಂದ ಗಳಿಸಿರುವ ಟ್ರೇಡ್ ಯೂನಿಯನ್ ಹಕ್ಕುಗಳ ಮೇಲೆ ಕೇಂದ್ರ ಸರ್ಕಾರದ ಭಾರೀ ಪ್ರಹಾರದ ಆರಂಭವಾಗಿದೆ.

ಈ ಮಸೂದೆಯನ್ನು 1978 ರಲ್ಲಿ ಮೊದಲ ಭಾರಿಗೆ ಆಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಜನತಾ ಸರ್ಕಾರ ತಂದಿತ್ತು. ಟ್ರೇಡ್ ಯೂನಿಯನ್ ಚಳುವಳಿಯ ಪ್ರಬಲ ವಿರೋಧದಿಂದಾಗಿ ಅದನ್ನು ಸರ್ಕಾರ ಹಿಂತೆಗೆದುಕೊಂಡಿತ್ತು. ಪುನಃ 1982 ರಲ್ಲಿ ಕಾಂಗ್ರೆಸ್ ಕೇಂದ್ರ ಸರ್ಕಾರ ಇದನ್ನು ತರಲು ಪ್ರಯತ್ನಿಸಿದಾಗ, ಪುನಃ ಪ್ರಬಲ ವಿರೋಧದಿಂದಾಗಿ ಹಿಂತೆಗೆಯಬೇಕಾಯಿತು. ಈ ವರ್ಷ ಪುನಃ ಇದನ್ನು ಶಾಸನವಾಗಿ ತರಲು ಪ್ರಯತ್ನಿಸುತ್ತಿದೆ.

ಈ ಮಸೂದೆ ಸುಪ್ರೀಂ ಕೋರ್ಟ್ 1970 ಮತ್ತು 1978ರಲ್ಲಿ ಆಸ್ಪತ್ರೆಗಳು, ಶೈಕ್ಷಣಿಕ ಸಂಸ್ಥೆಗಳು, ವೈಜ್ಞಾನಿಕ ಸಂಸ್ಥೆಗಳು ಮುಂತಾದವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕೈಗಾರಿಕಾ ವಿವಾದ ಕಾನೂನು ಅನ್ವಯವಾಗುತ್ತದೆ. ಈ ಕಾನೂನಿನ ಪ್ರಕಾರ ಈ ಸಂಸ್ಥೆಗಳನ್ನು 'ಕೈಗಾರಿಕೆ' ಯೆಂದೂ, ಇಲ್ಲಿನ ಉದ್ಯೋಗಿಗಳನ್ನು 'ಕಾರ್ಮಿಕ' ರೆಂದು ಪರಿಗಣಿಸಿ, ಈ ಕಾನೂನು ಕಾರ್ಮಿಕರಿಗೆ ಕೊಡುವ ಎಲ್ಲಾ ಹಕ್ಕುಗಳು ಸವಲತ್ತುಗಳು ಅವರಿಗೂ ಇದೆ ಎಂದು ತೀರ್ಪಿತ್ತು. ಈ ತೀರ್ಪಿನ ಆಶಯದ ವಿರುದ್ಧ ಸರ್ಕಾರ ಕೈಗಾರಿಕಾ ವಿವಾದ ಕಾನೂನಿನಲ್ಲಿ ತಿದ್ದುಪಡಿಗಳನ್ನು ತಂದು ಆಸ್ಪತ್ರೆ ಮತ್ತಿತರ ಸಂಸ್ಥೆಗಳ ಕಾರ್ಮಿಕರನ್ನು ಇದರ ಅನ್ವಯದಿಂದ ತೆಗೆದು ಹಾಕಿತು. ಇದೇ ಪ್ರತಿಗಾಮಿ ನೀತಿಯ ಮುಂದುವರಿಕೆ ಈ ಮಸೂದೆ.

ಅಪಾಯಕಾರಿ ಪ್ರಹಾರ

'ಮಸೂದೆಯ ಮುಖ್ಯಾಂಶ' ಗಳನ್ನು (ಬಾಕ್ಸ್ ನೋಡಿ) ಗಮನಿಸಿದರೆ ಇದು ಅನ್ವಯವಾಗುವ ಸಂಸ್ಥೆಗಳ ಕಾರ್ಮಿಕರ ಹಕ್ಕುಗಳ ಮೇಲೆ, ಸವಲತ್ತುಗಳ ಮೇಲೆ ಪ್ರಹಾರದ ಆಳ ಗೊತ್ತಾಗುತ್ತದೆ. ಕಾರ್ಮಿಕರ ಕುಂದುಕೊರತೆಗಳನ್ನು ಪರಿಹಾರ ಕೊಡುವ ಬದಲಿ ವ್ಯವಸ್ಥೆಯ ಹೆಸರಿನಲ್ಲಿ ಅವರ ಹಕ್ಕುಗಳನ್ನು ದಮನ ಮಾಡುತ್ತದೆ. ಇದು ಕ್ರೂರ ವಿಪರ್ಯಾಸ. ಏಕೆಂದರೆ ಈ ಕಾರ್ಮಿಕರಿಗೆ ಸುಪ್ರೀಂ ಕೋರ್ಟಿನ ಪ್ರಕಾರ ಕೈಗಾರಿಕಾ ವಿವಾದ ಕಾನೂನಿನ ಎಲ್ಲಾ ಸವಲತ್ತುಗಳು, ಕುಂದು ಕೊರತೆ ಪರಿಹಾರ ಮಾಡಿಕೊಳ್ಳಲು ಬೇಕಾದ ಹಕ್ಕುಗಳು ಲಭ್ಯವಿದ್ದವು. ಅದನ್ನು ಒಂದು ಕೈಯಿಂದ ಕಿತ್ತುಕೊಂಡು, ಇನ್ನೊಂದು ಕಡೆ, ಹೊಸ ವ್ಯವಸ್ಥೆ ಮಾಡುವುದು ಈ ಮಸೂದೆಯ ಹಿಂದಿನ ದುರುದ್ದೇಶಗಳಿಗೆ ಹಿಡಿದ ಕನ್ನಡಿ.

ಮಸೂದೆ ಕಾರ್ಮಿಕರ ಸಮಸ್ಯೆಗಳನ್ನು ಅಚ್ಚುಕಟ್ಟಾಗಿ ವೈಯಕ್ತಿಕ ಮತ್ತು ಸಾಮೂಹಿಕ ಎಂದು ವಿಂಗಡಿಸುತ್ತದೆ. ನಮಗೆ ಗೊತ್ತಿರುವ ವ್ಯವಸ್ಥೆಯಲ್ಲಿ ಕಾರ್ಮಿಕನ ವೈಯಕ್ತಿಕ, ಸಾಮೂಹಿಕ ಸಮಸ್ಯೆಗಳಿಗಾಗಿ ಟ್ರೇಡ್ ಯೂನಿಯನ್ ಅವನನ್ನು ಪ್ರತಿನಿಧಿಸುತ್ತದೆ. ಈ ಹೊಸ ವ್ಯವಸ್ಥೆಯಲ್ಲಿ ವೈಯಕ್ತಿಕ ಸಮಸ್ಯೆಗಳಿಗೆ ಮೂರು ಹಂತದ ವ್ಯವಸ್ಥೆ ಇದೆ. ಇದರಲ್ಲಿ ಮೊದಲ ಹಂತದಲ್ಲಿ ಪರಿಹಾರ ಒದಗಿಸುವವರು ಕುಂದುಕೊರತೆ ಪರಿಹಾರ ಅಧಿಕಾರಿ. ಈತ ಸಂಸ್ಥೆಯ ಮ್ಯಾನೇಜ್‌ಮೆಂಟಿನಿಂದ ನೇಮಿಸಲ್ಪಟ್ಟ ಅಧಿಕಾರಿ. ಉದಾಹರಣೆಗೆ ಶಾಲಾ ಕಾಲೇಜು, ಆಸ್ಪತ್ರೆಗಳಲ್ಲಿ ಉದ್ಯೋಗಿಯೊಬ್ಬನ ವಿಭಾಗದ ಮುಖ್ಯಸ್ಥ ಈ ಅಧಿಕಾರಿಯಾಗಿರುತ್ತಾನೆ. ಇಲ್ಲಿ ಗಮನಿಸಬೇಕಾದ್ದು ಸಾಮಾನ್ಯವಾಗಿ ಈ ಅಧಿಕಾರಿ ಉದ್ಯೋಗಿಯ ಮೇಲಧಿಕಾರಿ ಆಗಿರುತ್ತಾನೆ. ಅಂದರೆ ಉದ್ಯೋಗಿ ವೈಯಕ್ತಿಕ ಕಿರುಕುಳ, ತೊಂದರೆ, ದೂರು ಇದ್ದರೆ ಅದು ಈ ಮೇಲಧಿಕಾರಿ ಸಂಬಂಧದಲ್ಲೇ ಇರುವ ಸಾಧ್ಯತೆ ಬಹಳ ಹೆಚ್ಚು. ಆದ್ದರಿಂದ ಈ ಹಂತದಲ್ಲಿ ಕಾರ್ಮಿಕನಿಗೆ ನ್ಯಾಯ ಸಿಗುವ ಸಾಧ್ಯತೆ ಬಹಳ ಕಡಿಮೆ. ಇನ್ನು ಎರಡನೆ ಹಂತ ಸಹ ಮ್ಯಾನೇಜ್‌ಮೆಂಟಿನಿಂದ ನೇಮಿಸಲ್ಪಟ್ಟ ಅಪೀಲು ಅಧಿಕಾರಿ. ಇದು ಹೆಚ್ಚಾಗಿ ಸಂಸ್ಥೆಯ ಮುಖ್ಯಸ್ಥನಾಗಿರುತ್ತಾನೆ. ಉದಾಃ ಕಾಲೇಜು ಪ್ರಿನ್ಸಿಪಾಲ್. ಈತ ವಿಭಾಗದ ಮುಖ್ಯಸ್ಥನ ನಿರ್ಧಾರಗಳನ್ನು ಎತ್ತಿಹಿಡಿಯುವುದು ಇಂತಹ ಸಂಸ್ಥೆಗಳ ಆಡಳಿತ ಹೇಗೆ ನಡೆಯುತ್ತದೆ ಎಂದು ಗೊತ್ತಿದ್ದವರಿಗೆ ಸ್ಪಷ್ಟ. ಈ ಎರಡು ಹಂತದ ಅಧಿಕಾರಿಗಳು ಮೇಲೆ ಹೇಳಿದ ಉದಾಹರಣೆಯಲ್ಲದೆ, ಬೇರೆ ಯಾವುದೇ ಅಧಿಕಾರಿಗಳಾದರೂ ಅವರ ನೇಮಕ ಪೂರ್ಣವಾಗಿ ಮ್ಯಾನೇಜ್‌ಮೆಂಟಿನದ್ದಾಗಿರುವವರೆಗೆ ಈ ಎರಡೂ ಹಂತಗಳಲ್ಲಿ ಉದ್ಯೋಗಿಗೆ ನ್ಯಾಯ ಸಿಗುವುದು ಕನಸಿನ ಮಾತು.

ಇದಲ್ಲದೆ ಇನ್ನೂ ಅಪಾಯಕಾರಿ ವಿಚಾರವೆಂದರೆ ಸಸ್ಪೆನ್ಶನ್, ವಜಾ, ರಿಟ್ರೆಂಚ್‌ಮೆಂಟ್ ಇತ್ಯಾದಿಗಳನ್ನು ವೈಯಕ್ತಿಕ ಸಮಸ್ಯೆಗಳಾಗಿ ಪರಿಗಣಿಸಿರುವುದು. ಹೀಗಿರುವಾಗ ಉದ್ಯೋಗಿಗೆ ನ್ಯಾಯ ದೊರಕಿಸಿ ಕೊಡಬಲ್ಲ ಕೊನೆಯ ಹಂತವಾದರೂ ಏನೂ ? ಸರ್ಕಾರ ನೇಮಿಸಿರುವ ಏಕ ಸದಸ್ಯ ಟ್ರಿಬ್ಯೂನಲ್ ಇದರ ಸದಸ್ಯ ಸಿವಿಲ್ ಜಡ್ಜ್ ಆಗಿ 5 ವರ್ಷ ಅನುಭವ ಹೊಂದಿರಬೇಕು.

ಈ ಮೂರು ಹಂತಗಳಲ್ಲಿ ಸಮಸ್ಯೆ ಪರಿಹಾರಕ್ಕೆ ಅವಧಿ ನಿಗದಿ ಪಡಿಸಿದ್ದು (1.5 ತಿಂಗಳು, 3 ತಿಂಗಳು ಇತ್ಯಾದಿ) ಈ ಅವಧಿಯೊಳಗೆ ಆ ಅಧಿಕಾರಿ ಪರಿಹಾರ ಒದಗಿಸದಿದ್ದರೆ ಅಥವಾ ಪರಿಹಾರ ಸಮಾಧಾನಕರವಾಗದಿದ್ದರೆ ಮಾತ್ರ ಮುಂದಿನ ಹಂತಕ್ಕೆ ಹೋಗಬಹುದು. ಯಾವುದೇ ಹಂತದಲ್ಲಿ ಸಮಸ್ಯೆಯನ್ನು ಮಂಡಿಸಿರುವಾಗ ಯಾವುದೇ ರೀತಿಯ ಟ್ರೇಡ್ ಯೂನಿಯನ್ ವಿರೋಧ ರೂಪಗಳು ನಿಷೇಧಿತವಾಗಿದೆ. ಮಾತ್ರವಲ್ಲ ಶಿಕ್ಷಾರ್ಹ ಸಹ, 6 ತಿಂಗಳು ಜೈಲುವಾಸ, 10,000 ರೂ. ಜುಲ್ಮಾನೆಯಷ್ಟು ಶಿಕ್ಷೆಗೆ ಅವಕಾಶವಿದೆ. ವೈಯಕ್ತಿಕ ಕುಂದುಕೊರತೆ ಪರಿಹಾರ ವ್ಯವಸ್ಥೆಯಲ್ಲಿ ಟ್ರೇಡ್ ಯೂನಿಯನ್‌ಗಳಿಗೆ ಯಾವುದೇ ಪಾತ್ರವಿಲ್ಲ ಎಂಬುದನ್ನೂ ಗಮನಿಸಬೇಕು.

"ಸಾಮೂಹಿಕ ಚೌಕಾಶಿಗೆ ಬದಲು ತೀರ್ಪು"

ಎಲ್ಲಾ ಕಾರ್ಮಿಕರ ಸಾಮೂಹಿಕ ಸಮಸ್ಯೆಗಳಿಗೆ (ವೇತನ, ಭತ್ಯೆ ಇತ್ಯಾದಿ) ಎರಡು ಹಂತದ ವ್ಯವಸ್ಥೆ ಮೊದಲನೆಯದು ಕಾರ್ಮಿಕರ, ಮ್ಯಾನೇಜ್‌ಮೆಂಟ್‌ನ ಸಮಾನ ಪ್ರಾತಿನಿಧ್ಯ ಇರುವ ಜಂಟಿ ಮ್ಯಾನೇಜ್‌ಮೆಂಟ್ ಕೌನ್ಸಿಲ್. ಇದರಲ್ಲಿ 2 ರಿಂದ 10 ರವರೆಗೆ ಸದಸ್ಯರಿರಬಹುದು ಕಾರ್ಮಿಕರನ್ನು ಪ್ರತಿನಿಧಿಸುವವರು ಶೇಕಡಾ 10 ಕ್ಕಿಂತಲೂ ಹೆಚ್ಚು ಸದಸ್ಯತ್ವವಿರುವ ರಿಜಿಸ್ಟರ್ಡ್ ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಅವುಗಳ ಬಲಾಬಲಕ್ಕೆ ಸರಿಯಾಗಿ. **ಆದರೆ ಇವರು ನೇರ ಚುನಾವಣೆಯಿಂದ ಆಯ್ಕೆಯಾಗುತ್ತಾರೆಯೋ ಇಲ್ಲವೇ ಎಂಬುದನ್ನು ಮಸೂದೆಯಲ್ಲಿ ನಿಖರವಾಗಿ ತಿಳಿಸಿಲ್ಲ. ಈ ಪ್ರತಿನಿಧಿಗಳ ಮೇಲೆ ಕಾರ್ಮಿಕರಿಗೆ ಎಷ್ಟರ ಮಟ್ಟಿಗೆ ಪ್ರಜಾಸತ್ತಾತ್ಮಕ ನಿಯಂತ್ರಣ ಇರುತ್ತದೆ ಎಂಬುದು ಅಷ್ಟೇ ಅಸ್ಪಷ್ಟ.** ಕೌನ್ಸಿಲ್‌ನಲ್ಲಿ ಕಾರ್ಮಿಕ-ಮಾಲಿಕ ಸಮಾನ ಪ್ರಾತಿನಿಧ್ಯ ನ್ಯಾಯಯುತವೆಂಬಂತೆ ಕಂಡರೂ ಕಾರ್ಮಿಕರ ಒಂದು ಸಣ್ಣ ವಿಭಾಗದ ಪ್ರತಿನಿಧಿ ಮಾಲಕರ ಹಿಂಬಾಲಕನಾದರೆ ಸಾಕು. ಕೌನ್ಸಿಲ್‌ನಲ್ಲಿ ಬಹುಮತ ಮಾಲಿಕರಿಗೆ ಯಾವಾಗಲೂ ಇರುತ್ತದೆ. ಎಂತಹ ಟ್ರೇಡ್ ಯೂನಿಯನ್ನಿನ ಪ್ರಜ್ಞೆ ಇರುವ ಕಾರ್ಖಾನೆಗಳಲ್ಲೂ ಮಾಲಿಕರ ಬಲವಾದ ಒಂದು ಸಂಘಟನೆ ಇರುವುದು ಕಷ್ಟವೇನೂ ಅಲ್ಲ. ಹೀಗೆ ಸಂಘಟಿತವಾದ ಕೌನ್ಸಿಲ್‌ನ ನಿರ್ಧಾರ ಅಖೈರು. ಇದೇ ಮ್ಯಾನೇಜ್‌ಮೆಂಟ್ ಕೌನ್ಸಿಲ್ ಉದ್ಯೋಗಿಗಳ ಸೇವಾ ನಿಯಮಗಳನ್ನು ಶಿಸ್ತು ನಿಯಮಗಳನ್ನು ರೂಪಿಸುತ್ತಿದೆ. ಎಲ್ಲಾ 'ಕುಂದುಕೊರತೆಗಳು ಸಮಸ್ಯೆಗಳು' ಈ ನಿಯಮಗಳ ಪರಿಧಿಯೊಳಗೆ ಇರಬೇಕು. ಹೀಗೆ ಕೌನ್ಸಿಲ್ ಸಾಮೂಹಿಕ ಚೌಕಾಶಿಯ ಬದಲು, ಮ್ಯಾನೇಜ್‌ಮೆಂಟಿನ ತೀರ್ಮಾನ ಹೇರಲು ರಚಿಸಿದ ವ್ಯವಸ್ಥೆ ಕಾರ್ಮಿಕರ ಪ್ರಾತಿನಿಧ್ಯ ಕೇವಲ ಔಪಚಾರಿಕ. ವೇತನ ಶ್ರೇಣಿಗಳ ಬಗ್ಗೆ ಪ್ರಚಾರ, ಪ್ರಕ್ಷೋಭೆ ಇಲ್ಲದೆ ಮ್ಯಾನೇಜ್‌ಮೆಂಟಿನ ನಿರ್ಧಾರವನ್ನು ಕಾರ್ಮಿಕರ ಮೇಲೆ ಹೇರಲು ನೌಕರಶಾಹಿ ವಿಧಾನವಷ್ಟೇ. ಇದು ಕಾರ್ಮಿಕರಿಗೆ ಸಮಾಧಾನಕರವಾಗದಿದ್ದರೆ ಪಂಚಾಯಿತಿ ಮಾಡಲು ಒಂದು ಬೋರ್ಡ್‌ಗೆ ಅಪೀಲು ಹೋಗಬಹುದು. ಈ ಬೋರ್ಡ್‌ನಲ್ಲಿ ಅಧ್ಯಕ್ಷ ಸರ್ಕಾರದಿಂದ ನೇಮಿತನಾದ ಮಾಜಿ ಸಿವಿಲ್ ಜಡ್ಜ್, ಉಳಿದ ಇಬ್ಬರು ಸದಸ್ಯರು ಕಾರ್ಮಿಕರು ಮತ್ತು ಮಾಲಿಕರ ಪ್ರತಿನಿಧಿಗಳು ಈ ಬೋರ್ಡ್ ಸಹ ಸರ್ವಾನುಮತ ಸಾಧ್ಯವಾಗದಿದ್ದರೆ, ಬಹುಮತದಿಂದ ತೆಗೆದುಕೊಂಡ ತೀರ್ಮಾನ ಅಖೈರು ತೀರ್ಪು. ಸರ್ಕಾರದಿಂದ ನೇಮಿತ ಅಧ್ಯಕ್ಷ ಮಾಲಿಕರ ಪ್ರತಿನಿಧಿಗಳ ಜತೆ ಸೇರಿದರೆ ಪರಿಣಾಮ ಏನು ಎಂಬುದು ಸ್ಪಷ್ಟ. ಇದು ಅಸಂಭವವೇನಲ್ಲ.

ಸರ್ಕಾರಕ್ಕೇಕೆ ಅವಸರ ?

ಈ ಮಸೂದೆಯನ್ನು ಶಾಸನವಾಗಿಸಲು ಸರ್ಕಾರ ಅವಸರಿಸುತ್ತಿದೆ. ಕೇಂದ್ರ ಟ್ರೇಡ್ ಯೂನಿಯನ್‌ಗಳ ರಾಷ್ಟ್ರೀಯ ಪ್ರಚಾರ ಸಮಿತಿಯ ವಿರೋಧ ಅಲಕ್ಷಿಸಿ ಈ ಪ್ರಯತ್ನ ಮುಂದುವರಿದಿದೆ. ಈ ಮಸೂದೆಯಿಂದ ನೇರವಾಗಿ ಕಷ್ಟಕ್ಕೀಡಾಗುವ ಕಾರ್ಮಿಕರಿಗೆ ಮಾತ್ರವಲ್ಲ, ಇದಕ್ಕೆ ವ್ಯಾಪಕ ಮಹತ್ವವಿದೆ.

ದೇಶದ ಉದ್ದಗಲಕ್ಕೂ ಶಿಕ್ಷಕರ ಚಳುವಳಿ ಪ್ರಬಲವಾಗಿ ಬೆಳೆಯುತ್ತಿದೆ. ಸಮಾಜದಲ್ಲಿ ಶಿಕ್ಷಕರ ವಿಶಿಷ್ಟ ಪಾತ್ರದಿಂದಾಗಿ ಶಿಕ್ಷಕರ ಚಳುವಳಿಗೆ ಸಾರ್ವತ್ರಿಕ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಪಡಿಸುವುದರಲ್ಲಿ ವಿಶಿಷ್ಟ ಪಾತ್ರವಿದೆ. ಶಿಕ್ಷಕರು ದೇಶವ್ಯಾಪಿ ಸಂಘಟನೆಗಳನ್ನು ಕಟ್ಟಿಕೊಂಡಿದ್ದು ಸರ್ಕಾರಕ್ಕೆ ಅವರನ್ನೆದುರಿಸಲು ಕಷ್ಟವಾಗುತ್ತಿದೆ. ಈ ಮಸೂದೆಯ ಪ್ರಮುಖ ಗುರಿ ಶಿಕ್ಷಕರ ಚಳುವಳಿ ಎನ್ನಬಹುದು.

ನೂತನ ಆರ್ಥಿಕ ನೀತಿಯ ತಂತ್ರಜ್ಞಾನ ಆಮದು ಆಧಾರಿತ ಆರ್ಥಿಕತೆಗೆ ಬೇಕಾದ 'ಸೀಮಿತ' ಶಿಕ್ಷಣ ಒದಗಿಸ ಹೊರಟಿರುವ ನೂತನ ಶಿಕ್ಷಣ ನೀತಿಯ ಹಿನ್ನೆಲೆಯಲ್ಲೂ ಇದು ಸರ್ಕಾರಕ್ಕೆ ತುರ್ತಿನದ್ದಾಗಿದೆ. ನೂತನ ಶಿಕ್ಷಣ ನೀತಿಯ ಭಾಗವಾಗಿ ಸರ್ಕಾರ ಶೈಕ್ಷಣಿಕ ಸಂಸ್ಥೆಗಳು ಆರ್ಥಿಕವಾಗಿ ಸ್ವಯಂ-ಪರಿಪೂರ್ಣ ಸ್ವಾಯತ್ತ ಸಂಸ್ಥೆಗಳಾಗಿರಬೇಕು ಎಂಬ ನೀತಿಯನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದೆ. ಒಟ್ಟಾರೆ ಶೈಕ್ಷಣಿಕ ಸಂಸ್ಥೆಗಳನ್ನು ಯು. ಜಿ. ಸಿ. ಯ ಮಾನ್ಯತೆ ಹೊಂದಿರುವ

(6ನೇ ಪುಟಕ್ಕೆ)

ಮಸೂದೆಯ ಮುಖ್ಯಾಂಶಗಳು

ಮಸೂದೆ ಯಾರಿಗಾಗಿ ?

- ಮಸೂದೆ ಎಲ್ಲಾ ಆಸ್ಪತ್ರೆಗಳು, ಶೈಕ್ಷಣಿಕ ಸಂಸ್ಥೆಗಳು, ವೈಜ್ಞಾನಿಕ ಸಂಶೋಧನೆ ಅಥವಾ ತರಬೇತಿ ಸಂಸ್ಥೆಗಳಿಗೆ ಅನ್ವಯಿಸುತ್ತದೆ. ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೂ ಇದು ಅನ್ವಯಿಸುತ್ತದೆ.
- ಶೈಕ್ಷಣಿಕ ಸಂಸ್ಥೆಗಳೆಂದರೆ ಯಾವುದೇ ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ವೈಜ್ಞಾನಿಕ ಸಂಸ್ಥೆ ಅಥವಾ ಸಂಶೋಧನೆ ಮತ್ತು ಬೋಧನೆ ಎರಡೂ ಇರುವ ಎಲ್ಲಾ ಸಂಸ್ಥೆಗಳು.
- ಸರ್ಕಾರ ಒಂದು ಗೆಜೆಟ್ ನೋಟೀಸ್ ಮೂಲಕ ಈ ಮೇಲಿನ ಯಾವುದೇ ಸಂಸ್ಥೆಗಳನ್ನು ಮಸೂದೆಯ ಅನ್ವಯಕ್ಕೆ ಯಾವಾಗ ಬೇಕಾದರೂ ತರಬಹುದು.

ಮಸೂದೆಯ ಉದ್ದೇಶ

- ಮಸೂದೆಯ ಘೋಷಿತ ಉದ್ದೇಶ "ಕೈಗಾರಿಕೆಯಲ್ಲದ" ಆಸ್ಪತ್ರೆ ಶೈಕ್ಷಣಿಕ ಮುಂತಾದ ಇತರ ಸಂಸ್ಥೆಗಳ ನೌಕರರ ಉದ್ಯೋಗ ಪರಿಸ್ಥಿತಿ ಸಂಬಂಧಿಸಿದ ಕುಂದು ಕೊರತೆಗಳನ್ನು ಪರಿಹರಿಸಲು ವ್ಯವಸ್ಥೆ ಮಾಡುವುದು.
- ಆದರೆ ಮಸೂದೆಯ ನಿಜವಾದ ಉದ್ದೇಶ ಈ ಸಂಸ್ಥೆಗಳ ಉದ್ಯೋಗಿಗಳ ಪ್ರಜಾಸತ್ತಾತ್ಮಕ ಸಂಘಟನಾ ಹಕ್ಕುಗಳನ್ನು ಕಿತ್ತುಕೊಳ್ಳುವುದು.
- ಈಗ ಇಂತಹ ಸಂಸ್ಥೆಗಳಲ್ಲಿರುವ ಸಾಮೂಹಿಕ ಚೌಕಾಶಿಯ ಪ್ರಜಾಸತ್ತಾತ್ಮಕ ಪದ್ಧತಿಯ ಬದಲು ನೌಕರಶಾಹಿ ಕಾನೂನು ವ್ಯವಸ್ಥೆ ಜಾರಿಗೆ ತರುವುದು.
- ಮಸೂದೆ ಈ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಮುಷ್ಕರಗಳನ್ನು ಸಂಪೂರ್ಣವಾಗಿ ನಿಷೇಧಿಸುವುದಲ್ಲದೆ, ನಿಯಮದಷ್ಟೇ ಕೆಲಸ, ನಿಧಾನ ಕೆಲಸ, ಘೆರಾವೋ, ಧರಣಿ ಮುಂತಾದ ಟ್ರೇಡ್ ಯೂನಿಯನ್ ಹೋರಾಟದ ಪ್ರಾಥಮಿಕ ರೂಪಗಳ ಮೇಲೂ ನಿಷೇಧ.
- ಇಂತಹ ಟ್ರೇಡ್ ಯೂನಿಯನ್ ಹೋರಾಟಗಳಲ್ಲಿ ಭಾಗವಹಿಸಿದವರಿಗೆ ಸಂಘಟಿಸಿದವರಿಗೆ ಜೈಲು ಶಿಕ್ಷೆ ಭಾರಿ ದಂಡ ವಿಧಿಸುವುದಕ್ಕೆ ಅವಕಾಶ.
- ಮಸೂದೆಯಲ್ಲಿ ಮಾಡಿದ ವ್ಯವಸ್ಥೆಯಿಂದ ನ್ಯಾಯ ಸಿಗದಿದ್ದರೆ ಕೋರ್ಟಿಗೆ ಮೊರೆ ಹೋಗಲು ಅವಕಾಶ ನಿರಾಕರಣೆ.
- ಉದ್ಯೋಗಿಗಳ "ತೊಂದರೆ"ಗಳನ್ನು ಅದರ ಪರಿಹಾರ ವ್ಯವಸ್ಥೆಯನ್ನು ಸಂಸ್ಥೆಯ ಮಟ್ಟಕ್ಕೆ ಸೀಮಿತ ಮಾಡುವುದು ಮತ್ತು ಆ ಮೂಲಕ ಒಂದೇ ರೀತಿಯ ಸಂಸ್ಥೆಗಳ ಎಲ್ಲಾ ಉದ್ಯೋಗಿಗಳ ಯೂನಿಯನ್‌ಗಳ ಫೆಡರೇಷನ್‌ಗಳ ಬಲ ಮುರಿಯಲು ನಿರುಪಯೋಗಿಗೊಳಿಸುವ ಪ್ರಯತ್ನ.

ಮಸೂದೆಯ ಕುಂದು ಕೊರತೆ ಪರಿಹಾರ ವ್ಯವಸ್ಥೆ

- ವೈಯಕ್ತಿಕ ಮತ್ತು ಸಾಮೂಹಿಕ ಕುಂದು ಕೊರತೆ ಪರಿಹಾರಕ್ಕೆ ಪ್ರತ್ಯೇಕ ವ್ಯವಸ್ಥೆ.
- ವೈಯಕ್ತಿಕ ಕುಂದು ಕೊರತೆ (ಇದರಲ್ಲಿ ಸಂಸ್ಥೆಯ ಉದ್ಯೋಗಿಗಳ ಉದ್ಯೋಗ ಪರಿಸ್ಥಿತಿಯ ನಿಯಮಗಳ ಅಳವಿನೊಳಗೆ ವೈಯಕ್ತಿಕ ಸಮಸ್ಯೆಗಳು ಅಮಾನತು, ಕೆಲಸದಿಂದ ತೆಗೆದುಹಾಕುವುದು ಸಹ ಸೇರಿ) ಪರಿಹರಿಸಲು ಮೂರು ಹಂತಗಳ ವ್ಯವಸ್ಥೆ.
- ಮೊದಲ ಎರಡು ಹಂತಗಳಲ್ಲಿ ವೈಯಕ್ತಿಕ ಕುಂದು ಕೊರತೆಗಳನ್ನು ಪರಿಹರಿಸುವವರು ಸಂಸ್ಥೆಯ ಮ್ಯಾನೇಜ್‌ಮೆಂಟ್‌ನಿಂದ ನೇಮಿಸಿದ ಅಧಿಕಾರಿಗಳು ಅವರದೇ ಅದರಲ್ಲಿ ಅಖೈರು ನಿರ್ಧಾರ. ಈ ಹಂತದಲ್ಲಿ ಪರಿಹಾರ ಉದ್ಯೋಗಿಗೆ ಸಮಾಧಾನವಾಗದಿದ್ದರೆ ಸರ್ಕಾರ ನೇಮಿಸುವ ಏಕ ಸದಸ್ಯ ಟ್ರಿಬ್ಯೂನಲ್‌ಗೆ ಅಪೀಲ್‌ಗೆ ಅವಕಾಶ. ಅದರೆ ಟ್ರಿಬ್ಯೂನಲ್‌ದೇ ಆ ಖೈರು ನಿರ್ಧಾರ.
- ಸಾಮೂಹಿಕ ಕುಂದು ಕೊರತೆಗಳನ್ನು (ಉದ್ಯೋಗಿಗಳ ವೇತನ ಭತ್ಯೆ ಇತ್ಯಾದಿ) ಪರಿಹರಿಸಲು ಎರಡು ಹಂತದ ವ್ಯವಸ್ಥೆ. ಮೊದಲನೆಯ ಹಂತದಲ್ಲಿ ಉದ್ಯೋಗಿಗಳ ಪ್ರತಿನಿಧಿಗಳು ಮತ್ತು ವ್ಯವಸ್ಥಾಪಕ ವರ್ಗದ ಪ್ರತಿನಿಧಿಗಳು ಸಮಾನ ಸಂಖ್ಯೆಯಲ್ಲಿರುವ ಜಂಟಿ ಮ್ಯಾನೇಜ್‌ಮೆಂಟ್ ಕೌನ್ಸಿಲ್. ಎರಡನೆಯ ಮತ್ತು ಕೊನೆಯ ಹಂತ ಸರ್ಕಾರ ನೇಮಿಸಿರುವ ಟ್ರಿಬ್ಯೂನಲ್.

ಮಾನಹಾನಿ ಮಸೂದೆ ವಿರುದ್ಧ ಬೃಹತ್ ರ್‍ಯಾಲಿ

ಮಾನಹಾನಿ ಮಸೂದೆ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ತುಮಕೂರಿನ ಪತ್ರಕರ್ತರು, ಎಸ್.ಎಫ್.ಐ. ಡಿ.ಎಸ್.ಎಸ್ ಹಾಗೂ ಕಾರ್ಮಿಕರ ನಾಗರೀಕರನ್ನೊಳಗೊಂಡ ಬೃಹತ್ ರ್‍ಯಾಲಿ ಪ್ರಮುಖ ಬೀದಿಗಳಲ್ಲಿ ನಡೆದು ನಗರದ ಪುರಭವನದಲ್ಲಿ ಬಹಿರಂಗ ಸಭೆ ನಡೆಯಿತು.

ರಾಜೀವ್‌ಗಾಂಧಿ ಕಾರ್ಯ ವೈಖರಿ ದೇಶದಲ್ಲಿ ತುರ್ತು ಪರಿಸ್ಥಿತಿಯ ಅರಿವನ್ನು ತರುತ್ತಿದೆ ಇಂದಿರಾಗಾಂಧಿಯನ್ನ ಮೀರಿಸುವಂತಹ ರೀತಿಯಲ್ಲಿ ರಾಜೀವ್‌ಗಾಂಧಿ ವರ್ತಿಸುತ್ತಿದ್ದಾರೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಧುರೀಣ ಕಾ|| ಕೆ. ಆರ್. ನಾಯಕ್ ಆರೋಪಿಸಿದರು. ಪ್ರಸಿದ್ಧ ನ್ಯಾಯವಾದಿ ಪ್ರೊ|| ಹೆಚ್. ಎಸ್. ಶೇಷಾದ್ರಿ ಮಸೂದೆ ಕುರಿತು ಸವಿಸ್ತಾರವಾಗಿ ಮಾತನಾಡಿ 1940 ರಲ್ಲಿ ಇಂಡಿಯನ್ ಪೀನಲ್ ಕೋಡನ್ನು ಮೆಕಾಲೆ ರಚಿಸಿದರು. ಇದು ಸೆಚ್ಚು ಅಮೆಂಡ್‌ಮೆಂಡ್‌ಮೆಂಟ್ ಆಗಿಲ್ಲವೆಂದು 1980 ರಲ್ಲಿ ಸುಪ್ರಿಂ ಕೋರ್ಟು ವ್ಯಂಗ್ಯವಾಗಿ ಮಾತನಾಡಿದ್ದು ಮಾನನಷ್ಟವಾಗುವುದಿಲ್ಲವೆಂದು ಬಾಂಬೆ ಹೈಕೋರ್ಟ್ ಎತ್ತಿ ಹಿಡಿದಿದೆ. ಇಂಡಿಯನ್ ಪೀನಲ್ ಕೋಡ್‌ನ 124ಎ ನಲ್ಲಿ ರಾಷ್ಟ್ರದ ಹಿತದ ಬಗ್ಗೆ ದ್ವೇಷ ಹಾಗೂ ಧಕ್ಕೆ ತರುವವರಿಗೆ ಜೀವನಧಿ ಶಿಕ್ಷೆ ವಿಧಿಸುವುದರ ಬಗ್ಗೆ ಹೇಳಲಾಗಿದೆ. ಮಾನನಷ್ಟ ಮೊಕದ್ದಮೆಗೊಳಗಾದವನ ಕೇಸನ್ನು ಸಾಮಾನ್ಯ ಮ್ಯಾಜಿಸ್ಟ್ರೇಟರು ಟ್ರೈಯಲ್ ಮಾಡಲು ಅವಕಾಶವಿಲ್ಲ ಸೆಷನ್ ಜೆಡ್ಜ್ ಮಾತ್ರ ಗುಪ್ತವಾಗಿ ಮಾಡಬೇಕಾಗುತ್ತದೆ. ಸರ್ಕಾರ ತನಗೆ ಬೇಕಾದ ರೀತಿಯಲ್ಲಿ ತನ್ನ ಹಸ್ತಕ್ಷೇಪ ನಡೆಸಿ ತನ್ನ ಪರವಾಗಿ ತೀರ್ಪು ಪಡೆಯಲು ಇದು ಅನುವಾಗುತ್ತದೆ ಎಂದು ಅವರು ಹೇಳಿದರು.

ಸಾಹಿತಿ ಹಾಗೂ ಅಕಾಡೆಮಿ ಸದಸ್ಯ ಪ್ರೊ|| ಕೆ. ಜಿ. ನಾಗರಾಜಪ್ಪನವರು ಮಾತನಾಡಿ ಸರ್ಕಾರ ತನ್ನ ಮಾಧ್ಯಮಗಳ ಜನತೆಯನ್ನು ಆದರಲ್ಲೂ ಪತ್ರಕರ್ತರನ್ನು ತಪ್ಪುದಾರಿಗೆಳೆಯುತ್ತಿದೆ. ಜನತೆ ಗಂಭೀರ ಬಡತನ ನಿರುದ್ಯೋಗ ಸಮಸ್ಯೆ ಎದುರಿಸುತ್ತಿರುವ ಇಂತಹ ಸಂದರ್ಭಗಳಲ್ಲಿ ನಮಗಿರುವ ಸ್ವಾತಂತ್ರ್ಯವೆಂದರೆ ಸ್ವಂತ ಯೋಚನೆ. ಹಾಗೂ ಅಭಿವ್ಯಕ್ತಿ ಅದನ್ನು ಕಸಿದುಕೊಂಡರೆ ಬದುಕಲು ಸಾಧ್ಯವಿಲ್ಲವೆಂದರು. ಹಿರಿಯ ಪತ್ರಕರ್ತ ಬಾಲ್ಗೋಡಿ ದ.ಸಂ.ಸ.ದ ನರಸಿಂಹರಾಜು, ಹಾಗೂ ಹಲವಾರು ಪತ್ರಿಕೆಗಳ ಸಂಪಾದಕರು ಮಾತನಾಡಿದರು. ವಿಜಯವಾಣಿ ಪತ್ರಿಕೆ ಸಂಪಾದಕ ಹೆಚ್. ಆರ್. ಗುಂಡೂರಾವ್ ಅಧ್ಯಕ್ಷತೆ ವಹಿಸಿದ್ದರು. ಮೊದಲಿಗೆ ಎಸ್.ಎಫ್.ಐ. ಕಾರ್ಯಕರ್ತರು ಕ್ರಾಂತಿ ಗೀತೆ ಹಾಡಿದರು.

ಮಿನರ್ವ ಮಿಲ್ ಕಾರ್ಮಿಕರ ಮೇಲೆ ಲಾಠಿಚಾರ್ಜ್

ಆಗಸ್ಟ್ ಮಾಸಿಕ ವೇತನದಲ್ಲಿ ಶೇ. 40 ರಷ್ಟು ಅಂದರೆ 400 ರೂನಿಂದ 600 ರೂ ವರೆಗೆ ಕಡಿತವನ್ನುಂಟು ಮಾಡಿ, ಅಲ್ಲದೆ ಸೆಪ್ಟೆಂಬರ್ 10ರಂದ ಲೇಆಫ್ ಘೋಷಿಸಿದ್ದನ್ನು ಪ್ರತಿಭಟಿಸಿದ ಮಿನರ್ವಮಿಲ್ ಕಾರ್ಮಿಕರ ಮೇಲೆ ಲಾಠಿಚಾರ್ಜ್ ಮಾಡಿರುವುದನ್ನು ಮಿನರ್ವ ಮಿಲ್ಸ್ ಹತ್ತಿಗಿರಣಿ ಕಾರ್ಮಿಕ ಸಂಘದ ಉಪಾಧ್ಯಕ್ಷರಾದ ಕಾ|| ಬಸವರಾಜುರವರು ಹೇಳಿಕೆ ನೀಡಿ ತೀವ್ರವಾಗಿ ಖಂಡಿಸಿದ್ದಾರೆ. ಕಾರ್ಮಿಕ ಸಂಘಗಳೊಂದಿಗೆ ಮಾತುಕತೆ ನಡೆಸದೇ ಏಕಪಕ್ಷೀಯವಾಗಿ ಆಡಳಿತ ವರ್ಗ ಕಾರ್ಮಿಕರ ವೇತನದಲ್ಲಿ ಕಡಿತ ಮಾಡಿರುವುದು ಕಾರ್ಮಿಕರ ಹೊಟ್ಟೆಯ ಮೇಲೆ ಬರೆ ಎಳೆದಿದೆ. ಲೇಆಫ್, ರಿಟ್ರೆಂಚ್‌ಮೆಂಟ್, ಓ.ಸಿ. ಕಾರ್ಮಿಕರಿಗೆ ನೋವರ್ಕ್.

ಅಧಿಕ ದುಡಿಮೆಯಂತಹ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಕಾರ್ಮಿಕರಿಗೆ ಇದು ಸಹಿಸಲಸಾಧ್ಯವಾದ ಹೊಡೆತವನ್ನು ನೀಡಿದೆ ಎಂದು ಅವರು ಆರೋಪಿಸಿ ಕಡಿತ ಮಾಡಿರುವ ವೇತನವನ್ನು ಕೂಡಲೇ ಕಾರ್ಮಿಕರಿಗೆ ಒದಗಿಸಿ ಶಾಂತಿ ನೆಲೆಸುವಂತೆ ಮಾಡಲು ಮಧ್ಯೆ ಪ್ರವೇಶಿಸಬೇಕೆಂದು ರಾಜ್ಯ ಸರ್ಕಾರವನ್ನು ಹತ್ತಿಗಿರಣಿ ಕಾರ್ಮಿಕರ ಸಂಘ ಒತ್ತಾಯಿಸಿದೆ.

ಇದೇ ರೀತಿಯ ಗಂಭೀರ ಪರಿಸ್ಥಿತಿ ಮೈಸೂರು ಮಿಲ್ಸ್‌ನಲ್ಲಿ ಉಂಟಾಗಿ ಪೋಲಿಸ್ ಅಧಿಕಾರಿಗಳ ಮಧ್ಯೆಪ್ರವೇಶದಿಂದ ಆಡಳಿತ ವರ್ಗ ಹಾಗೂ ಕಾರ್ಮಿಕ ನಾಯಕರನ್ನೊಳಗೊಂಡು ಮಾತುಕತೆ ನಡೆಸುವ ಆಶ್ವಾಸನೆ ನೀಡಿದ್ದರಿಂದ ತಾತ್ಕಾಲಿಕವಾಗಿ ಯಾವುದೇ ಘಟನೆ ನಡೆಯದೇ ಹೋದರೂ ಕಾರ್ಮಿಕರಲ್ಲಿ ಆಡಳಿತ ವರ್ಗದ ವಿರುದ್ಧದ ಸಿಟ್ಟು ಹೊಗೆಯಾಡುತ್ತಿದೆ.

ಟ್ರೇಡ್ ಯೂನಿಯನ್ ಹಕ್ಕುಗಳ ಮೇಲೆ ಪ್ರಹಾರ

(5ನೇ ಪುಟದಿಂದ)

ಹೊಂದಿರದ ಸಂಸ್ಥೆಗಳಾಗಿ ಗುರುತಿಸುವ ವ್ಯವಸ್ಥೆ ಆರಂಭವಾಗಿದೆ. ಇಂತಹ ವ್ಯವಸ್ಥೆಗೆ ವಿರೋಧ ವ್ಯಕ್ತಪಡಿಸಬಲ್ಲ ವ್ಯಾಪಕ ಶಿಕ್ಷಕರ ಚಳುವಳಿಗೆ ಕೊಡಲಿಯೇಟು ಕೊಡದಿದ್ದರೆ ನೂತನ ಶಿಕ್ಷಣ ನೀತಿಯ ಮುಖ್ಯಭಾಗ ನಿಷ್ಕ್ರಿಯವಾಗುತ್ತದೆ. ಆದ್ದರಿಂದಲೇ ಮಸೂದೆಯಲ್ಲಿ ಸಂಸ್ಥೆಯ ಮಟ್ಟದ ಟ್ರೇಡ್ ಯೂನಿಯನ್‌ಗಳಿಗೆ ಮಾತ್ರ ಸ್ವಲ್ಪವಾದರೂ ಮಾನ್ಯತೆ ನೀಡಿ ಆ ಹಂತಕ್ಕೆ ಅವನ್ನು ಸೀಮಿತಗೊಳಿಸುವ ಪ್ರಯತ್ನ ಮಾಡಲಾಗಿದೆ.

ಆಸ್ಪತ್ರೆ ಮತ್ತು ಶೈಕ್ಷಣಿಕ ಮತ್ತಿತರ ಸಂಸ್ಥೆಗಳನ್ನು ಒಟ್ಟು ಮಾಡುವುದರ ಹಿಂದೆಯೂ ಒಂದು ದುರುದ್ದೇಶವಿದೆ. ಆಸ್ಪತ್ರೆ ಒಂದು ಅವಶ್ಯಕ ಸೇವೆ. ಆದ್ದರಿಂದ ಅಲ್ಲಿ ಸಾಮಾನ್ಯ ಟ್ರೇಡ್ ಯೂನಿಯನ್ ಹೋರಾಟಗಳಿಗೆ ಅವಕಾಶವಿಲ್ಲ. ಅದಕ್ಕೆ ಸಮಸ್ಯೆ ಪರಿಹಾರಕ್ಕೆ ಬೇರೆ ವ್ಯವಸ್ಥೆ ಇರಬೇಕು ಎಂಬ ವಾದವೊಡ್ಡಿ ಶೈಕ್ಷಣಿಕ ಸಂಸ್ಥೆಗಳನ್ನು ಅದಕ್ಕೆ ಸೇರಿಸಿ ಕಾರ್ಮಿಕ ವರ್ಗದ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯನ್ನು ಒಡೆದು ಆಳುವ ದುರುದ್ದೇಶದ ನೀತಿ ಇದು.

ಸಿ. ಎಸ್. ಐ. ಆರ್. ಮತ್ತು ರಾಷ್ಟ್ರೀಯ ಪ್ರಯೋಗಶಾಲೆಗಳಿಗೂ ಈ ಮಸೂದೆ ಅನ್ವಯವಾಗಿದ್ದು, ಈ ಪ್ರಮುಖ ಸಂಶೋಧನಾ ಸಂಸ್ಥೆಗಳಲ್ಲಿ ಈಗಾಗಲೇ ಇರುವ ನೌಕರಶಾಹಿ ಅಧಿಕಾರಶಾಹಿ ಪ್ರವೃತ್ತಿಗಳು ಬಲಗೊಳ್ಳುತ್ತವೆ. ಇಂತಹ ಪ್ರವೃತ್ತಿಗಳು ಈ ಸಂಸ್ಥೆಗಳಿಗೆ ಮಾರಕ. ಬಹುಶಃ ವಿದೇಶೀ ತಂತ್ರಜ್ಞಾನ ಆಧಾರಿತ ನೂತನ ಆರ್ಥಿಕ ನೀತಿಗೆ ಇದು ಅನುಗುಣವಾಗಿದ್ದು ನಮ್ಮ ಸ್ಥಳೀಯ ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ.

ಮಸೂದೆ ಹಿಮ್ಮೆಟ್ಟಿಸಲು ಹೋರಾಟ

ಹಿಂದೆ ಎರಡು ಭಾರಿಯಂತೆ ಈ ಭಾರಿಯೂ ಇದನ್ನು ಹಿಮ್ಮೆಟ್ಟಿಸಲು ಎಲ್ಲಾ ಪ್ರಜಾಸತ್ತಾತ್ಮಕ ಟ್ರೇಡ್ ಯೂನಿಯನ್‌ಗಳು ಕಾರ್ಯಕ್ರಮ ಹಾಕಿಕೊಂಡಿವೆ. ಎಲ್ಲಾ ಕಡೆ ವ್ಯಾಪಕ ಪ್ರತ್ಯೇಕ ವಿರೋಧಿ ಪ್ರದರ್ಶನಗಳ ಜತೆ, ದೆಹಲಿಯಲ್ಲಿ ಜುಲೈ 14ರಂದು ಒಂದು ಸಮಾವೇಶ ಏರ್ಪಡಿಸಲಾಯಿತು. ಸಮಾವೇಶದಲ್ಲಿ ಕೇಂದ್ರೀಯ ಟ್ರೇಡ್ ಯೂನಿಯನ್ ಸಂಘಟನೆಗಳಲ್ಲದೆ ಮಸೂದೆಯಿಂದ ಕಷ್ಟಕ್ಕೊಳಗಾಗುವ ಇತರ ಕಾರ್ಮಿಕರ ಸ್ವತಂತ್ರ ಸಂಘಟನೆಗಳು ಉತ್ಸಾಹದಿಂದ ಪಾಲುಗೊಂಡಿದ್ದವು. ಆನಂತರ ಜುಲೈ 27 ರಂದು ಮಳೆಗಾಲದ ಅಧಿವೇಶನ ಆರಂಭವಾಗುವ ದಿನ ಪಾರ್ಲಿಮೆಂಟಿನ ಎದುರು ಮಸೂದೆಯ ವಿರುದ್ಧ ಭಾರೀ ಜಂಟಿ ರ್‍ಯಾಲಿ ಏರ್ಪಡಿಸಲಾಯಿತು. ಇದಕ್ಕೂ ಸರ್ಕಾರ ಜಗ್ಗದಿದ್ದರೆ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲು ಸಿದ್ಧತೆಗಳಾಗುತ್ತಿವೆ.

ಈ ಮಸೂದೆಯ ಅಪಾಯವನ್ನು ಮನಗಂಡು ಅದನ್ನು ಹಿಮ್ಮೆಟ್ಟಿಸಲು ವ್ಯಾಪಕ ಪ್ರಚಾರ ಪ್ರಕ್ಷೋಭೆ ನಮ್ಮ ಪ್ರಜಾಸತ್ತಾತ್ಮಕ ಕರ್ತವ್ಯಗಳಲ್ಲೊಂದು. ಇದು ನೂತನ ಆರ್ಥಿಕ ನೀತಿ, ನೂತನ ಶಿಕ್ಷಣ ನೀತಿಯ ವಿರುದ್ಧ ಹೋರಾಟದ ಮುಖ್ಯ ಮಜಲು.

ಪ್ರತಿಭಾ ಮಹಿಳಾ ಮಂಡಲದ ಸಭೆ

ದ. ಕ. ಜಿಲ್ಲೆಯ ಬಂಟ್ವಾಳದ ಮಣಿ ನಾಲ್ಕೂರು ಗ್ರಾಮದಲ್ಲಿ ಆಗಸ್ಟ್ 24ರಂದು ಪ್ರತಿಭಾ ಮಹಿಳಾ ಮಂಡಲದ ಸಭೆ ಶ್ರೀಮತಿ ಭಾರತಿ ಜೈನ್ ಅಧ್ಯಕ್ಷತೆಯಲ್ಲಿ ಸೇರಿತು. ಮುಖ್ಯ ಅತಿಥಿಗಳಾಗಿ ಕಾ|| ಬಿ. ರಾಮಕೃಷ್ಣ ಶ್ರೀ ರಾಮಕೃಷ್ಣ, ಶ್ರೀ ಆನಂದಆಳ್ವ ಮತ್ತು ಮಂಡಲ ಪಂಚಾಯತ್ ಸದಸ್ಯ ಶ್ರೀ ರಾಮಣ್ಣನವರು ಭಾಗವಹಿಸಿದ್ದರು.

ಕಾ|| ಬಿ. ರಾಮಕೃಷ್ಣರವರು ಮಾತನಾಡಿ ಮಹಿಳೆ ಆಧುನಿಕ ಯುಗದಲ್ಲಿಯೂ ಸತಿಪದ್ಧತಿ, ಮೂಢನಂಬಿಕೆಯಂತಹ ಕಂದಾಚಾರಗಳಿಗೆ ಬಲಿಯಾಗಿದ್ದು ತನ್ನ ಕೀಳರಿಮೆಯನ್ನು ತೊರೆದು ಸಮಾನ ಬದುಕಿಗಾಗಿ ವೈಚಾರಿಕ ನೆಲೆಯಲ್ಲಿ ಸಂಘಟಿತ ಹೋರಾಟನಡೆಸಬೇಕೆಂದು ಕರೆನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಭಾರತಿ ಜೈನ್‌ರವರು ಪ್ರತಿಭಾ ಸಮಾಜದ ಸ್ಥಾಪನೆ ಮತ್ತು ಬೆಳವಣಿಗೆ ಕುರಿತು ಮಾತನಾಡಿದರು. ಪ್ರಾರಂಭದಲ್ಲಿ ಬೇಬಿಯವರು ಸ್ವಾಗತಿಸಿ ಕಳೆದ ವರ್ಷದ ವರದಿ ಓದಿದರು. ಶ್ರೀಮತಿ ಸೀತಾ ಎಂ.ಎ. ರವರು ಧನ್ಯವಾದವಿತ್ತರು.

ನೂತನ ಸಮಿತಿಗೆ ಶ್ರೀಮತಿ ಭಾರತಿ ಜೈನ್ (ಅಧ್ಯಕ್ಷ) ಶ್ರೀಮತಿ ಬೇಬಿ ಎನ್. ಶೆಟ್ಟಿ (ಉಪಾಧ್ಯಕ್ಷ) ಶ್ರೀಮತಿ ಸೀತಾ ಎಂ.ಎ. (ಕಾರ್ಯದರ್ಶಿ) ಶ್ರೀಮತಿ ವಿಜಯಲಕ್ಷ್ಮಿ (ಸಹಕಾರ್ಯದರ್ಶಿ) ಶ್ರೀಮತಿ ಜಾನಕಿ (ಖಜಾಂಚಿ) ಯವರನ್ನೊಳಗೊಂಡ ಜನರೇ ಕಾರ್ಯಕಾರಿ ಸಮಿತಿ ರಚಿಸಲಾಯಿತು.

ಮಸೂದೆ ಪ್ರತಿಕೃತಿ ದಹನ

ಮಾನಹಾನಿ ಮಸೂದೆ ಹಿಂತೆಗೆದುಕೊಳ್ಳಲು ಒತ್ತಾಯಿಸಿ ಸೆಪ್ಟೆಂಬರ್ 8 ರಂದು ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ (ಡಿ.ವೈ.ಎಫ್ ಐ.) ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರದ ಚಿಕ್ಕಲಾಲ್ ಬಾಗ್‌ನಿಂದ ಮೆರವಣಿಗೆ ಹೊರಟು ಕೇಂದ್ರದ ರಾಜೀವ್‌ಗಾಂಧಿ ಸರ್ಕಾರ ಮಾನಹಾನಿ ಮಸೂದೆಯನ್ನು ತರಾತುರಿಯಲ್ಲಿ ಲೋಕಸಭೆಯಲ್ಲಿ ಮಂಡಿಸಿ ಅದನ್ನು ಹೇಗಾದರೂ ಮಾಡಿ ಜಾರಿಗೊಳಿಸುವ ಸಂಚಿನಲ್ಲಿರುವುದರ ವಿರುದ್ಧ ಘೋಷಣೆಗಳನ್ನು ಕೂಗುತ್ತ ಕೂಗುತ್ತಾ ಭಿತ್ತಿ ಪತ್ರ ಹಿಡಿದು ಜನರಿಗೆ ಈ ಮಸೂದೆ ಕುರಿತು ಎಚ್ಚರ ವಹಿಸಬೇಕೆಂದು ಕರೆ ನೀಡುತ್ತಿದ್ದರು. ಮೈಸೂರು ಬ್ಯಾಂಕ್ ವೃತ್ತ ತಲುಪಿದ ಮೆರವಣಿಗೆ ಅಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಪತ್ರಿಕಾ ಸ್ವಾತಂತ್ರ ಹರಣ ಮಾಡುವುದರ ಮೂಲಕ ಸರ್ವಾಧಿಕಾರಿ ಹೆಜ್ಜೆಹಿಡುತ್ತಿರುವ ರಾಜೀವ ಗಾಂಧಿ ಸರ್ಕಾರದ ಅಳಿವು ಸನಿಹಿತವಾಗುತ್ತಿದೆ ಎಂದು ಮಾತನಾಡಿದ ಪತ್ರಕರ್ತ ಜಿ. ಎನ್. ಮೋಹನ್, ಡಿ. ವೈ. ಎಫ್. ಐ. ರಾಜ್ಯ ಸಹಕಾರ್ಯದರ್ಶಿ ಕಾ|| ಆರ್. ಜಯಕುಮಾರ್, ಜಿಲ್ಲಾ ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಟಿ. ಶಿವಶಂಕರ್‌ರವರು ಜನರು ಐಕ್ಯತೆಯಿಂದ ಈ ಸವಾಲನ್ನು ಎದುರಿಸುವಂತೆ ಕರೆನೀಡಿದರು.

ಮಾನಹಾನಿ ಮಸೂದೆಯ ಕರಡನ್ನು ಕಾರ್ಯಕರ್ತರು ನೆರೆದ ಸಾರ್ವಜನಿಕರೆದುರು ಅದರ ಪ್ರತಿಕೃತಿಯನ್ನು ದಹನ ಮಾಡಿ ವಿರುದ್ಧ ಪ್ರತಿಭಟಿಸಿದರು.

ಸೆಪ್ಟೆಂಬರ್ ಚಳುವಳಿ : ಯಶಸ್ವಿ, ಬಂಧನ

(3ನೇ ಪುಟದಿಂದ)

ಬಾದ ಬಳಿ ಕಾ|| ಮರಳಸಿದ್ದನಾಯಕೋಡಿ ನೇತೃತ್ವದಲ್ಲಿ 150 ರೈತರು ರಸ್ತೆ ತಡೆ ಮಾಡಿದರು. ರೈತ ಚಳುವಳಿ ಬೆಂಬಲಿಸಿ ಎಸ್.ಎಫ್.ಐ., ಡಿ.ವೈ.ಎಫ್.ಐ., ಸಿ.ಐ.ಟಿ.ಯು. ಭಾಗವಹಿಸಿವೆ. ಸೆ. 5 ರಂದು ಬಸವನಬಾಗೇವಾಡಿಯಲ್ಲಿ ಕಾ|| ಭೀಮಸಿ ಕಲಾದಗಿ ನೇತೃತ್ವದಲ್ಲಿ 130 ಮಂದಿ ರೈತ ವಿದ್ಯಾರ್ಥಿಗಳು ರಸ್ತೆತಡೆ ಮಾಡಿ ಬಂಧನಕ್ಕೊಳಗಾದರು.

ಸೌದತ್ತಿ

ಮಲ್ಲೂರು, ಯಕ್ಕುಂಡಿ, ಕಾರ್ಲಕಟ್ಟಿ, ಕಾರ್ಲಕಟ್ಟಿತಾಂಡಾ ಗ್ರಾಮಗಳ 200 ಮಂದಿ ರೈತರು ಮೆರವಣಿಗೆಯಲ್ಲಿ ಸೌದತ್ತಿ ತಾಲೋಕು ಕಛೇರಿಗೆ ಬಂದು ಧರಣಿ ಸತ್ಯಾಗ್ರಹ ನಡೆಸಿದರು. ರೈತರನ್ನುದ್ದೇಶಿಸಿ ಕಾ||ಜಿ.ಬಿ. ತೋರಗಲ್, ಕಪ್ಪಣ್ಣನವರ್ ಎಲ್.ಎಸ್. ನಾಯಕ್, ಅಲ್ಲಮಪ್ರಭು ಮನಗೂಳ ಶ್ರೀಕಾಂತ್ ಹಟ್ಟಿಹೊಳಿ, ಎಸ್.ಬಿ. ಶಿಗ್ಲಿಯವರು ಮಾತನಾಡಿದರು. ಸೆ. 2ರಂದು 100 ಮಂದಿ ರೈತರ ಧರಣಿ ನಡೆಯಿತು.

ಕೋಲಾರ

ಸೆ. 1 ರಂದು ಜಿಲ್ಲೆಯ ಬಾಗೇಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗುಡಿ ಬಂಡೆಗಳಲ್ಲಿ ರಸ್ತೆ ತಡೆ ಮಾಡಿದ ಸುಮಾರು 900 ಜನರನ್ನು ಬಂಧಿಸಲಾಯಿತು ಎಂದು ಜಿಲ್ಲಾ ಡಿ.ವೈ.ಎಸ್.ಪಿ. ತಿಳಿಸಿದ್ದಾರೆ.

ಮುಳಬಾಗಿಲು

ಸೆ. 3 ರಂದು ಮುಳಬಾಗಿಲಿನಲ್ಲಿ ರಸ್ತೆ ತಡೆ ಚಳುವಳಿ ನಡೆಸಿದ 329 ರೈತರನ್ನು ಬಂಧಿಸಲಾಯಿತು. ಬಂಧಿತರಲ್ಲಿ ಶಾಸಕ ಆರ್. ವೆಂಕಟರಾಮಯ್ಯ, ರೈತ ಕೃಷಿ ಕೋಲಾರ ಸಂಘದ ಎಂ. ವಿ. ವೆಂಕಟರಮಣಪ್ಪ, ಡಿ.ವೈ.ಎಫ್.ಐ.ನ ಉಪಾಧ್ಯಕ್ಷ ನಾಗರಾಜ್ ಸೇರಿದ್ದಾರೆ. 36 ಮಂದಿಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೊಳಪಡಿಸಲಾಯಿತು.

ಬಾಗೇಪಲ್ಲಿ

ಸೆಪ್ಟೆಂಬರ್ 1 ರಿಂದ 3ರ ವರೆಗೆ ತಾಲೋಕು ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಸೆ. 1 ರಂದು 262, ಸೆ. 2 ರಂದು 320 ಹಾಗೂ ಸೆ. 3 ರಂದು 191 ಮಂದಿ ರೈತರನ್ನು ಬಂಧಿಸಲಾಗಿದೆ. ಕಾ|| ಜಿ. ಬಿ. ಶ್ರೀರಾಮರೆಡ್ಡಿ, ಸಿ. ಡಿ. ಗಂಗುಲಯ್ಯ, ರಾಮಕೃಷ್ಣ ಮುಂತಾದವರು ನೇತೃತ್ವವಹಿಸಿದ್ದರು.

ಶಿಡ್ಲಘಟ್ಟದಲ್ಲಿ ಪಿಕೆಟಿಂಗ್ ನಡೆಸಿದ ರೈತರಲ್ಲಿ 90 ಮಂದಿಯನ್ನು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿಡಲಾಗಿದೆ. ರೈತ ಚಳುವಳಿ ಬೆಂಬಲಿಸಿ ಎಸ್.ಎಫ್.ಐ. ಕೋಲಾರ ಜಿಲ್ಲಾ ಸಮಿತಿ ಅಧ್ಯಕ್ಷ ಕಾ|| ಎಂ. ವಿ. ನಾರಾಯಣಸ್ವಾಮಿ ನೇತೃತ್ವದಲ್ಲಿ ಶಾಲಾ-ಕಾಲೇಜು ಬಹಿಷ್ಕರಿಸಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಕಳಿಸಲಾಯಿತು.

ಶಿವಮೊಗ್ಗ

500 ಕ್ಕೂ ಹೆಚ್ಚು ರೈತ ಕೃಷಿ ಕೂಲಿಗಾರರು ಕಸ್ತೂರಬಾ ರಸ್ತೆಯಿಂದ ಪ್ರಮುಖ ಬೀದಿಗಳಲ್ಲಿ ಮೆರವಣಗೆ ಹೊರಟು ತಾಲೋಕು ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಕಾ|| ಎಸ್ ಬಿ. ಶಿವಶಂಕರ್, ರೈತ ಸಂಘದ ತಾಲೋಕು ಸಂಚಾಲಕ ಕಾ||ಎಸ್.ಕೆ. ವರ್ಮ ನೇತೃತ್ವ ವಹಿಸಿದ್ದರು. ಧರಣಿಯನ್ನುದ್ದೇಶಿಸಿ ಕಾ||ಬಿ.ಎಸ್. ದಾಸ್ ಎನ್. ಎಸ್. ವಾಸುದೇವ್, ಮಹಮದ್ ಇಬ್ರಾಹಿಂ, ಮಹಮದ್‌ಸಾಬ್ ಮುಂತಾದವರು ಮಾತನಾಡಿದರು. ಜಹುರಾಂ ಸ್ವಾಗತಿಸಿ ಸುಬ್ರಮಣಿಯವರು ವಂದಿಸಿದರು.

ಚಿಕ್ಕಮಗಳೂರು

ಜಿಲ್ಲೆಯ ಕಳಸಾಪುರದಲ್ಲಿ ಸುಮಾರು 150 ರೈತ ಕೃಷಿ ಕೂಲಿಗಾರರು ಕಾ| ಕೆ. ಸುಕುಮಾರ್ ಮತ್ತು ಅಣ್ಣಿಯವರು ಮುಂದಾಳತ್ವದಲ್ಲಿ ಸೆ. 4 ರಂದು ರಸ್ತೆತಡೆ ಚಳುವಳಿ ನಡೆಸಿ ಬಂಧನಕ್ಕೊಳಗಾದರು. ನ.ಆರ್. ಪುರ ಕಡೂರು, ತರಿಕೆರೆ ಮೂಡಿಗೆರೆಗಳಲ್ಲಿ 1,100 ಮಂದಿ ರೈತರು ಬಂಧನಕ್ಕೊಳಗಾಗಿದ್ದಾರೆ.

ಚಳ್ಳಕೆರೆ

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯಲ್ಲಿ ಸೆ. 1 ರಿಂದ 3 ರವರೆಗೆ ತಾಲೋಕು ಕಛೇರಿ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ರೈತಸಂಘದ ತಾಲೋಕು ಅಧ್ಯಕ್ಷ ಕಾ|| ಎಂ. ಹನುಮಂತರೆಡ್ಡಿ ಹಾಗೂ ಪ್ರಧಾನ ಕಾರ್ಯದರ್ಶಿ ಕಾ|| ಕರಿಯಣ್ಣ ನಾಯಕತ್ವ ವಹಿಸಿದ್ದರು.

ಬರ್ಮಾ- ಪ್ರಜಾಸತ್ತೆಗಾಗಿ ಜನಾಂದೋಲನ

ಬರ್ಮ ದೇಶದ ಜನತೆ ಪ್ರಜಾಸತ್ತೆಯ ಪುನರ್ ಸ್ಥಾಪನೆಗಾಗಿ ಬೀದಿಗಿಳಿದಿದ್ದಾರೆ. ಸೇನಾ ಕೃಪಾಪೋಷಿತ "ಬರ್ಮ ಸಮಾಜವಾದಿ ಕಾರ್ಯಕ್ರಮ ಪಕ್ಷದ" 26 ವರ್ಷಗಳ ಕಾಲದ ಏಕಪಕ್ಷೀಯ ಆಡಳಿತದಡಿಯಲ್ಲಿ ಬರ್ಮ ದೇಶ ಯಾವುದೇ ಪ್ರಗತಿಯನ್ನು ಕಾಣಲಿಲ್ಲ. ಜನರ ಬದುಕು ಸುಧಾರಿಸಲಿಲ್ಲ. ಪ್ರಧಾನಿ ಯುನೂ ರವರನ್ನು ಪದಚ್ಯುತಿಗೊಳಿಸಿ ಬರ್ಮದ ಸೇನೆಯ ಜನರಲ್ ನೇವಿನ್ ನೇತೃತ್ವದಲ್ಲಿ 1962 ಅಧಿಕಾರವನ್ನು ವಶಪಡಿಸಿಕೊಂಡಿತು. ಹೊಸ ಪ್ರಭುತ್ವವು 'ಬರ್ಮಾ ಮಾದರಿಯ' ಸಮಾಜವಾದಿ ಕಾರ್ಯಕ್ರಮವನ್ನು ಘೋಷಿಸಿತು ಮಾತ್ರವಲ್ಲ ಎಲ್ಲಾ ಉದ್ಯಮಗಳನ್ನು ರಾಷ್ಟ್ರೀಕರಿಸಿತು. ಬರ್ಮಾದ ಈ ಮಾದರಿಯು "ಪ್ರಯೋಗ ಜಗತ್ತಿನ ಪ್ರಗತಿ ಪರರಲ್ಲಿ ಒಂದು ತೆರನಾದ ಭ್ರಮೆಯನ್ನು ಉಂಟು ಮಾಡಿತು ಮಾತ್ರವಲ್ಲ ಬಂಡವಾಳ ಶಾಹಿ ಯೇತರ ಬೆಳವಣಿಗಾ ಮಾರ್ಗವನ್ನು ಬರ್ಮ ಅನುಸರಿಸುತ್ತಿದೆ ಎಂದು ಅವರು ಲೆಕ್ಕಾಚಾರ ಮಾಡುವಂತಾಯಿತು. ಆದರೆ ಸಿ.ಪಿ.ಐ. (ಎಂ) ಈ ವಿಶ್ಲೇಷಣೆಯನ್ನು ಅಂಗೀಕರಿಸಲಿಲ್ಲ. ಕಾರ್ಮಿಕ ವರ್ಗದ ಸ್ವತಂತ್ರ ಪಾತ್ರವನ್ನು ಮರ್ಧಿಸಿ ಸೇನಾ ಬೆಂಬಲಿತ ಪ್ರಭುತ್ವವು ಮೂಲಭೂತ ಸಮಾಜವಾದಿ ಬದಲಾವಣೆಯನ್ನು ತರಲು ಸಾಧ್ಯವಿಲ್ಲವೆಂದು ಪಕ್ಷವು ತಿಳಿಸಿತು.

ದೀರ್ಘ ಕಾಲದವರೆಗೂ ಸೇನಾ ಮುಖಂಡತ್ವದ ಏಕಪಕ್ಷೀಯ ಆಡಳಿತವು ಎಲ್ಲಾ ಅಧಿಕಾರವನ್ನು, ಆರ್ಥಿಕ ಚಟುವಟಿಕೆಗಳನ್ನು ತನ್ನ ಕಪಿಮುಷ್ಟಿಯಲ್ಲಿ ಇರಿಸಿಕೊಂಡಿತ್ತು. ದೇಶದ ಉತ್ತರ ಭಾಗದಲ್ಲಿ — ಸ್ವತಂತ್ರಗೊಂಡಂದಿನಿಂದಲೇ ಆರಂಭಗೊಂಡ ಜನಾಂಗೀಯ ಚಳುವಳಿ- ಸೇನಾ ಕಾರ್ಯಾಚರಣೆಯನ್ನು ಎದುರಿಸಿ ಮುಂದುವರಿಯಿತು. ಇಲ್ಲಿನ ಕರೀನ್, ಶಾನ್ ಮತ್ತು ಕಚ್ಚಿನ್ ಜನಾಂಗಗಳು ಶಸ್ತ್ರಸಜ್ಜಿತಹೋರಾಟಕ್ಕೆ ಇಳಿದವು. ಸೇನಾ ಆಡಳಿತವು ಕಮ್ಯೂನಿಸ್ಟ್ ಪಕ್ಷದ ವಿರುದ್ಧದ ತನ್ನ ಮರ್ಧನವನ್ನು ಮುಂದುವರಿಸಿದ ಮಾತ್ರವಲ್ಲ ಕಮ್ಯೂನಿಸ್ಟ್ ಪಕ್ಷವನ್ನು ಕಾನೂನು ಬಾಹಿರವೆಂದು ಘೋಷಿಸಿತು. ಬರಬರುತ್ತಾ ನೇವಿನ್ ಪ್ರಭುತ್ವವು ತನ್ನ ಕ್ರೂರತೆ, ಭ್ರಷ್ಟಾಚಾರ ಮತ್ತು ಆರ್ಥಿಕ ದುರಾಡಳಿತಕ್ಕೆ ಹೆಸರಾಯಿತು. ನೈಸರ್ಗಿಕ ಸಂಪತ್ತಿನಿಂದ ಶ್ರೀಮಂತವಾಗಿದ್ದ ಈ ದೇಶದ ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಿತು. ವಿದೇಶಗಳಿಗೆ ಅಕ್ಕಿಯನ್ನು ರಫ್ತು ಮಾಡುತ್ತಿದ್ದ ಬರ್ಮಾ ತನ್ನ ಜನರಿಗೆ ಹೊಟ್ಟೆ ತುಂಬಿಸಲು ವಿಫಲಗೊಂಡಿತು.

ಈ ಆರ್ಥಿಕ ಬಿಕ್ಕಟ್ಟಿನ ಪ್ರತಿಫಲ ಹಾಗು ಮರ್ಧನಕಾರಿ ಆಡಳಿತದ ವಿರುದ್ಧ ಈಗ ಜನತೆ ಬಂಡೆದ್ದಿದ್ದಾರೆ. ಈ ಹಿಂದೆ ವಿದ್ಯಾರ್ಥಿಗಳ ಹೋರಾಟವನ್ನು ಕ್ರೂರವಾಗಿ ಮರ್ಧಿಸಲಾಗಿತ್ತು. ಆದರೆ ಈಗಿನ ಪ್ರತಿರೋಧದಲ್ಲಿ ಎಲ್ಲಾ ವರ್ಗದ ಜನತೆ ಪಾಲ್ಗೊಂಡಿದ್ದಾರೆ. ರಂಗೂನ್ ವಿಶ್ವವಿದ್ಯಾನಿಲಯ ಹಾಗು ಇತರೆ ಕೇಂದ್ರಗಳ ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಬರ್ಮಾದ ರಂಗೂನ್, ಮಂಡಲೆ ಹಾಗು ಇತರೆ ಪ್ರಮುಖ ಪಟ್ಟಣಗಳಲ್ಲಿ ಸೈನ್ಯದ ಬೆದರಿಕೆಗೂ ಬೆದರದೆ ದೊಡ್ಡ ರೀತಿಯಲ್ಲಿ ನಿರಂತರ ಮತಪ್ರದರ್ಶನ ನಡೆಸಿದರು. ಕಳೆದ ಕೆಲವಾರು ದಿನಗಳಿಂದ ದೇಶದ ಎಲ್ಲಾ ಸಂಪರ್ಕ ಮಾಧ್ಯಮಗಳು ಹಾಳುಗೆಡಹಲ್ಪಟ್ಟು ಎಲ್ಲಾ ಕೆಲಸಗಳು ನಿಲುಗಡೆಯಾದವು. ಜನತೆಯ ಮೇಲೆ ಗುಂಡಿಕ್ಕಲು ನಿರಾಕರಿಸಿದ ಪೋಲೀಸರ ಕೆಲವು ವಿಭಾಗ ಪ್ರದರ್ಶನಕಾರರ ಜೊತೆ ಸೇರಿದ ವರದಿಯಾಗಿದೆ. ಯಾಂಗ್ ಮಾಂಗ್ ನೇತೃತ್ವದ ಸರಕಾರ-ಯಾವುದೇ ಸುಧಾರಣೆಯ ಭರವಸೆ ನೀಡಿದಾಗ್ಯೂ ಆಡಳಿತ ನಡೆಸುವ ಸಾಧ್ಯತೆ ಕಡಿಮೆಯಾಗುತ್ತಿದೆ.

ಪ್ರದರ್ಶನಕಾರರ ಮೇಲೆ ಕ್ರೂರವಾಗಿ ಗುಂಡಿನ ಮಳೆ ಸುರಿಸಿದ ಸೇನೆ ನೂರಾರು ಜನರ ಕೊಲೆಗೆ ಕಾರಣವಾಗಿದೆ. ಹಿಂದಿನ ಬರ್ಬರ ಆಡಳಿತ ಇನ್ನೆಂದೂ ನಡೆಯಲು ಸಾಧ್ಯವಿಲ್ಲವೆನ್ನುವುದು ಹೋರಾಟದ ತೀವ್ರತೆಯಿಂದ ತಿಳಿದು ಬರುತ್ತದೆ. ಬದಲಿ ವ್ಯವಸ್ಥೆಯಾದ ರೂಪದಲ್ಲಿ ಹೊರಹೊಮ್ಮಲಿದೆ ಎನ್ನುವುದು ಇನ್ನು ಸ್ಪಷ್ಟವಾಗಿದೆ. ಬರ್ಮಾದ ಜನತೆಯ ಪ್ರಜಾಸತ್ತಾತ್ಮಕ ಆಶಯ ನಂಬಲರ್ಹವಾದ ಬದಲಿಯನ್ನು ಕಾಣಲಿ ಎಂದು ಆಶಿಸಬಹುದು.

ರಸ್ಟ್ ಈಗ ಹಿರೋ ಅಲ್ಲ

14 ತಿಂಗಳ ಹಿಂದೆ ಮಾಸ್ಕೋದ ಕೆಂಪು ಚೌಕದಲ್ಲಿ ವಿಮಾನ ಇಳಿಸಿದ ದುಸ್ಸಾಹಸ ಮಾಡಿದ್ದ 20 ವರ್ಷದ ಜರ್ಮನ್ ಯುವಕ ಮಥ್ಯಾಸ್ ರಸ್ಟ್, ಆಗ ಇದ್ದಕ್ಕಿದ್ದಂತೆ ಪಾಶ್ಚಿಮಾತ್ಯ ಪತ್ರಿಕೆಗಳಲ್ಲಿ ಒಬ್ಬ ಜಾನಪದ ಹೀರೋ ಆಗಿಬಿಟ್ಟಿದ್ದ. ಆದರೆ ಈಗ ಆತನನ್ನು ಯಾರೂ ಹಾಗೆ ಬಗೆಯುವುದಿಲ್ಲ ಎಂದು ಅಮೆರಿಕನ್ ಟಿ. ವಿ. ಜಾಲವೊಂದು ಹೇಳಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ತನ್ನ ದುಸ್ಸಾಹಸಕ್ಕಾಗಿ 4 ವರ್ಷಗಳ ಶಿಕ್ಷೆಯನ್ನ ಆತನಿಗೆ ವಿಧಿಸಲಾಗಿದ್ದರೂ, ಆತ ತನ್ನ ತಪ್ಪನ್ನು ಪೂರ್ಣವಾಗಿ ಒಪ್ಪಿಕೊಂಡಿರುವುದರಿಂದ ಆತನನ್ನು ಮೊದಲೇ ಬಿಡುಗಡೆ ಮಾಡಬೇಕೆಂದು ಸೋವಿಯೆತ್ ಒಕ್ಕೂಟದ ಸುಪ್ರೀಂ ಸೋವಿಯೆತ್‌ನ ಅಧ್ಯಕ್ಷ ಮಂಡಳಿಯ ತೀರ್ಮಾನದ ಮೇರೆಗೆ ಆಗಸ್ಟ್ 3 ರಂದು ಆತನನ್ನು ಬಿಡುಗಡೆ ಮಾಡಿದಾಗ "ಇದು ಸೋವಿಯೆತ್ ಸರ್ಕಾರದ ನಿಜವಾಗಿಯೂ ಮಾನವೀಯ ಕ್ರಮ" ಎಂದು ಈಸ್ಟ್ ಹೇಳಿರುವುದಾಗಿ ವರದಿಯಾಗಿದೆ.

ಅಸೀಮಿತ ಅವಕಾಶಗಳ ದೇಶವಲ್ಲ !

ಕಷ್ಟಪಟ್ಟು ದುಡಿದು, ದೈವಭಕ್ತಿಯಿಂದ್ದರೆ ತನ್ನ ಸ್ವಂತ ಸುಂದರ ಮನೆಯಲ್ಲಿ ಸುಖದ ಬದುಕು ದೈವೀ ಸತ್ಯ ಎಂದು ಅಮೇರಿಕಾದ ಮಧ್ಯಮ ವರ್ಗದ ಜನ ಬಲವಾಗಿ ನಂಬಿದ್ದ ಸಮಯವೊಂದಿತ್ತು. ಈಗ ಅದು ಇತಿಹಾಸದ ಮಾತಾಗುತ್ತಿದೆಯಂತೆ. ಒಂದು ಸ್ವಂತ ಮನೆಯನ್ನು ಹೊಂದುವುದು ಈಗ ಮಧ್ಯಮವರ್ಗದ ಜನರಿಗೂ ಹೆಚ್ಚೆಚ್ಚು ಅಸಂಭವವಾಗುತ್ತಿದೆ-ಅದರ ಮೂರ್ಛೆ ಬರಿಸುವ ಬೆಲೆಗಳಿಂದಾಗಿ.

ಅಮೇರಿಕಾ ತಮಗೆ ಅಸೀಮಿತ ಅವಕಾಶ ಒದಗಿಸುವ ದೇಶವೆಂಬ "ಮಧ್ಯಮ ವರ್ಗಗಳ ನಂಬಿಕೆ ಸಡಿಲವಾಗುತ್ತಿದ್ದು, ಅವರು ಸಮಾಜವಾಧ ಮುಂತಾದ ವಿಚಾರಗಳಿಗೆ ಒಲಿಯಬಹುದು.''

ಮಹಾರಾಷ್ಟ್ರ : ಹಾಲಿನ ಬೆಲೆ ಏರಿಕೆ ಮಹಿಳೆಯರ ಪ್ರತಿಭಟನೆ

ಮಹಾರಾಷ್ಟ್ರ ರಾಜ್ಯ ಸರಕಾರವು ಆಗಸ್ಟ್ 16 ರಿಂದ ಹಾಲಿನ ಮಾರಾಟ ಬೆಲೆಯನ್ನು ಏರಿಸಿರುವುದನ್ನು ಪ್ರತಿಭಟಿಸಿ ಮುಂಬೈ ನಗರದಲ್ಲಿ ಆಗಸ್ಟ್ 23 ರಂದು ನವೀನ ಮಾದರಿಯ ಪ್ರತಿಭಟನೆಯನ್ನು ಮಹಿಳೆಯರು ನಡೆಸಿದರು. ಶ್ರಮಿಕ ಮಹಿಳಾ ಸಂಘ (ಎ.ಐ.ಡಿ.ಡಬ್ಲ್ಯು.ಎ.), ಭಾರತೀಯ ಮಹಿಳಾ ಫೆಡರೇಷನ್, ಸಮಾಜವಾದಿ ಮಹಿಳಾ ಸಭಾ ಮತ್ತು ಇತರೇ ಸಂಘಟನೆಗಳು ಜಂಟಿಯಾಗಿ ರೂಪಿಸಿಕೊಂಡಿದ್ದ 'ಬೆಲೆ ಏರಿಕೆ ವಿರೋಧಿ ಮಹಿಳಾ ಕ್ರಿಯಾ ಸಮಿತಿ' ಆಶ್ರಯದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು. ಗಣನೀಯ ಸಂಖ್ಯೆಯಲ್ಲಿ ಮಹಿಳೆಯರು-ಮಕ್ಕಳು ಭಾಗವಹಿಸಿದ್ದರು.

ಸಾರ್ವಜನಿಕರ ಮತ್ತು ಪತ್ರಿಕೆಗಳ ಗಮನ ಸೆಳೆದ ಈ ಹೋರಾಟದ ಮುಂದಾಳತ್ವವನ್ನು ಮಹಿಳಾ ಮುಖಂಡರುಗಳಾದ ಅಹಲ್ಯಾರಂಗಣೇಕರ್, ಮೃಣಾಳ್ ಗೋರೆ, ತಾರಾರೆಡ್ಡಿ ಪ್ರಮೀಳಾದಂಡವತೆ ವಹಿಸಿದ್ದರು. ಆಗಸ್ಟ್ 25 ರಂದು ಈ ಹೋರಾಟ ಸಮಿತಿಯ ನಿಯೋಗ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿತ್ತು.

ಕಳೆದ ಆರು ತಿಂಗಳಲ್ಲಿ ಕಾಂಗ್ರೆ ನೇತೃತ್ವದ ರಾಜ್ಯ ಸರಕಾರ ಶೇ. 30 ರಷ್ಟು ಹಾಲಿನ ಬೆಲೆ ಏರಿಸಿದೆ. ಹಾಲಿನ ಸಕಾರಿ ಬೆಲೆ ಲೀಟರಿಗೆ ರೂ. 6 ಇದ್ದದ್ದು ಈಗ ರೂ. 7.80 ಕ್ಕೆ ಏರಿಸಲಾಗಿದೆ. ಪರಿಣಾಮವಾಗಿ ಖಾಸಗಿ ಹಾಲಿನ ವರ್ತಕರೂ ಹಾಲಿನ ಮಾರಾಟ ಬೆಲೆ ಏರಿಸಿದ್ದಾರೆ. ಇದು ರೂ. 9 ರವರೆಗೂ ತಲುಪಿದೆ.

ಹೊಸ ಶರದ್‌ಪವಾರ್ ಸರಕಾರ ದಿನೇ ದಿನೇ ಎಲ್ಲಾ ವಸ್ತುಗಳ ಧಾರಣೆಯನ್ನು ಏರಿಸುತ್ತಿದ್ದು ಜನರಲ್ಲಿ ತೀವ್ರ ಅಸಮಾಧಾನ ಮೂಡುತ್ತಿದೆ.

ಬಿಹಾರದಲ್ಲಿ ಭೂಕಂಪ

ಕಳಪೆ ಪರಿಹಾರ ಕಾರ್ಯಕ್ರಮ

—ಕಾ|| ಇ. ಎಂ. ಎಸ್.

ಭೀಕರನಾದ ಭೂಕಂಪನಕ್ಕೆ ಒಳಗಾಗಿ ಅಪಾರ ನಷ್ಟ ಹಾಗು ಸಾವುನೋವುಗಳಿಗೆ ಕಾರಣವಾದ ಬಿಹಾರ ರಾಜ್ಯದ ಪಾಟ್ನಾದಿಂದ ಮುಂಗೇರ್‌ವರೆಗೆ ಆಗಸ್ಟ್ 26 ರಂದು ವಾಹನದಲ್ಲಿ ಪ್ರಯಾಣಿಸುತ್ತಿದ್ದಾಗ ಅಲ್ಲಿನ ಗ್ರಾಮಾಂತರ ಪ್ರದೇಶಗಳು ತೀವ್ರ ನೆರೆ ಹಾವಳಿಗೂ ಒಳಪಟ್ಟಿರುವುದನ್ನು ನಾನು ನೋಡಿದೆ. ಈ ಮೂಲಕ ಜನತೆ ಎರಡೂ ಕಡೆಗಳಿಂದ ಬಾಧಿಸಲ್ಪಟ್ಟಿದ್ದಾರೆ. ಒಂದೆಡೆ ಭೂಕಂಪ-ಇನ್ನೊಂದೆಡೆ ನೆರೆ. ತೀವ್ರ ನೆರೆ ಮತ್ತು ಇತರೇ ಕಾರಣಗಳಿಂದಾಗಿ ಹೆಚ್ಚಿನ ಪ್ರದೇಶಗಳಿಗೆ ಭೇಟಿ ನೀಡಲು ನನಗೆ ಸಾಧ್ಯವಾಗದಿದ್ದರೂ, ಮುಂಗೇರ್ ಮತ್ತು ಮಧುಬನಿ ಜಿಲ್ಲಾ ಕೇಂದ್ರಗಳಿಗೆ ಹಾಗು ದರ್ಭಾಂಗಾದ ವೈದ್ಯ ಕಾಲೇಜಿನ ಆಸ್ಪತ್ರೆಗೆ ಭೇಟಿ ನೀಡಿದೆ. ಅಲ್ಲಿನ ನಗರ ಪ್ರದೇಶಗಳಿಗೂ ಸಂದರ್ಶನ ನೀಡಿದೆ.

ಇಷ್ಟೊಂದು ದೊಡ್ಡ ರೀತಿಯ ಅನಾಹುತ ನಡೆದಿದ್ದಾಗ್ಯೂ ಪ್ರಧಾನ ಮಂತ್ರಿಗಳು ಈ ಬಗ್ಗೆ ಆತಂಕ ವ್ಯಕ್ತಪಡಿಸದೆ 'ಪತ್ರಿಕೆಗಳು ದುರಂತದ ಬಗ್ಗೆ ಅತಿಶಯೋಕ್ತಿ ಮಾಡಿವೆ', ಎಂದು ಹೇಳಿಕೆ ನೀಡಿರುವುದು ಅವರ ಅಜ್ಞಾನವನ್ನು ತೋರಿಸುತ್ತದೆ. ಪ್ರಾಕೃತಿಕ ವಿಕೋಪಕ್ಕೆ ಒಳಗಾಗಿರುವ ಜನತೆಗೆ ನೆರವಾಗುವ ಗುರುತರವಾದ ಜವಾಬ್ದಾರಿಯಿಂದ ಕೇಂದ್ರ ಸರಕಾರ ನುಣುಚಿಕೊಳ್ಳುವ ಪ್ರಯತ್ನದ ಭಾಗವೇ ಈ ಹೇಳಿಕೆಯಾಗಿದೆ. ಕೇವಲ ಸೀಮಿತ ಆದಾಯವನ್ನು ಹೊಂದಿರುವ ರಾಜ್ಯ ಸರ್ಕಾರಗಳು ಪ್ರತೀ ವರ್ಷವೂ ದೇಶದ ಒಂದಲ್ಲ ಒಂದು ಭಾಗಗಳಲ್ಲಿ ಉಂಟಾಗುವ ಇಂತಹ ಪ್ರಾಕೃತಿಕ ವಿಕೋಪಗಳ ಸಂದರ್ಭಗಳಲ್ಲಿ ತಾನೇ ಸ್ವತಃ ಪರಿಹಾರ ವೆಚ್ಚವನ್ನು ಭರಿಸುವುದು ಕಷ್ಟಕರವಾಗಿರುವಾಗ ರಾಜೀವ್ ಗಾಂಧಿಯವರು ಈ ರೀತಿ ಮಾತನಾಡುವುದು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನವಷ್ಟೇ ಆಗಲಿದೆ. ಬಿಹಾರದ ಮುಖ್ಯಮಂತ್ರಿಗಳೂ ತಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ರಾಜ್ಯಸರ್ಕಾರದಿಂದಲೇ ಇದು ಸಾಧ್ಯವಿಲ್ಲ-ಕೇಂದ್ರದ ನೆರವು, ದೇಶದ ಇತರೇ ರಾಜ್ಯಗಳ ಹಾಗು ಸಾರ್ವಜನಿಕರ ನೆರವು ಇದಕ್ಕೆ ಅಗತ್ಯವೆನ್ನುವುದನ್ನು ಅರಿತು ಅವರು-ಅವರ ಪಕ್ಷ ಕೆಲಸ ಮಾಡಬೇಕಿತ್ತು. ಎಲ್ಲಾ ರಾಜಕೀಯ ಪಕ್ಷಗಳ ಬೆಂಬಲ ಪಡೆಯುವ ಕನಿಷ್ಠ ಕರ್ತವ್ಯವನ್ನಾದರೂ ನಿರ್ವಹಿಸಬೇಕಿತ್ತು. ರಾಜ್ಯಮಟ್ಟದ ಸರ್ವ ಪಕ್ಷಗಳ ಪರಿಹಾರ ಸಮಿತಿ ರಚಿಸಬೇಕಿತ್ತು. ಸಂಗ್ರಹಿಸಲಾದ ಹಣ ದುರುಪಯೋಗವಾಗಲಾರದೆಂಬ ಭರವಸೆ ಜನರಿಗೆ ಮೂಡುತ್ತಿತ್ತು. ಈ ಬಗ್ಗೆ ಸೂಚಿಸುತ್ತಾ, ನಾನು ಮುಖ್ಯಮಂತ್ರಿಗಳಿಗೆ ತಿಳಿಸುವುದೇನೆಂದರೆ ರಾಜ್ಯಸರ್ಕಾರಿ ನೌಕರರಿಂದ ಪೂರ್ಣ ಸಹಕಾರವನ್ನು ಪಡೆಯಲೂ ಸರಕಾರ ಮುಂದಾಗಬೇಕು. ಮುಖ್ಯಮಂತ್ರಿಗಳು ರಾಜ್ಯ ಸರ್ಕಾರಿ ನೌಕರರ ಮುಖಂಡರುಗಳೊಂದಿಗೆ ಬಿಚ್ಚು ಮನಸ್ಸಿನ ಮಾತುಕತೆಗೆ ತಯಾರಾಗದಿದ್ದಲ್ಲಿ ಸೆಪ್ಟೆಂಬರ್ 6 ರಿಂದ ಹೋರಾಟ ಕಣಕ್ಕೆ ಸರಕಾರಿ ನೌಕರರು ಇಳಿಯಲಿರುವ ಕಾರಣದಿಂದಾಗಿ ಇಡೀ ಸರಕಾರಿ ಯಂತ್ರವೇ ತಟಸ್ಥಗೊಳ್ಳಲಿದೆ.

ಇದೇ ಬಿಹಾರದಲ್ಲಿ 54 ವರ್ಷಗಳ ಹಿಂದೆ ಈಗಿನಕ್ಕಿಂತ ಭಾರೀ ಅನಾಹುತ ಉಂಟುಮಾಡಿದ ಭೂಕಂಪನ ಸಂಭವಿಸಿದಾಗ ಕಾಂಗ್ರೆಸ್ಸಿನ ಇಡೀ ನಾಯಕತ್ವ ಪರಿಹಾರ ಕಾರ್ಯಕ್ಕೆ ಧುಮುಕಿ ಮಾದರಿಯಾದ ಉದಾಹರಣೆಯನ್ನು ಈಗಿನ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಈಗ ರಾಜ್ಯ ಸರಕಾರ ಮಾಡುತ್ತಿರುವ ಪರಿಹಾರ ಕ್ರಮಗಳು ತೀರಾ ಅತೃಪ್ತಿಕರವಾಗಿದೆ ಎನ್ನುವುದರಲ್ಲಿ ಯಾವ ಆಶ್ಚರ್ಯವೂ ಉಳಿದಿಲ್ಲ. ಗಾಯಗೊಂಡವರನ್ನು ದಾಖಲಿಸಿಕೊಂಡಿರುವ ಆಸ್ಪತ್ರೆಗಳಲ್ಲಿ ಪರಿಸ್ಥಿತಿ ವ್ಯಸನ ಪಡುವಂತಿ. ಧರ್ಭಾಂಗ ವೈದ್ಯ ಕಾಲೇಜಿನ ಆಸ್ಪತ್ರೆ ಸೋರುತ್ತಿದ್ದು, ಗೋಡೆಗಳು ಬಿರುಕುಬಿಟ್ಟಿದೆ ಮಾತ್ರವಲ್ಲ ಅಗತ್ಯ, ಉಪಕರಣಗಳೂ ಅಲಭ್ಯವಾಗಿವೆ. ಕೆಲವು ಸ್ವಯಂ ಸೇವಾ ಸಂಸ್ಥೆಗಳ ನೆರವಿಲ್ಲದಿದ್ದಲ್ಲಿ ಈಗ ಆಸ್ಪತ್ರೆಯಲ್ಲಿ ದೊರೆಯುತ್ತಿರುವ ಔಷಧಿಗಳು ಸಿಗುತ್ತಿರಲಿಲ್ಲ.

ತುರ್ತಾಗಿ ಸರಕಾರ ಘೋಷಿಸಿರುವ ಪರಿಹಾರ ಸತ್ತವರ ಕುಟುಂಬಕ್ಕೆ ರೂ. 5 ಸಾವಿರ ಮತ್ತು ಗಾಯಗೊಂಡವರಿಗೆ ರೂ. 250 ಎನ್ನುವುದರಲ್ಲಿ ಸಾವಿರಾರು ಜನ ಮನೆಮಠ ಕಳೆದುಕೊಂಡು ತೀವ್ರ ಮಳೆ-ಚಳಿಯಲ್ಲಿ ಬಟ್ಟಬಯಲಿನಲ್ಲಿ ಜೀವನ ಸಾಗಿಸುತ್ತಿರುವವರ ಬಗ್ಗೆ ಗಮನದಲ್ಲಿ ಇದ್ದಂತಿಲ್ಲ. ತಾತ್ಕಾಲಿಕವಾದ ವಾಸದ ವ್ಯವಸ್ಥೆಯನ್ನು ಕೂಡ ಮಾಡಲಿಲ್ಲವೆನ್ನುವುದು ತುಂಬಾ ಆಶ್ಚರ್ಯದ ವಿಚಾರವಾಗಿದೆ. ಈ ನಂತರ ಬರುವ ಸಮಸ್ಯೆಗಳಾದ ಅನಾಹುತಕ್ಕೆ ಸಿಲುಕಿ ಬಾದಿಸಲ್ಪಟ್ಟಿರುವ ಕಟ್ಟಡಗಳ ದುರಸ್ತಿ, ಪೂರ್ಣ ಬಿದ್ದಿರುವ ಮನೆಗಳ ಸ್ಥಳಗಳಲ್ಲಿ ಹೊಸ ಮನೆಗಳ ನಿರ್ಮಾಣ- ಇತರೆ ಆಸ್ತಿಪಾಸ್ತಿಗಳ ದುರಸ್ತಿ ಇವೇ ಮೊದಲಾದ ಕಾರ್ಯಗಳಿಗೆ ಇನ್ನೂ ಆರಂಭವೇ ಮೂಡಿಲ್ಲ. ಮನೆ ಮತ್ತು ಇತರೆ ಆಸ್ತಿಗಳಿಗಾಗಿರುವ ನಷ್ಟದ ಬಗ್ಗೆ ಇನ್ನೂ ಅಂದಾಜಿಗೆ ಬರಲಾಗಿಲ್ಲ.

ರಾಜ್ಯ ಇಲ್ಲವೇ ಕೇಂದ್ರ ಸರಕಾರ ಆಗಿರುವ ಅನಾಹುತದ ದೊಡ್ಡ ಪರಿಣಾಮದ ಬಗ್ಗೆ ಗಮನವೇ ನೀಡಿಲ್ಲವೆನ್ನುವುದಂತು ಸ್ಪಷ್ಟ.

(ಇ.ಎಂ.ಎಸ್. ರವರು ಬಿಹಾರಕ್ಕೆ ಭೇಟಿ ಕೊಟ್ಟ ನಂತರ ಬರೆದ ಲೇಖನದ ಆಯ್ದ ಭಾಗ)

ಪಾಲಿಟ್‌ಬ್ಯೂರೊ ಸಂತಾಪ

ಬಿಹಾರ ಹಾಗೂ ಪೂರ್ವಭಾರತದ ಇತರ ಭಾಗಗಳು ಮತ್ತು ನೇಪಾಳವನ್ನು ತಟ್ಟಿದ ಭೂಕಂಪದಲ್ಲಿ ನೂರಾರು ಮಂದಿ ಪ್ರಾಣ ಕಳೆಕೊಂಡ ಬಗ್ಗೆ ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೋ ತನ್ನ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಈ ಅನಾಹುತ ಬಿಹಾರದಲ್ಲಿ ಆಸ್ತಿ-ಪಾಸ್ತಿಗಳಿಗೆ ವ್ಯಾಪಕ ನಷ್ಟವುಂಟು ಮಾಡಿದೆ. ಸಾವಿರಾರು ಕುಟುಂಬಗಳು ತಮ್ಮ ಸಂಬಂಧಿಕರನ್ನು ಕಳಕೊಂಡಿವೆ. ಕೆಲವರು ಎಲ್ಲವನ್ನೂ ಕಳಕೊಳ್ಳುವಂತಾಗಿದೆ.

ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಪಾಲಿಟ್‌ಬ್ಯೂರೋ ಬಿಹಾರ್‌ನ ಪಕ್ಷದ ಘಟಕಗಳಿಗೆ ಕರೆ ನೀಡಿದೆ. ಇದಕ್ಕೆ ದೇಶಾದ್ಯಂತ ಪಕ್ಷದ ಘಟಕಗಳು ನೆರವಾಗಬೇಕೆಂದು ಅದು ಹೇಳಿದೆ. ಬಿಹಾರದ ಸಂತ್ರಪ್ತ ಜನತೆಗೆ ಪರಿಹಾರ ಮತ್ತು ಪುನರ್ವಸತಿ ಕ್ರಮಗಳು ಪರಿಣಾಮಕಾರಿಯಾಗಿ ತಲುಪುವಂತೆ ಭಾರತ ಸರ್ಕಾರ ಸರ್ವಪ್ರಯತ್ನ ಮಾಡುವುದೆಂದು ನಿರೀಕ್ಷಿಸಿರುವ ಪಾಲಿಟ್‌ಬ್ಯೂರೋ ಇದರ ಜೊತೆಗೆ ಪರಿಹಾರ ಕಾರ್ಯಗಳ ಉಸ್ತುವಾರಿ ನಡೆಸಲು ಜನಪ್ರಿಯ ಸಮಿತಿಗಳನ್ನು ರಚಿಸಿಕೊಳ್ಳಬೇಕು. ಇದು ಅತ್ಯಗತ್ಯ. ಏಕೆಂದರೆ ಬಿಹಾರ ರಾಜ್ಯದ ಆಡಳಿತ ಅದಕ್ಷತೆಗೆ ಹೆಸರಾಗಿದ್ದು, ಈ ಪರಿಹಾರ ಕೆಲಸವನ್ನು ಅದು ತಾನಾಗಿ ಮಾಡುತ್ತದೆಂದು ನಂಬಲಾಗದು ಎಂಬುದಾಗಿ ಪಾಲಿಟ್‌ಬ್ಯೂರೋ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

KRNW/BGS-312 MAG (2) PRB DECR 319/78-79

13 ನೇ ಸಮ್ಮೇಳನದತ್ತ

(1ನೇ ಪುಟದಿಂದ)

ಸರಕಾರಕ್ಕೆ ಬೆಂಬಲ ಕೊಡುವಾಗಲೇ, ಜನತಾ ಸರಕಾರವು ವಹಿಸಬಹುದಾದ ಎಲ್ಲಾ ಪ್ರತಿಗಾಮಿ ಜನವಿರೋಧಿ ಧೋರಣೆಗಳನ್ನು ತೀವ್ರವಾಗಿ ವಿರೋಧಿಸಿ ಸಾಮೂಹಿಕ ಹೋರಾಟಗಳನ್ನು ನಡೆಸಬೇಕು. ಅದೇ ವೇಳೆ ನ್ಯಾಯವಾದ ಜನರ ಬೇಡಿಕೆಗಳ ಪೂರೈಕೆಗಾಗಿ ಜನತೆಯ ಮಧ್ಯೆ, ಎಡರಂಗದ ಸರಕಾರಗಳು ಪಶ್ಚಿಮ ಬಂಗಾಲದಲ್ಲೂ ತ್ರಿಪುರಾದಲ್ಲೂ ನಡೆಸುತ್ತಾ ಬರುತ್ತಿರುವ ಕನಿಷ್ಠ ಪರ್ಯಾಯ ಕಾರ್ಯಕ್ರಮಗಳನ್ನು ಪ್ರಚಾರ ಮಾಡಬೇಕು'' ಎಂದು ಹೇಳಿರುವುದನ್ನು ಎಷ್ಟರ ಮಟ್ಟಿಗೆ ಪೂರೈಸಿದ್ದೇವೆ ಎಂಬುದನ್ನು ಚರ್ಚಿಸಬೇಕಾಗಿದೆ.

ಕರಡು ವರದಿಯಲ್ಲಿ ಕರ್ನಾಟಕದ ಅಭಿವೃದ್ಧಿಯೋಜನೆಗಳಿಗೆ ಕೇಂದ್ರ ಸರಕಾರವು ತೋರಿಸಿದ ಮಲತಾಯಿ ಧೋರಣೆಯನ್ನು ಪ್ರತಿಭಟಿಸಿ ನಡೆಸಿದ 1985 ಜುಲೈ 8ರ ಹಾಗೂ ಆಗಸ್ಟ್ 9ರ ಚಳುವಳಿಗಳನ್ನ 'ರಾಜ್ಯದ ಎಲ್ಲ ಭಾಗಗಳ ಜನರ ಗಮನ ಸೆಳೆದ ಹೋರಾಟಗಳಾಗಿವೆ'' ಎಂದು ಪ್ರಶಂಸೆ ವ್ಯಕ್ತಮಾಡುತ್ತಾ ''ನಮ್ಮ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಹೋರಾಟದ ಶಕ್ತಿಯು ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗೂ ಹರಡಿದ್ದು. ಅದು ಕ್ರಮೇಣ ಬೆಳೆಯುತ್ತಾ ಹೋಗುತ್ತಿದೆ. ಈ ಕಾರ್ಯಾಚರಣೆಗಳು ರಾಜ್ಯದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆಗೆ ಸ್ಫೂರ್ತಿದಾಯಕವಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ'' ಎಂಬ ಆಶಯ ವ್ಯಕ್ತಮಾಡಿದೆ. ಈ ಆಶಯದಂತೆ ರಾಜ್ಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆ ಆಗಿದೆಯೇ? ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಚಳುವಳಿ ಮುಂದುವರಿಸಿದೆಯೇ? ಮುಂದುವರಿದಿದ್ದರೆ ಅದು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ. ಎಷ್ಟು ಪ್ರದೇಶಗಳಿಗೆ ವಿಸ್ತರಿಸಲ್ಪಟ್ಟಿದೆ. ಹಾಗಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು? ಮುಂದುವರಿಯಲು ಉಪಾಯ ಯೋಜನೆಗಳೇನು ಎಂಬುದರ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಬೇಕಾಗಿದೆ. ಕಾರ್ಯಕ್ರಮ ನಿರ್ಧರಿಸಬೇಕಾಗಿದೆ.

ನಮ್ಮ ಪಕ್ಷದ, ಸಾಮೂಹಿಕ ಸಂಘಟನೆಗಳ ಚಳುವಳಿಗಳನ್ನು ವಿಮರ್ಶಿಸುತ್ತಾ "ನಮ್ಮ ಪಕ್ಷವು ಸ್ವಂತ ಶಕ್ತಿಯನ್ನು ಹೆಚ್ಚಿಸಿಕೊಂಡು ರಾಜ್ಯದ ಜನರ ಪ್ರಜಾಸತ್ತಾತ್ಮಕ ಬೇಡಿಕೆಗಳಿಗೆ ಸ್ಪಂದಿಸುತ್ತಾ ರಾಜ್ಯದ ರಾಜಕೀಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆಗೆ ಸಾಧಕವಾಗಲಿ ಎಂಬುದೇ ನಮ್ಮ ಆಶಯ' ಎಂದು ಕರಡು ವರದಿಯಲ್ಲಿ ಹೇಳಿ ಪಕ್ಷದ ಸದಸ್ಯರಿಂದ, ಮುಖಂಡತ್ವದಿಂದ 12ನೆಯ ಸಮ್ಮೇಳನ ಭರವಸೆಯನ್ನು ಅಪೇಕ್ಷಿಸಿದೆ. ಇದರಲ್ಲಿ ನಾವು ಎಷ್ಟು ಮುನ್ನಡೆ ಸಾಧಿಸಿದ್ದೇವೆ ಎಂಬುದನ್ನು ತೋರಿಸಿಕೊಡಬೇಕಾಗಿದೆ. ಇನ್ನೂ ಹೆಚ್ಚಿನ ಸಾಧನೆಗೆ ನಾಂದಿ ಹಾಕಬೇಕಾಗಿದೆ.

12ನೆಯ ಸಮ್ಮೇಳನ ನಡೆದಾಗ ರಾಜ್ಯದಲ್ಲಿ ಜನತಾಪಕ್ಷ ಒಂದು ವರ್ಷ ಒಂಭತ್ತು ತಿಂಗಳು ಅಧಿಕಾರದಲ್ಲಿತ್ತು. 13ನೆಯ ಸಮ್ಮೇಳನ ನಡೆಯುವಾಗ ಜನತಾಪಕ್ಷದ ಎರಡನೆಯ ಸರಕಾರ ಮೂರುವರ್ಷ ಎಂಟು ತಿಂಗಳ ಅಧಿಕಾರ ಮುಂದುವರಿಸುತ್ತಿರುವುದನ್ನು ಕಾಣುತ್ತಿದ್ದೇವೆ. 12ನೆಯ ಸಮ್ಮೇಳನ ನಡೆಯುತ್ತಿದ್ದಾಗ ರಾಮಕೃಷ್ಣ ಹೆಗಡೆಯವರು ಎರಡನೇ ಸಲ ಮುಖ್ಯಮಂತ್ರಿಯಾಗಿದ್ದರು. ಆದರೆ 13ನೇ ಸಮ್ಮೇಳನ ನಡೆಯುತ್ತಿರುವಾಗ ಜನತಾ ಪಕ್ಷ ಅಧಿಕಾರದಲ್ಲಿದ್ದರೂ ಕೂಡ. ಜನತಾ ಪಕ್ಷದೊಳಗಿನ ಆಂತರಿಕ ಜಗಳದಿಂದಾಗಿ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಡಬೇಕಾಗಿ ಬಂತು. ಈಗ ಎಸ್. ಆರ್. ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾರೆ. ರಾಷ್ಟ್ರಮಟ್ಟದಲ್ಲೂ ರಾಜ್ಯಮಟ್ಟದಲ್ಲೂ ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಯಲ್ಲಿ 13ನೇ ಸಮ್ಮೇಳನ ಸೇರುತ್ತಿದೆ.

"ಜನತಾಪಕ್ಷದ ಸರಕಾರದಿಂದ ಜನತೆಯು ಬಹಳಷ್ಟು ಕೆಲಸಗಳನ್ನು ಅಪೇಕ್ಷಿಸುವುದರಿಂದಲೂ ಜನತಾಪಕ್ಷದ ಸರಕಾರವು ದೃಢವಾಗುವ ಮೊದಲೇ ಅದನ್ನ ಕಿತ್ತು ಹಾಕಲು ಕಾಂಗ್ರೆಸ್ (ಐ) ಪಕ್ಷ, ಕೇಂದ್ರ ಕಾಂಗ್ರೆಸ್ (ಐ) ಸರಕಾರದ ಸಹಾಯದಿಂದ ಸರ್ವ ಪ್ರಯತ್ನ ಮಾಡುತ್ತಾ ಬರುತ್ತಿರುವುದರಿಂದಲೂ, ರಾಜ್ಯದ ರಾಜಕೀಯ ಪರಿಸ್ಥಿತಿಯು ತೀರಾ ಅಭದ್ರವಾಗಿದೆ'' ಎಂದು 12ನೆಯಸಮ್ಮೇಳನವರದಿ ಹೇಳಿದೆ. ಈ ಹೊತ್ತು ಮತ್ತೊಂದು ಅದಕ್ಕೆ ಮತ್ತೊಂದು ಅಂಶ ಸೇರಿಸಬೇಕಾಗಿದೆ. ಜನತಾ ಪಕ್ಷದೊಳಗಿನ ಆಂತರಿಕ ಜಗಳ, ಆತೆಯ ವೈಫಲ್ಯಗಳೂ ಜನರಲ್ಲಿ ನಿರಾಶೆಯನ್ನುಂಟು ಮಾಡುತ್ತಿವೆ ಮಾತ್ರವಲ್ಲ ಕಾಂಗ್ರೆಸ್ಸಿಗೆ ಅನುಕೂಲ ವಾತಾವರಣ ಉಂಟು ಮಾಡುತ್ತಿವೆ ಎಂಬುದನ್ನು 13ನೇ ಸಮ್ಮೇಳನ ಗಮನಿಸುವುದು ಅಗತ್ಯ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ, ದೇಶದಲ್ಲಿ ಬೆಳೆದು ಬರುತ್ತಿರುವ ರಾಜೀವಗಾಂಧಿ ವಿರೋಧಿ ವಾತಾವರಣವನ್ನು ಉಪಯೋಗಿಸಿಕೊಂಡು, ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಯ ಲಾಭ ಪಡೆದು, ಕರ್ನಾಟಕ ರಾಜ್ಯದಲ್ಲಿ ನಮ್ಮ ಪಕ್ಷ, ಎಡ ಪಕ್ಷಗಳು, ಅವುಗಳ ಮುಖಂಡತ್ವದ ಸಾಮೂಹಿಕ ಸಂಘಟನೆಗಳು ಹಾಗೆಯೇ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಸೇರಿ, ಕರ್ನಾಟಕದ ರಾಜಕೀಯವನ್ನು, ಆಡಳಿತವನ್ನು, ಕಾಂಗ್ರೆಸ್ ವಿರೋಧಿಯಾಗಿ ಮುಂದುವರಿಸಿಕೊಂಡು ಹೋಗಲು, ಜೊತೆಯಲ್ಲಿಯೇ ಸಿ.ಪಿ.ಐ.(ಎಂ) ಪಕ್ಷದ ಬಲ ಇಮ್ಮಡಿಗೊಳಿಸಲು, ಎಡ ಪಕ್ಷಗಳ, ಸಾಮೂಹಿಕ ಸಂಘಟನೆಗಳ ಪ್ರಭಾವ ಹೆಚ್ಚಿಸಿ ರಾಜ್ಯದ ರಾಜಕೀಯದಲ್ಲಿ ಬದಲಾವಣೆ ತರಲು ಬೇಕಾದ ಕಾರ್ಯಕ್ರಮಗಳನ್ನು 13 ನೇ ಸಮ್ಮೇಳನ ರೂಪಿಸಬೇಕಾಗಿದೆ. ಅದನ್ನು ಕಾರ್ಯರೂಪದಲ್ಲಿ ತರಲು ಪಕ್ಷದ ಘಟಕಗಳನ್ನು ಅಣಿಗೊಳಿಸಬೇಕಾಗಿದೆ. ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳಿಗೆ ಹೊಸ ಚಾಲನೆ ಕೊಟ್ಟು' ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಸೇರಿ ರಾಜ್ಯದ ರಾಜಕೀಯದಲ್ಲಿ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸುವಂತಾಗಿ, ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಹೊಸ ಚಾಲನೆ ಪಡೆಯುವಂತೆಯೂ, ಸಿ.ಪಿ.ಐ.(ಎಂ) ಬಲಿಷ್ಟ ರಾಜಕೀಯ ಶಕ್ತಿಯಾಗಿ ಬೆಳೆದು ಬರುವಂತೆಯೂ ಕಾರ್ಯ ರೂಪಿಸಿಕೊಳ್ಳಬೇಕಾಗಿದೆ. ಕಾಂಗ್ರೆಸ್ ಮತ್ತು ಜನತಾ ಪಕ್ಷಗಳೊಳಗೆ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡ ಹೆಚ್ಚಾಗುತ್ತಿರುವುದರಿಂದ, ಆದರಿಂದಾಗಿ ಕರ್ನಾಟಕದ ಅಭಿವೃದ್ಧಿ ಕುಂಠಿತಗೊಂಡು ಸಾಮಾನ್ಯ ಜನರು ಎದುರಿಸುತ್ತಿರುವ ಸಮಸ್ಯೆಗಳು ಪರಿಹಾರ ಕಾಣದಂತಾಗಿ, ಕಾರ್ಮಿಕ, ರೈತ, ವಿದ್ಯಾರ್ಥಿ, ಯುವ ಜನತೆ ಹೋರಾಟದ ಹಾದಿ ಹಿಡಿದಿರುವಾಗ ಇನ್ನು ಹದಿನೈದು ಹದಿನಾರು ತಿಂಗಳೊಳಗೆ ಚುನಾವಣೆ ಎದುರಿಸಬೇಕಾಗಿ ಬರುವುದರಿಂದ ನಮ್ಮ ಪಕ್ಷದ ಸಂಘಟನೆಯಲ್ಲಿ ಕಾರ್ಯಾಚರಣೆಯಲ್ಲಿ, ಪ್ರಚಾರ-ಪ್ರಕ್ಷೋಭೆಯಲ್ಲಿ ಬಹಳಷ್ಟು ಬದಲಾವಣೆ ಆಗಬೇಕಾಗಿದೆ. ಚುನಾವಣೆ ಕೂಡ ನಮ್ಮ ಹೋರಾಟದ ಅಂಗವಾಗಿರುವುದರಿಂದ ಅದನ್ನು ಕಡೆಗಣಿಸುವಂತಿಲ್ಲ. 12 ನೆಯ ಸಮ್ಮೇಳನದ ವರದಿಯಲ್ಲಿ ''ಚುನಾವಣೆಗಳು ಪ್ರಕಟವಾದ ನಂತರ ಮಾತ್ರ ನಮ್ಮ ಘಟಕಗಳು ಈ ಬಗ್ಗೆ ನಿರ್ದಿಷ್ಟ ಆಲೋಚನೆಗೆ, ತಯಾರಿಗೆ ಇಳಿಯುವ ಕ್ರಮ ಹೋಗಲೇಬೇಕು ಎಂಬುದೇ ಈ ಎಲ್ಲಾ ಚುನಾವಣೆಗಳ ಮುಖ್ಯಪಾಠ ಎಂದಿದೆ.

ಸಮ್ಮೇಳನವಾದ ಎರಡೇ ತಿಂಗಳಲ್ಲಿ ನಗರಸಭೆ-ವಿಧಾನಸಭೆ ಚುನಾವಣೆ ಅನಂತರ ಲೋಕಸಭೆ ಚುನಾವಣೆ ಎದುರಿಸಬೇಕಾಗಿರುವುದರಿಂದ ಹೋದಸಮ್ಮೇಳ ತೋರಿಸಿದ ಎಚ್ಚರಿಕೆಯನ್ನು ತೀವ್ರ ಗಮನಿಸುವುದು ಅಗತ್ಯ. ಯಾಕೆಂದರೆ ಹೋದ ಸಮ್ಮೇಳನದ ನಂತರ ನಡೆದ ಜಿಲ್ಲಾ-ಪರಿಷತ್ ಮಂಡಲ ಪಂಚಾಯತ್ ಚುನಾವಣೆಯ ಸಮಯದಲ್ಲಿ 12ನೆಯ ಸಮ್ಮೇಳನದ ಎಚ್ಚರಿಕೆಯನ್ನು ನಾವು ಗಮನಿಸದ ಕಾರಣ ಹೇಳಿಕೊಳ್ಳುವಂಥ ಜಯಗಳಿಸಲು ಸಾಧ್ಯವಾಗಿಲ್ಲವೆಂಬುದನ್ನು ಗಮನಿಸಿ, ಆ ತಪ್ಪನ್ನು ಯಾವ ರೀತಿ ತಿದ್ದಿಕೊಂಡು ಮುಂಬರುವ ಚುನಾವಣೆಯ ಸಿದ್ಧತೆ ಯಾವ ರೀತಿಯಲ್ಲಿ ನಡೆಸಬೇಕೆಂಬ ವಿಷಯದ ಕುರಿತು 13 ನೇ ಸಮ್ಮೇಳನದಲ್ಲಿ ಚರ್ಚಿಸಿ ಕಾರ್ಯ ರೂಪಿಸುವುದು ಅತ್ಯಗತ್ಯ.

ಮಾನನಷ್ಟ ಮಸೂದೆಗೆ ವ್ಯಾಪಕ ಪ್ರತಿಭಟನೆ

(1ನೇ ಪುಟದಿಂದ)

ನೋಡಬೇಕು. ಹಿಂದೆಂದೂ ತಪ್ಪಿತಸ್ಥರು ಮತ್ತು ಅಧಿಕಾರಸ್ಥರ ನಡುವೆ ಇಂತಹ ನಿಕಟ ಬಾಂಧವ್ಯವಿರಲಿಲ್ಲ. ಹಿಂದೆಂದೂ ಹೀಗೆ ಅತ್ಯುನ್ನತ ವಲಯದಲ್ಲಿನ ಹಣಕಾಸು ಹಗರಣಗಳು ದೇಶವನ್ನು ಕಲ್ಲಣಗೊಳಿಸಿರಲಿಲ್ಲ. ಈ ಎಲ್ಲಾ ಸತ್ಯಗಳನ್ನು ಜನರಿಗೆ ತಿಳಿಸಿದ್ದು ಭಾರತದ ಪತ್ರಿಕಾರಂಗ. ತನ್ನ ಸ್ವಾತಂತ್ರ್ಯವನ್ನು ಜನತೆಯ ಹಿತಾಸಕ್ತಿಗಳಿಗಾಗಿ ಬಳಸಿದ ಪತ್ರಿಕಾರಂಗದ ಮೇಲೆ ಹಲ್ಲೆಯೇ ಈ ಮಸೂದೆ.

ವಾಸ್ತವವಾಗಿ ಉನ್ನತಸ್ಥಾನಗಳಲ್ಲಿ ಭ್ರಷ್ಟಾಚಾರ, ಅಧಿಕಾರಶಾಹೀ ದರ್ಪ, ಪೋಲೀಸ್-ಮಾಫಿಯಾ ಗುಂಪಿನ ನಡುವೆ ಮೈತ್ರಿ ಮುಂತಾದುವುಗಳನ್ನು ಬಯಲಿಗೆಳೆಯುವ ಪತ್ರಿಕೆಯ ಸ್ವಾತಂತ್ರ್ಯವನ್ನು ರಕ್ಷಿಸಲೆಂದೇ ಒಂದು ಮಸೂದೆ ಬೇಕಿತ್ತು. ಏಕೆಂದರೆ ಇಂತಹ ಉತ್ತಮ ಜನಪರ ಕೆಲಸಗಳನ್ನು ಮಾಡುತ್ತಿರುವ ಪತ್ರಕರ್ತರ ಮೇಲೆ ಬೆದರಿಕೆ ಹಾಕಲಾಗುತ್ತಿದೆ. ವಿಶೇಷವಾಗಿ ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ಒರಿಸ್ಸಾ ಮತ್ತು ಉತ್ತರ ಪ್ರದೇಶದಲ್ಲಿ ಇಂತಹ ಪತ್ರಕರ್ತರ ಕೊಲೆಗಳೂ ನಡೆದಿವೆ. ಆದರೆ ಕಾಂಗ್ರೆಸ್ (ಐ) ಸರಕಾರದಿಂದ ಇಂತಹ ಒಂದು ರಕ್ಷಣೆ ನಿರೀಕ್ಷಿಸಲು ಸಾಧ್ಯವೇ?

ಸಿ.ಪಿ.ಐ. (ಎಂ)ನ ಪಾಲಿಟ್‌ಬ್ಯುರೋ ಈ ಮಸೂದೆಯನ್ನು ಖಂಡಿಸಿ ಆಗಸ್ಟ್ 31ರಂದು ನೀಡಿದ ಹೇಳಿಕೆಯಲ್ಲಿ ಅಂದಿರುವಂತೆ ಲೋಕಸಭೆಯಲ್ಲಿ ಇದನ್ನು ಮಂಡಿಸಿ; ವಿರೋಧ ಪಕ್ಷಗಳ ಸದಸ್ಯರ ನ್ಯಾಯಬದ್ಧ ಆತಂಕಗಳನ್ನು ಬದಿಗೊತ್ತಿ ಅದನ್ನು ತರಾತುರಿಯಲ್ಲಿ ಪಾಸು ಮಾಡಿಸಿಕೊಂಡ ರೀತಿಯನ್ನು ನೋಡಿದರೆ ಈ ಮಸೂದೆಯ ನಿಜವಾದ ಪರಿಣಾಮಗಳು ಜನರಿಗೆ ತಿಳಿಯಬಹುದೆಂಬ ಭಯ ಕಾಂಗ್ರೆಸ್ (ಐ) ಗಿತ್ತೆಂದು ಸ್ಪಷ್ಟವಾಗುತ್ತದೆ. ಈ ಮಸೂದೆ ಶಾಸನವಾದರೆ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ತೀವ್ರ ದುಷ್ಪರಿಣಾಮ ಬೀರಬಹುದು; ಅದು ಸರ್ವಾಧಿಕಾರೀ ವ್ಯವಸ್ಥೆ ಹೇರುವತ್ತ ಮತ್ತೊಂದು ಹೆಜ್ಜೆಯಾಗುತ್ತದೆ. ಆದ್ದರಿಂದ ಪ್ರಜಾಪ್ರಭುತ್ವದ ರಕ್ಷಣೆ ಬಯಸುವ ಶಕ್ತಿಗಳು ಹಾಗೂ ರಾಜಕೀಯ ಪಕ್ಷಗಳು ಇದನ್ನೂ ಬಲವಾಗಿ ವಿರೋಧಿಸಬೇಕೆಂದು ಪಾಲಿಟ್‌ಬ್ಯೂರೋ ಕರೆನೀಡಿತ್ತು.

ಜನರ ಸ್ವಾತಂತ್ರ್ಯದ ಮೇಲೆ ಇಂತಹ ಹಲ್ಲೆಗಳಿಗೆ ಪೂರಕವಾಗಿ ಅವರ ವಿರುದ್ಧ ನೇರ ಭಯೋತ್ಪಾದನೆ ಕೂಡಾ ನಡೆಯುತ್ತದೆ. ತ್ರಿಪುರಾ ಇದಕ್ಕೆ ಉದಾಹರಣೆ. ತೆಲುಗುದೇಶಂ, ಜನತಾ, ಲೋಕದಳ ಹಾಗೂ ಎಡಪಕ್ಷಗಳ ಸಂಸತ್ ಸದಸ್ಯರ ನಿಯೋಗವೊಂದು ತ್ರಿಪುರಾ ಕಾಂಗ್ರೆಸ್ (ಐ) ಮಂತ್ರಿಮಂಡಳದ ಭಯೋತ್ಪಾದಕತೆಯ ಪುರಾವೆಯನ್ನು ಕಣ್ಣಾರೆ ಕಂಡಿತು.

ಎಡಶಕ್ತಿಗಳ ಮೇಲೆ ಇಂತಹ ಹಲ್ಲೆ ಹಾಗೂ ಸಮಾಜಘಾತಕ ಶಕ್ತಿಗಳ ಬಳಕೆಯನ್ನು ಪಶ್ಚಿಮಬಂಗಾಳ ಹಾಗೂ ಕೇರಳದಲ್ಲೂ ಹಾಕಿರಬಹುದು.

ಕಾಂಗ್ರೆಸ್ಸೇತರ ರಾಜ್ಯ ಸರಕಾರಗಳ ವಿರುದ್ಧ ಪಕ್ಷಪಾತ ಬಿಕ್ಕಟ್ಟಿನ ಅಂಚು ತಲುಪುತ್ತಿದೆ. ಕಳೆದವಾರ ದೇಶದ ರಾಜಧಾನಿಯಲ್ಲಿ ಇದನ್ನು ಸೂಚಿಸುವ ಎರಡು ಧರಣಿ ಕಾರ್ಯಕ್ರಮಗಳು ನಡೆದಿರುವುದನ್ನು 'ಐಕ್ಯರಂಗ'ದ ಓದುಗರು ತಿಳಿದಿದ್ದಾರೆ.

ಕೇಂದ್ರ ಕೃಷಿಮಂತ್ರಿ, ಭಜನ್‌ಲಾಲ್ ಪ್ರಕಾರ ಕಾಂಗ್ರೆಸ್ಸೇತರ ರಾಜ್ಯಸರ್ಕಾರಗಳು ಕೇಂದ್ರ ಸರ್ಕಾರದ ಗೇಣಿದಾರರು! ಗೇಣಿದಾರರು ಮತ್ತು ಭೂಮಾಲಕರ ನಡುವಿನ ಸಂಬಂಧಗಳಾಚೆಗೆ ಏನೂ ತಿಳಿಯದ ಇಂತಹ ಅಯೋಗ್ಯಮಂತ್ರಿಗಳೇ ತುಂಬಿರುವ ರಾಜೀವ್ ಸರ್ಕಾರದ ನಿರ್ಲಕ್ಷ್ಯ ಹಾಗೂ ಅನೀತಿಯುತ ನಿಲುವು ಹೆಚ್ಚೆಚ್ಚು ಪ್ರಕಟಗೊಳ್ಳುತ್ತಿದೆ.

ಇಂತಹ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳ ವಿರುದ್ಧ ಕಾಂಗ್ರೆಸ್ಸಿನ ಧಾಳಿಗಳನ್ನು ವಿಫಲಗೊಳಿಸಲು ತ್ವರಿತ ಕ್ರಮಗಳು ಅಗತ್ಯ. ಇನ್ನೂ ತಮ್ಮೊಳಗಿನ ಕಚ್ಚಾಟದಲ್ಲೇ ವ್ಯಸ್ತವಾಗಿರುವ ವಿರೋಧ ಪಕ್ಷಗಳ ಮುಖಂಡರು ಪರಿಸ್ಥಿತಿಯ ಗಂಭೀರತೆಯನ್ನರಿತು ಜಾತ್ಯಾತೀತ ವಿರೋಧ ಪಕ್ಷಗಳು ಮತ್ತು ಎಡಶಕ್ತಿಗಳು ಜನಸಮೂಹಗಳನ್ನು ಒಟ್ಟುಗೂಡಿಸಬೇಕಾದ ಸಮಯವಿದು,

ಸಿ. ಪಿ. ಐ. (ಎಂ) ನ ಸಮ್ಮೇಳನಗಳು

ಸಿರ್ಸಿ ನಗರ

ಪಕ್ಷದ ಉತ್ತರ ಕನ್ನಡ ಜಿಲ್ಲೆಯ ಶಿರ್ಶಿ ನಗರ ಸಮಿತಿ ಸಮ್ಮೇಳನ ಆಗಸ್ಟ್ 19 ರಂದು ಕಾ॥ ಧಾರೇಶ್ವರ ಅಧ್ಯಕ್ಷತೆಯಲ್ಲಿ ಜರುಗಿತು. ಪಕ್ಷದ ಮುಖಂಡರಾದ ಕಾ॥ ವಿ.ಎನ್. ಹಳಕಟ್ಟಿ, ಎಂ.ವಿ. ಪುಲಕರ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು.

ಪಿ.ಜಿ. ಮಶಾಲ್ದಿಯವರು ಪ್ರಸಕ್ತ ರಾಜಕೀಯ ಪರಿಸ್ಥಿತಿ ಕುರಿತು ಮಾತನಾಡಿದರು. ಧಾರವಾಡ ಜಿಲ್ಲಾ ಸಮ್ಮೇಳನಕ್ಕೆ ಕಾ॥ ಧಾರೇಶ್ವರ, ಬಂಗಾರೇಶ್ವರ, ಕೆ. ಗೌಡರವರನ್ನು ಆಯ್ಕೆ ಮಾಡಲಾಯಿತು. ಸೆ. 5ರಂದು ಶಿರ್ಶಿ ತಾಲೋಕು ಕಛೇರಿ ಪಿಕೆಟಿಂಗ್ ನಡೆಸುವ ರೈತ ಸಂಘದ ಚಳುವಳಿ ಬೆಂಬಲಿಸಿ ಠರಾವು ಅಂಗೀಕರಿಸಲಾಯಿತು.

ಬೆಂಗಳೂರು

ಬೆಂಗಳೂರಿನ ಹೆಮ್ಮಿಗೆಪುರ ಶಾಖೆ ಪಕ್ಷದ ಸಮ್ಮೇಳನವು ಆಗಸ್ಟ್ 28ರಂದು ನೆರವೇರಿತು. ಜಿಲ್ಲಾ ಸಮಿತಿ ಮುಖಂಡರಾದ ಕಾ॥ ಪಿ. ಜಗನ್ನಾಥ್. ಲಕ್ಕಣ್ಣನವರು ಹಾಜರಿದ್ದರು. ಕಾರ್ಯದರ್ಶಿಯವರು ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆದು ಹಲವು ಸಲಹೆ ಸೂಚನೆ ತಿದ್ದುಪಡಿಯೊಂದಿಗೆ ಅಂಗೀಕರಿಸಲಾಯಿತು. ಸ್ಥಳೀಯ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಆಧಾರದಲ್ಲಿ ಹೋರಾಟಗಳನ್ನು ರೂಪಿಸಿ ಪಕ್ಷದ ಪ್ರಭಾವ ಬೆಳೆಸಬೇಕೆಂದು ತೀರ್ಮಾನಿಸಲಾಯಿತು. ಶಾಖೆಗೆ ಕಾ॥ ವೆಂಕಟಾಚಲಯ್ಯನವರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು. ಕಾ॥ ಚನ್ನಪ್ಪ, ವೆಂಕಟೇಶ, ವೆಂಕಟಾಚಲಯ್ಯನವರನ್ನು ಜಿಲ್ಲಾ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನಾಗಿ ಆರಿಸಲಾಯಿತು.

ಕುಂದಾಪುರ

ಕುಂದಾಪುರ: ತಾಲೋಕಿನ ಬಳ್ಕೂರು ಬಸ್ರೂರು ಕಾಲೋನಿ, ಮಾರ್ಗೋಳಿ ಮೆಡ್ಡಿಗಳಲ್ಲಿ ರೈತ-ಕೃಷಿ ಕೂಲಿಗಾರರ ಸಭೆಗಳನ್ನು ನಡೆಸಲಾಯಿತು. ಈ ಸಭೆಯಲ್ಲಿ ತಾಲೋಕು ರೈತ ಸಂಘದ ಕಾರ್ಯದರ್ಶಿ ಕಾ॥ ಯು. ದಾಸಭಂಡಾರಿಯವರು ಭಾಗವಹಿಸಿ ಸೆಪ್ಟೆಂಬರ್ ರೈತ ಚಳುವಳಿಯ ಕುರಿತು ವಿವರಣೆ ನೀಡಿದರು. ಕಾಲೋನಿ ಜನರ ವಸತಿಗಳಿಗೆ ಹಕ್ಕು ಪತ್ರ ಹಾಗೂ ಅಗತ್ಯಸೌಲಭ್ಯಗಳನ್ನೂ ಒದಗಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಸ್ವೀಕರಿಸಲಾಯಿತು.

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street, Sulthanpet, Bangalore-560053. Editorial and Managerial Office: L-56, K. V. Temple Street, Sulthanpet, B-53, Phone: 75331. Editor: P. Ramachadra Rao, Managing Editor: N. K. Upadhayaya. Janagere Mudrana, Bangalore-21.